ಶಿವಾನುಭವ ಗ್ರಂಥಮಾಲಾ ನಂ॥ ೨೩

# ಆದಯ್ಯನ-ವಚನಗಳು

ಸಂಪಾದಕರು

ರಾ॥ ಸಾ॥ ಫ.ಗು.ಹಳಕಟ್ಟಿ

ಬಿ.ಎ.ಎಲ್.ಎಲ್.ಬಿ.

ವಿಜಾಪುರ

೧೯೩೧

820
544

ಶಿವಾನುಭವ ಗ್ರಂಥಮಾಲಾ ನಂ॥ ೨೩

# ಆದಯ್ಯನ ವಚನಗಳು.

ಸಂಪಾದಕರು

**ರಾ॥ ಸಾ॥ ಫ. ಗು. ಹಳಕಟ್ಟಿ.**

ಬಿ. ಏ. ಎಲ್. ಎಲ್. ಬಿ. ವಿಜಾಪುರ.

ಕ್ರಮಾಂಕ 5M4
ಶಿವಬಸವ ನಗರ
ಬೆಳಗಾವಿ ೧೦

ಬೆಲೆ [illegible]

(ಈ ಗ್ರಂಥದ ಸ್ವಾಮಿತ್ವವು ಕಾದಿಡಲ್ಪಟ್ಟಿದೆ.)

೧೯೩೧

82
544

ಇದನ್ನು ವಿಜಾಪುರದಲ್ಲಿ
ರಾ॥ ಸಾ॥ ಫ. ಗು. ಹಳಕಟ್ಟಿ ಇವರು ತಮ್ಮ
"ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿ" ನಲ್ಲಿ ಮುದ್ರಿಸಿದರು
ಮತ್ತು ಅವರು ವಿಜಾಪುರದಲ್ಲಿ
ಉಪಲಿಬುರುಜದ ಹತ್ತರ ತಮ್ಮ ೧೬೦ (ಅ) ನೇ ಮನೆಯಲ್ಲಿ
ಪ್ರಕಟಿಸಿದರು.

544

ಲಿಂಗಾಯತ ಸಂಶೋಧನ ... ಕ್ರಮಾಂಕ ... ಶಿವಬಸವ ನಗರ ಬೆಳಗಾವಿ ... ನಾಗನೂರ ಶ್ರೀ ರುದ್ರಾಕ್ಷಿಮಠ

# ಪ್ರಸ್ತಾವನೆ.

ಆವಯ್ಯನು ಪುರಾತನ ವೀರಶೈವ ಶಿವಶರಣರಲ್ಲಿ ಪ್ರಸಿದ್ಧನಾಗಿದ್ದು, ಆತನ ವಚನಗಳನ್ನು ನಾವು ಈಗ ವಾಚಕ[illegible] ಮುಂದೆ ಇಡುತ್ತೇವೆ. ಈ ವಚನಗಳು ಬೇರೆ ಪುರಾತನ ವಚನಗಳಂತೆಯೇ ಒತ್ತಟ್ಟಿಗೆ ಸಮಗ್ರವಾಗಿ ಎಲ್ಲಿಯೂ ದೊರಕುವದಿಲ್ಲ. ಇವು ಅನೇಕ ವಚನ ಸಂಗ್ರಹಗಳಲ್ಲಿ ಅಲ್ಲಲ್ಲಿ ಉಪಲಬ್ಧವಾಗಿವೆ. ಇಂಥವುಗಳನ್ನು ನಾವು ಬೇರೆಯಾಗಿ ಆರಿಸಿ ತೆಗೆದು ಈ ಗ್ರಂಥವನ್ನು ಸಿದ್ಧಪಡಿಸಿರುತ್ತೇವೆ. ಪುರಾತನ ಕಾಲದಲ್ಲಿದ್ದ ಶಿವಶರಣರು ತಮಗೆ ಸ್ಫೂರ್ತಿಯುತ್ಪನ್ನವಾದಾಗ್ಗೆ ತಮ್ಮ ವಿಚಾರಗಳನ್ನು ಈ ಪ್ರಕಾರ ವಚನರೂಪವಾಗಿ ಬರೆದಿಡುವ ಪದ್ಧತಿ ಇತ್ತೆಂದು ತೋರುತ್ತದೆ. ಅವರು ಅವುಗಳನ್ನು ಗ್ರಂಥರೂಪವಾಗಿ ಬರೆದಿಟ್ಟಂತೆ ತೋರುವದಿಲ್ಲ. ಆದರೆ ಹಿಂದುಗಡೆ ಅವರ ಅನುಯಾಯಿಗಳು ಅಥವಾ ಸಂಬಂಧಿಗಳು ಅವುಗಳನ್ನು ತ[illegible] ದೊರೆವ ಹಾಗೆ ಬರೆದಿಟ್ಟಿರಬಹುದು. ಆದರೆ ಇವುಗಳನ್ನು ಸಂಗ್ರಹಿಸಿ ಗ್ರಂಥರೂಪವಾಗಿ ವ್ಯವಸ್ಥಿತ ರೀತಿಯಿಂದ ಪ್ರಸಿದ್ಧಿಸುವ ಕಾರ್ಯವು ಬಹುಕಾಲದಿಂದಲೂ ಜರಗಿರುವದಿಲ್ಲ. ಆದ್ದರಿಂದ ಅವುಗಳಲ್ಲಿ ಅನೇಕವುಗಳು ಈ ಅವಧಿಯಲ್ಲಿ ನಷ್ಟವಾಗುವದು ಸಹಜಿಕವೇ ಇರುತ್ತದೆ. ಆದರೆ ಈಗ ದೊರೆದಷ್ಟವುಗಳನ್ನು ಕನ್ನಡಿಗರು ಅದರಲ್ಲಿ ವಿಶೇಷವಾಗಿ ವೀರಶೈವರು ಸಂಗ್ರಹಿಸಿ ರಕ್ಷಿಸುವ ಭಾರವು ಅವರ ಮೇಲೆ ಬಹಳವಿರುತ್ತದೆ. ಇದಕ್ಕೆ ಅವರು ವಿಮುಖರಾದ ಪಕ್ಷದಲ್ಲಿ ಕನ್ನಡಭಾಷೆ ಮತ್ತು ಕನ್ನಡಸಂಸ್ಕೃತಿಯ ಮೇಲೆ ಅತ್ಯಂತ ಮಹತ್ವದ ಪರಿಣಾಮವನ್ನುಂಟು ಮಾಡಿದ ಈ ವಾಙ್ಮಯವೇ ನಷ್ಟವಾಗುವ ಸಂಭವವಿದೆ.

ಆದಯ್ಯನ ಈಗಿನ ವಚನ ಗ್ರಂಥವನ್ನು ನಾವು ಮೇಲೆ ಹೇಳಿದಂತೆ ಅಲ್ಲಲ್ಲಿ ದೊರೆದವುಗಳನ್ನು ಒತ್ತಟ್ಟಿಗೆ ಕ್ರೋಡೀಕರಿಸಿ ಸಿದ್ಧಪಡಿಸಿದ್ದು ಇರುತ್ತದೆ. ಆದರೆ ವೀರಶೈವ ಗ್ರಂಥಗಳು ಇನ್ನೂ ಅಸಂಶೋಧಿತ ರೀತಿಯಲ್ಲಿ ಇರುವದರಿಂದ ಈತನ ಸ್ವತಂತ್ರ ವಚನಗ್ರಂಥವು ಬೇರೆ ಕಡೆಗೆ ಎಲ್ಲಾದರೂ ಇದ್ದರೂ ಇರಬಹುದು. ಇದು [illegible]ಗಾದರೂ [illegible]ದ್ದಾ

ದರೆ, ಅವನ್ನು ಅವರು ಅವಶ್ಯವಾಗಿ ನಮ್ಮ ಕಡೆಗೆ ಕಳುಹಿಸಬೇಕೆಂದು
ನಮ್ಮ ವಿನಂತಿ ಇದೆ. ಅಂದರೆ ಅದರೊಳಗಿನ ವಚನಗಳನ್ನೂ ಮುಂದಿನ
ಆವೃತ್ತಿಯಲ್ಲಿ ಈ ಗ್ರಂಥದಲ್ಲಿ ಸಮಾವೇಶ ಮಾಡಲಿಕ್ಕೆ ನಮಗೆ ಬಹಳ
ಅನುಕೂಲವಾಗುವದು.

ಆದಯ್ಯನು ನಾವು ಮೇಲೆ ವಿವರಿಸಿದಂತೆ ವೀರಶೈವ ಪುರಾತನ
ಶಿವಶರಣರಲ್ಲಿ ಬಹು ಪ್ರಸಿದ್ಧನಾದವನು. ಇವನ ಚರಿತ್ರೆಯನ್ನು ಕರ್ನಾ
ಟಕದ ಬಹು ಪ್ರಸಿದ್ಧ ಕವಿಯಾದ ರಾಘವಾಂಕನು ತನ್ನ "ಸೋಮ
ನಾಥ ಪುರಾಣ" ದಲ್ಲಿ ಬಹು ವಿಸ್ತಾರವಾಗಿ ವಾರ್ಧಿಕಷಟ್ಪದಿಯಲ್ಲಿ ನಿರೂ
ಪಿಸಿದ್ದಾನೆ. ಈ ಗ್ರಂಥದಲ್ಲಿ ಆರು ಸಂಧಿಗಳು ಇದ್ದು ಪದ್ಯಗಳು ೫೬೫
ಇವೆ. ಈ ಕಾವ್ಯವು ರಾಘವಾಂಕನ ಕಾವ್ಯಗಳಂತೆ ಬಹು ಬಂಧುರವಾ
ದದ್ದದೆ. ಈ ಗ್ರಂಥವನ್ನು ಅಥಣಿಯ ರಾ। ರಾ॥ ಜೋತೆಪ್ಪಗೌಡ ಶಿದ್ದನ
ಗೌಡ ಪಾಟೀಲ ಯಲಿಹಡಲಗಿ ಇವರು ಬಹು ಶ್ರಮಪಟ್ಟು ೧೯೧೧
ಇಸ್ವಿಯಲ್ಲಿ ಪ್ರಸಿದ್ಧಿಸಿದ್ದಾರೆ. ಮತ್ತು ಕೈ. ವಾ. ಬಿ. ಬಸವಾರಾಧ್ಯ ಬಿ.
ಎ. ಬಿ. ಎಲ್. ಈ ವಿದ್ವಾಂಸರು ಪರಿಶೋಧಿಸಿರುವದರಿಂದ ಗ್ರಂಥವು
ಬಹು ಶುದ್ಧವಾಗಿ ಅಚ್ಚುಹಾಕಲ್ಪಟ್ಟಿದೆ. ಈ ಕಾರ್ಯವನ್ನು ಮಾಡಿದ್ದಕ್ಕೆ
ಮೇಲ್ಕಂಡ ಉಭಯ ಮಹನೀಯರೂ ಕನ್ನಡಿಗರಿಂದ ಸ್ತೋತ್ರಾರ್ಹರಾಗಿ
ರುವರು. ಆದಯ್ಯನ ಚರಿತ್ರೆಯು ಈ ಗ್ರಂಥದಲ್ಲಷ್ಟೇ ಅಲ್ಲ, ಶರಣರ ಚರಿ
ತ್ರೆಗಳುಳ್ಳ ಪ್ರತಿಯೊಂದು ಗ್ರಂಥದಲ್ಲಿಯೂ ದೊರಕುವದುಂಟು. ರಾಘ
ವಾಂಕನ ಕಾವ್ಯದಿಂಧ ತಿಳಿಯುವದೇನೆಂದರೆ:—

ಆದಯ್ಯನ ಮೂಲಸ್ಥಾನವು ಗುಜರಾಥ ದೇಶದಲ್ಲಿರುವ ದ್ವಾರ
ಕಾನಗರವು. ಈತನ ತಂದೆಯ ಹೆಸರು ಘೋರದತ್ತ, ತಾಯಿಯ ಹೆಸರು
ಪುಣ್ಯವತಿ. ಇವರು ಸೋಮನಾಥನ ಉಪಾಸಕರಾಗಿ ಶಿವಭಕ್ತಿಯಿಂದ
ಇರುತ್ತಿರಲು, ಇವರ ಮಗನಾದ ಆದಯ್ಯನು ವ್ಯಾಪಾರಕ್ಕೋಸ್ಕರ
ಕರ್ನಾಟಕ ದೇಶದಲ್ಲಿ ಹುಲಿಗೆರೆ ಅಂದರೆ ಈಗಿನ ಲಕ್ಷ್ಮೇಶ್ವರಕ್ಕೆ ಬಂದನು.
ಆಗ ಅಲ್ಲಿ ಚಂದ್ರಾದಿತ್ಯನೆಂಬ ಅರಸನು ರಾಜ್ಯವಾಳುತ್ತಿದ್ದನು. ಅವನು
ಜೈನ ಧರ್ಮೀಯನಾಗಿದ್ದು ಪಟ್ಟಣದಲ್ಲೆಲ್ಲ ಜೈನರೇ ನಿಬಿಡವಾಗಿ ವಾಸಿ
ಸುತ್ತಿದ್ದರು. ಆದಯ್ಯನು ಪಟ್ಟಣದಲ್ಲಿ ಹೋಗಿ ಸಂಚರಿಸುತ್ತಿರುವಾಗ
ಪಾರಿಸಶೆಟ್ಟಿ ಎಂಬ ಜೈನ ವರ್ತಕನ ಮಗಳಾದ ಪದ್ಮಾವತಿ ಎಂಬ
ವಳನ್ನು ಕಾಣಲು, ಉಭಯತರು ಪರಸ್ಪರ ಮೋಹವುಳ್ಳವರಾಗಲು,



ಪದ್ಮಾವತಿಯು ಶೈವ ದೀಕ್ಷೆಯನ್ನು ಹೊಂದಿ ಆದಯ್ಯನನ್ನು ವರಿಸಿದಳು.
ಪದ್ಮಾವತಿಯು ಪಾರಿಸಶೆಟ್ಟಿಗೆ ಒಬ್ಬಳೇ ಮಗಳಾದ್ದರಿಂದ ಅವನು ತನ್ನ
ಅಳಿಯನನ್ನು ಮನೆಯಲ್ಲಿಯೇ ಸ್ಥಳಕೊಟ್ಟು ಇಟ್ಟುಕೊಂಡನು. ಈ ಪ್ರಕಾರ
ಆದಯ್ಯನೂ ಪದ್ಮಾವತಿಯೂ ಪುಲಗೆರೆಯಲ್ಲಿ ವಾಸಮಾಡುತ್ತಿರಲು,
ಒಂದು ದಿನ ಕೆಲ ಶಿವಭಕ್ತರು ಪಟ್ಟಣದ ಹೊರ ಉದ್ಯಾನದಲ್ಲಿ ಬಂದಿರಲು
ಅವರನ್ನು ಆದಯ್ಯನು ಕಂಡು ಅವರಿಗೆ ಊಟಕ್ಕೆ ಹೇಳಿ ಅದಕ್ಕೆ ಸನ್ನಾಹ
ಮಾಡಲು ಹೇಳಲು ಮನೆಗೆ ಬಂದು ಹಾಗೆ ತನ್ನ ಸತಿಗೆ ಹೇಳಿ, ತಾನು
ಆ ಶಿವಭಕ್ತರಿದ್ದೆಡೆಗೆ ಬಂದನು. ಆದರೆ ಅಷ್ಟರಲ್ಲಿ ಮನೆಯಲ್ಲಿ ಕೆಲ
ಶ್ರವಣ ಅತಿಥಿಗಳು ಪಾರಿಸಶೆಟ್ಟಿಯ ಗೃಹಕ್ಕೆ ಅಕಸ್ಮಾತ್ತಾಗಿ ಬರಲು,
ಅವನ ಹೆಂಡತಿಯು ಶಿವಭಕ್ತರಿಗಾಗಿ ತನ್ನ ಮಗಳು ಸಿದ್ಧಮಾಡಿಟ್ಟಿದ್ದ
ಅಡಿಗೆಯನ್ನೆಲ್ಲ ಬಲವಂತವಾಗಿ ಕಸೆದುಕೊಂಡು ಹೋಗಿ ಆ ಜೈನ ಅತಿಥಿ
ಗಳಿಗೆ ಭೋಜನ ಮಾಡಿಸಿದಳು. ಅಷ್ಟರಲ್ಲಿ ಶಿವಭಕ್ತರು ಮನೆಗೆ ಊಟಕ್ಕೆ
ಬರಲು ಮಾಡಿಟ್ಟಿದ್ದ ಅಡಿಗೆಯು ಇಲ್ಲದ್ದರಿಂದ ಅವರು ಅನ್ನವಿಲ್ಲದೆ
ಹಿಂದಿರುಗಬೇಕಾಯಿತು. ಮತ್ತು ಅವರು ರಾತ್ರಿಯಲ್ಲಿ ಊಟಮಾ
ಡಲು ಒಪ್ಪಲಿಲ್ಲ ಆಗ ಆದಯ್ಯನು ಅತ್ಯಂತವಾಗಿ ಮನ ನೊಂದು
ಪುಲಗೆರೆಯಲ್ಲಿದ್ದ ಜೈನರ ಪ್ರಸಿದ್ಧ ಜಿನದೇವಾಲಯವಾದ ಸುರಹೊನ್ನೆ
ಬಸ್ತಿಯಲ್ಲಿ ತನ್ನ ಇಷ್ಟದೇವತೆಯಾದ ಸೌರಾಷ್ಟ್ರ ಸೋಮೇಶ್ವರನನ್ನು
ದ್ವಾರಕೆಯಿಂದ ಒಂದು ತಿಂಗಳಲ್ಲಿ ತಂದು ಸ್ಥಾಪಿಸುವೆನೆಂದು ಪ್ರತಿಜ್ಞೆ
ಮಾಡಿದನು. ಮತ್ತು ಆ ಪ್ರಕಾರ ಆದಯ್ಯನು ಲಕ್ಷ್ಮೇಶ್ವರದಿಂದ ಗುಜ
ರಾಥಕ್ಕೆ ಹೊರಟನು. ಅವನು ಮಾರ್ಗದಲ್ಲಿ ಅತ್ಯಂತ ಪ್ರಯಾಸಬಟ್ಟರೂ
ತನ್ನ ಅತುಲ ಶಿವಭಕ್ತಿಯಿಂದ ಅದನ್ನು ತಾಳಿದವನಾಗಿ ಪರಮಾತ್ಮನನ್ನು
ಸ್ಮರಿಸುತ್ತ ಮಾರ್ಗಕ್ರಮಣ ಮಾಡಿದನು. ಆದರೆ ಅವನು ಪ್ರತಿಜ್ಞೆ ಮಾಡಿದ
೧ ತಿಂಗಳಿಗೆ ೨ ದಿನಗಳು ಮಾತ್ರ ಉಳಿದವು. ಮತ್ತು ದ್ವಾರಿಕೆಯು ಬಹು
ದೂರ ಉಳಿಯಿತು. ಆಗ ಸೋಮನಾಥನು ಅವನ ಬಳಲಿಕೆಯನ್ನೂ ಭಕ್ತಿ
ವಿಶ್ವಾಸಗಳನ್ನೂ ಕಂಡು ಪ್ರೇಮಬಟ್ಟು ಅವನಿಗೆ ಪ್ರತ್ಯಕ್ಷನಾಗಿ ಹೇಳಿದ್ದೇನೆಂ
ದರೆ, "ನೀನು ಈ ಮಹಾವೃಕ್ಷದ ಅಡಿಯಲ್ಲಿ ವಿಶ್ರಮಿಸಿದರೆ ನಾನು ನಿನ್ನನ್ನು
ಹುಲಿಗೆರೆಯ ಬಡಗಣ ತಟಾಕದ ಏರಿಯಲ್ಲಿ ಬಿಡುವೆನು. ಮತ್ತು ನಾಳೆ
ಚೈತ್ರ ಶುದ್ಧ ಚತುರ್ದಶಿ ಸೋಮವಾರ ಮಧ್ಯರಾತ್ರಿಯಲ್ಲಿ ಆ ಸುರಹೊನ್ನೆ
ಬಸ್ತಿಯಲ್ಲಿ ನಾನು ನೆಲಿಸುವೆನು. ಆಗ ಆ ಬಸ್ತಿಯ ಬಾಗಿಲನ್ನು ತೆರೆಯಲಿಕ್ಕೆ

ಜೈನರಿಗೆ ಆಗದಿರಲು, ನೀನು ಆ ಬಾಗಿಲವನ್ನು ತೆಗೆಯಲಿಕ್ಕೆ ಸಮರ್ಥನಾಗುವಿ. ಬಾಗಿಲವನ್ನು ತೆರೆಯಲು ಜೈನರು ಜಿನದೇವತೆಗಳೆಲ್ಲ ಭಗ್ನವಾದುದನ್ನು ನೋಡಿ ನಿನ್ನ ಮೇಲೆ ಉರವಣಿಸಿ ಬರಲು ಅಲ್ಲಿರುವ ಇಬ್ಬರು ನಿನಗೆ ಸಹಾಯಕರಾಗುವರು. ಆಗ ಅಲ್ಲಿ ಜೈನರೊಡನೆ ಕಾಳಗವಾಗಲು ಜೈನರೆಲ್ಲರೂ ಹತರಾಗುವರು. ಮತ್ತು ಸುರಹೊನ್ನೆ ಬಸ್ತಿಯು ಶಿವದೇವಾಲಯವಾಗಿ ಸ್ಥಿರಪಡುವದು" ಎಂದು ಪರಮಾತ್ಮನು ಅರುಹಲು ಅದೇ ರೀತಿಯಾಗಿ ಆದಯ್ಯನು ಮರದಡಿಯಲ್ಲಿ ನಿದ್ದೆಹೊಗಲು ಅವನು ಲಕ್ಷ್ಮೇಶ್ವರಕ್ಕೆ ತಿರುಗಿಬರುವನು. ಅವನು ತಿರುಗಿ ಬಂದ ಬಳಿಕ ಮರುದಿನ ಪರಮಾತ್ಮನು ಹೇಳಿದಂತೆ ಸುರಹೊನ್ನೆ ಬಸ್ತಿಯ ಬಾಗಿಲವು ಏನುಮಾಡಿದರೂ ತೆರೆಯದೆ ಹೋಯಿತು. ಆಗ ಜೈನರು ಇದು ಆದಿಮಯ್ಯನ ಕೃತಕವಿರಬಹುದೆಂದು ಎಣಿಸಿ ಅವನನ್ನು ಕರೆತರಿಸಿ, ಕದವನ್ನು ತೆರೆ ಎಂದು ಅವನಿಗೆ ಹೇಳಲು ಅವನ ಹಸ್ತಸ್ಪರ್ಶದಿಂದ ಕದ ತೆರೆಯಲು ಆಗ ಒಳಗಿನ ಜಿನಮೂರ್ತಿಗಳೆಲ್ಲವು ಛಿನ್ನಭಿನ್ನವಾಗಿ ಒಳಗೆ ಶಿವಲಿಂಗವು ಸ್ಥಾಪಿತವಾದದ್ದು ತೋರಿಬಂದಿತು. ಆಗ ಜೈನರು ಕೋಪಾವಿಷ್ಟರಾಗಲು ಜೈನರಿಗೂ ಆದಯ್ಯನಿಗೂ ದೇವಾಲಯದ ಮುಂಭಾಗದಲ್ಲಿ ಕಾಳಗವೆಸಗಿತು. ಆಗ ಆದಯ್ಯನಿಗೆ ಇಬ್ಬರು ಪರಮಾತ್ಮ ಪ್ರೇಷಿತರಾದ ಭಟರು ಸಹಾಯಕರಾಗಲು ಜೈನಬಲವು ಮಡಿಯಿತು. ಈ ಪ್ರಕಾರ ದೇಶದಲ್ಲಿ ಸುಪ್ರಸಿದ್ಧವಾದ ಸುರಹೊನ್ನೆ ಬಸ್ತಿಯು ಸೋಮೇಶ್ವರ ದೇವಾಲಯವಾಯಿತು. ಮತ್ತು ಪಟ್ಟಣವೆಲ್ಲ ಶಿವಭಕ್ತಿಮಯವಾಯಿತು. ಈ ಪ್ರಕಾರ ರಾಘವಾಂಕನು ವರ್ಣಿಸಿದ ಆದಯ್ಯನ ಚರಿತ್ರೆ ಇರುತ್ತದೆ. ಎಲ್ಲ ಶಿವಶರಣರ ಚರಿತ್ರೆಗಳಲ್ಲಿಯೂ ಇದೇ ವಿಧದ ವೃತ್ತಾಂತವು ಕಂಡುಬರುತ್ತಿದ್ದು, ಇದನ್ನು ಹೆಚ್ಚಾಗಿ ತಿಳಿಯಲಪೇಕ್ಷಿಸುವವರು ರಾಘವಾಂಕನ ಮೂಲ ಗ್ರಂಥವನ್ನೇ ಓದಬೇಕೆಂದು ನಾವು ಸೂಚಿಸುತ್ತೇವೆ.

ಲಕ್ಷ್ಮೇಶ್ವರವು ಒಂದು ಕಾಲಕ್ಕೆ ಕರ್ನಾಟಕ ದೇಶದಲ್ಲಿ ಬಹು ಪ್ರಸಿದ್ಧ ಸ್ಥಾನವಾಗಿದ್ದದ್ದು ನಿರ್ವಿವಾದವು. ಮತ್ತು ಅಲ್ಲಿ ಅನೇಕ ಜೈನ ರಾಜರು ಆಳಿ ಜೈನ ಸಂಸ್ಕೃತಿಯನ್ನು ಅತ್ಯಂತ ಹೆಚ್ಚಳಕ್ಕೆ ತಂದರು. ಜೈನ ಮಹಾ ಕವಿಯಾದ ಪಂಪನು ಈ ಪುಲಗೆರೆಯಲ್ಲಿಯೇ ಪ್ರಸಿದ್ಧಿಯನ್ನು ಹೊಂದಿದನು. ಈ ಸ್ಥಿತಿಯು ಈ ಪ್ರದೇಶದಲ್ಲಿ ೧೧-೧೨ ನೇ ಶತಮಾನಗಳ ವರೆಗೆ ಇದ್ದು ಮುಂದೆ ಇದು ಪಲ್ಲಟಿಸಿ ಅದು ವೀರಶೈವರ ಸ್ಥಾನವಾದದ್ದು ತೋರಿಬರುತ್ತದೆ. ಈ ಪರಿಸ್ಥಿತಿಯುಂಟಾಗಲಿಕ್ಕೆ ಆದಯ್ಯನೇ ಕಾರಣನೆಂಬುದು ಅವನ ಈ ಚರಿತ್ರೆಯಿಂದ ತಿಳಿದುಬರುತ್ತಿದೆ.



ಆದಯ್ಯನ ವಚನಗಳಲ್ಲಿ ಅನೇಕ ಶಿವಶರಣರ ಉಲ್ಲೇಖಗಳಿರುತ್ತವೆ. ೩೯ ಮತ್ತು ೪೦ ನೇ ವಚನಗಳನ್ನು ನೋಡಿರಿ. ವಚನಕಾರರ ವಚನಗಳನ್ನು ನಾವು ಪರೀಕ್ಷಿಸಿದರೆ, ಅವರ ಕಾಲವನ್ನು ಕೆಲಮಟ್ಟಿಗೆ ಊಹಿಸಲು ಶಕ್ಯವಿರುತ್ತದೆ. ಆದಯ್ಯನು ಉಲ್ಲೇಖಿಸಿದ ಶಿವಶರಣರ ಹೆಸರುಗಳನ್ನು ನೋಡಿದರೆ, ಅವನು ಬಸವೇಶ್ವರನಕಿಂತಲೂ ಸ್ವಲ್ಪ ಈಚಿನವನೆಂದು ತೋರುತ್ತದೆ. ಬಸವೇಶ್ವರನ ತರುವಾಯ ದೇಶದಲ್ಲೆಲ್ಲ ಧರ್ಮಯುದ್ಧಗಳು ನಡೆದು ಒಂದು ಮಹತ್ತರ ಸಮಾಜ ಕ್ರಾಂತಿಯು ಉತ್ಪನ್ನವಾಗಿರಬಹುದೆಂದು ತೋರುತ್ತಿದೆ. ಈ ಕ್ರಾಂತಿಯ ಕಾಲದಲ್ಲಿಯೇ ಆದಯ್ಯನು ತನ್ನ ಶೌರ್ಯ ಸಾಹಸಾದಿಗಳಿಂದ ಲಕ್ಷ್ಮೇಶ್ವರ ಪ್ರಾಂತದಲ್ಲಿ ವೀರಶೈವ ಮತವನ್ನು ನೆಲೆಗೊಳಿಸಿರಬಹುದು. ಆದರೆ ಇವೆಲ್ಲವುಗಳೂ ಇತಿಹಾಸ ಸಂಶೋಧಕರಿಂದ ಇನ್ನೂ ಹೆಚ್ಚಾಗಿ ಸಂಶೋಧಿಸಲ್ಪಡುವ ವಿಷಯಗಳಾಗಿವೆ. ಆದರೆ ಈಗ ನಾವು ವಿಷಯ ನಿರ್ದೇಶ ಮಾತ್ರ ಮಾಡಿ ಮಹಾ ಶಿವಶರಣ ಆದಯ್ಯನ ವಚನಗಳನ್ನು ವಾಚಕರ ಅವಗಾಹನೆಗಾಗಿ ಇಡುತ್ತೇವೆ.

**ವಿಜಾಪುರ** **ಫ. ಗು. ಹಳಕಟ್ಟಿ.**

ತಾ. ೧೦-೭-೩೧

# ಆದಯ್ಯನ ವಚನಗಳು.

## ಪರಮಾತ್ಮನ ಸ್ವರೂಪು.

೧. ಧರೆಯಾಕಾಶವಿಲ್ಲದಂದು, ಎಂಬತ್ತುನಾಲ್ಕುಲಕ್ಷ ಜೀವಜಂತುಗಳಿಲ್ಲದಂದು, ಸಚರಾಚರಂಗಳು ಪಸರಕ್ಕೆ ಬಾರದಂದು, ಇಹಪರ ಸ್ವರ್ಗನರಕಾದಿಗಳಿಲ್ಲದಂದು, ಸುರಾಳ ನಿರಾಳಂಗಳೇನೂ ಇಲ್ಲದಂದು, ಸೌರಾಷ್ಟ್ರ ಸೋಮೇಶ್ವರಾ ಆನು ನೀನು ಇಲ್ಲದಂದು, ಅಂದೇನೊ ಇಂದೇನೊ.

೨. ಆದಿ ಅನಾದಿ ಇಲ್ಲದಂದು, ನಾದಬಿಂದುಕಳೆ ಮೊಳೆದೋರದಂದು, ಶೃತಿ ಸ್ಮೃತಿಗಳು ತಲೆದೋರದಂದು, ಚತುರ್ದಶಭುವಂಗಳು ರಚಿಸದಂದು, ಲಯಭೋಗಾದಿಕರಣಂಗಳಲ್ಲಿ ಲೀಯ್ಯವಾದ ತತ್ವ ಪ್ರಭಾವಿಗಳೆಂಬ ಮೂರ್ತಿಗಳರಿವು ಕುರುಹಿಂಗೆ ಬಾರದಂದು, ತಿಥಿ ವಾರ ನಕ್ಷತ್ರ ಯೋಗ ಕರಣಂಗಳೆಂಬ ಪಂಚಲಗ್ನವಿಲ್ಲದಂದು, ಅನುಪಮವಸಾಧ್ಯವಭೇದ್ಯ ಸೌರಾಷ್ಟ್ರ ಸೋಮೇಶ್ವರಲಿಂಗವದೆ ಕಂಡಾ.

೩. ಪಾತಾಳದಿಂ ಕೆಳಕೆ ಪಾದ, ಸುವರ್ಲೋಕದಿಂ ಮೇಲೆ ಉತ್ತುಮಾಂಗ, ಬ್ರಹ್ಮಾಂಡವೇ ಮಕುಟ, ಗಗನವೆ ಮುಖ, ಚಂದ್ರಾರ್ಕಾಗ್ನಿಗಳೇ ನೇತ್ರ, ದಶದಿಕ್ಕು ಬಾಹುಗಳು, ಮಹದಾಕಾಶವೇ ಶರೀರ, ತರುಗಳೇ ತನೂರುಹ, ಶೂನ್ಯವೆ ಕರಸ್ಥಲದ ಲಿಂಗ, ನಕ್ಷತ್ರವೇ ಪುಷ್ಪ, ನಿತ್ಯವೇ ಪೂಜೆ, ಮೇಘವೆ ಜಡೆ, ಬೆಳದಿಂಗಳೇ ವಿಭೂತಿ, ಪರ್ವತಂಗಳೆ ರುದ್ರಾಕ್ಷಿ, ಪಂಚಬ್ರಹ್ಮವೆ ಪಂಚಾಕ್ಷರ, ತತ್ವಂಗಳೆ ಜಪಮಾಲೆ, ಮೇರುವೆ ದಂಡ, ಸಮುದ್ರವೇ ಕಮುಂಡಲು, ಋತುಗಳಾರಾರೆ ಷಟ್‌ಸ್ಥಲ, ಶೇಷನೆ ಕಟಿಸೂತ್ರ, ಜಗವೇ ಕಂಥೆ, ಅನಂತನೆ ಕೌಪಿನ, ತ್ರಿಗುಣ ಒಂದಾದುದೆ ಕರ್ಪುರ, ಚತುರ್ಯುಗವೆ ಗಮನ, ಮಿಂಚೆ ಅಂಗರುಚಿ, ಸಿಡಿಲೆ ಧ್ವನಿ, ವೇದಾಗಮವೇ ವಾಕ್ಯ, ಜ್ಞಾನಮುದ್ರೆಯೇ ಉಪದೇಶ, ಪೃಥ್ವಿಯೇ ಸಿಂಹಾಸನ, ದಿವಾರಾತ್ರಿಯೆ ಅರಮನೆ, ಶಿವಜ್ಞಾನವೆ ಐಶ್ವರ್ಯ, ನಿರಾ

ಳವೆ ತೃಪ್ತಿ, ಇಂತಪ್ಪ ಚೈತನ್ಯಜಂಗಮಕ್ಕೆ ನಾನು ನಮೋ ನಮೋ ಎನುತಿರ್ದೆನಯ್ಯಾ ಸೌರಾಷ್ಟ್ರ ಸೋಮೇಶ್ವರಾ.

೪. ಚಿದ್ಬ್ರಹ್ಮಾಂಡವೆಂಬ ಭಾಂಡದಲ್ಲಿ ಅನಂತ ವಿಚಿತ್ರ ಭುವನಂಗಳಯ್ಯಾ. "ಆಲಯಂ ಸರ್ವಭೂತಾನಾಂ" ಎಂದುದಾಗಿ, ಅನಂತಕೋಟಿ ಬ್ರಹ್ಮಾಂಡಂಗಳು ನಿಮ್ಮ ರೋಮಕೂಪದೊಳಗಡಗಿಪ್ಪವೆಂದರೆ ಬ್ರಹ್ಮ, ವಿಷ್ಣು, ರುದ್ರರಿವರೆಲ್ಲ ಒಂದು ಬ್ರಹ್ಮಾಂಡದೊಳಗಣ ಬಾಲಕರು. ಇವರೆತ್ತ ಬಲ್ಲರು ಲಿಂಗದ ನಿಜವ? ಅಪ್ರಮಾಣ ಅಗೋಚರ ಮಹಂತ ನಿಮ್ಮ ನಿಜವೊಳಗನಾರು ಬಲ್ಲರಯ್ಯಾ ಸೌರಾಷ್ಟ್ರ ಸೋಮೇಶ್ವರಾ?

೫. ಆಕಲ್ಪಿತ ಲಿಂಗವು ಕಲ್ಪಿತಕ್ಕೆ ತ್ರಿವಿಧ ಭೇದದಿಂದನ್ಯವಿಲ್ಲೆನಿಸಿ, ತ್ರಿಗುಣವೆಂಬ ತ್ರಿಪಾದಮಯವಾಗಿ, ತ್ರಿಪಾದದಲ್ಲಿ ಹೊಂದದೆ ತ್ರಿವಿಧಕ್ಕತೀತವಾಗಿಹುದೆಂಬುದಕ್ಕೆ ಶ್ರುತಿ, "ತ್ರಿಪದಸ್ಯ ವೃತಂ ಜೀವಿತ್ರಿಪಾದೋರ್ಧ್ವವ ಕಲ್ಪಯೇತ್" ಎಂದುದಾಗಿ, ಸೌರಾಷ್ಟ್ರ ಸೋಮೇಶ್ವರನೆಂಬ ಲಿಂಗ ಕಲ್ಪಿತಕ್ಕತ್ತತ್ತಲೆ.

೬. ನೆಳಲ ನುಡಿಸುವೆನೆಂದು ಬಳಲುವನಂತೆ, ಆಕಾಶವನಳತಿಗೆ ತಂದಿಹೆನೆಂಬ ಪಂಡಿತನಂತೆ, ಆತ್ಮಸ್ವರೂಪವ ವರ್ಣದಿಂದ ಕಂಡಿಹೆನೆಂಬ ಯೋಗಿಯಂತೆ, ವರ್ಣಾತೀತ, ವೇದಾತೀತವೆಂಬ ಮಾತು ಹುಸಿಯಪ್ಪುದೆ? ನಿಃಕಳಂಕ ಶಾಂತಮಲ್ಲಿಕಾರ್ಜುನನೆಂಬ ಲಿಂಗವಲ್ಲಿಯೆ ಸೌರಾಷ್ಟ್ರ ಸೋಮೇಶ್ವರನೆಂಬ ಲಿಂಗದಲ್ಲಿಯೆ ಕಾಣಿಹೆ.

೭. ಬೀಜದೊಳಗಣ ವೃಕ್ಷ ಅಂಕುರ ಪಲ್ಲವ ಪತ್ರ ಕುಸುಮ ಫಲವೈದೋರದಂತೆ, ಕಾಷ್ಠದೊಳಗಡಗಿ ಉಷ್ಣದೋರದಂತೆ, ಪತಂಗನ ಕರದೊಳಗಡಗಿಪ್ಪ ಮರೀಚಿ ಪ್ರವಹಿಸದಂತೆ, ಬಿಂದುವಿನೊಳಗಡಗಿಪ್ಪ ನಾದ ದನಿದೋರದಂತೆ, ಪಿಂಡ ಬ್ರಹ್ಮಾಂಡಂಗಳ ಕೂಡಿಪ್ಪ ಸೌರಾಷ್ಟ್ರ ಸೋಮೇಶ್ವರ ಲಿಂಗವನಾರು ಭೇದಿಸಬಾರದಯ್ಯಾ.

೮. ಕಟ್ಟಣೆಯೊಳಗಣ ಕಾಂಸ್ಯದಂತೆ, ಅಣಿಯೊಳಗಣ ಕೇಣದಂತೆ, ಚಿನ್ನದೊಳಗಣ ಬಣ್ಣದಂತೆ, ಪಟದೊಳಗಣ ತಂತುವಿನಂತೆ, ಎನ್ನಲ್ಲಿ ಭಿನ್ನವಿಲ್ಲದೆ ಇರ್ದೆಯಲ್ಲಾ ಸೌರಾಷ್ಟ್ರ ಸೋಮೇಶ್ವರಾ.

೯. ತತ್ವ ಮೂವತ್ತಾರ ಮೀರಿ, ನಾದಬಿಂದು ಕಳಾತೀತನಾದರೇನು? ಜಗನ್ಮಯನಾದ. ಆಗಿಯೂ ಜಗದ ಸ್ಥಿತಿಗತಿ ಇಲ್ಲ. ಅದೆಂತೆಂ



ದೊಡೆ, ಶ್ಲೋಕ "ಏಕಮೇವ ಹಿ ಭೂತಾತ್ಮಂ ಭೂತೆ ಜನವ್ಯವಸ್ಥಿತೆಃ। ಏಕಏವಬಹುಧಾಚೈವ ದೃಶ್ಯತೆ ಜಲಚಂದ್ರವತ್।" ಎಂದುದಾಗಿ, ಜಲದೊಳಗೆ ಸೂರ್ಯನ ಪ್ರತಿಬಿಂಬ ವಿಕಾರಿಸುತ್ತಿದ್ದರೇನು? ಆ ವಿಕಾರ ಜಲಕಲ್ಲದೆ ಸೂರ್ಯಂಗಿಲ್ಲವಂತಿಪ್ಪನಯ್ಯಾ ಸೌರಾಷ್ಟ್ರ ಸೋಮೇಶ್ವರನು.

೧೦. ಜಗತ್ಪ್ರಪಂಚವ ಮಾಡಿ, ಆ ಜಗದಲ್ಲಿ ಜೀವರೂಪಿಂದ ಬಳಿಸಂದನೆಂದು ಹೇಳುವ ಶ್ರುತಿಯಂತಿರಲಿ. ಜೀವನೆ ಶಿವನಾದರೆ, ಶೋಕ ಮೋಹ ಋಣ ರೋಗ ಪುಣ್ಯ ಪಾಪ ಕಾಲ ಕಲ್ಪಿತ ಪ್ರಳಯ ಪ್ರಕೃತಿ ಸಂಸಾರ ಪಾಶಬದ್ಧ ಉಂಟೆ ಶಿವಂಗೆ? ಇವೆಲ್ಲವೂ ಜೀವಂಗಲ್ಲದೆ, ಶಿವಂಗಿಲ್ಲವಾಗಿ, ತ್ರಿಗುಣರಹಿತ ಸೌರಾಷ್ಟ್ರ ಸೋಮೇಶ್ವರನು.

೧೧. ಅತರ್ಕ್ಯನ ಪ್ರಮಾಣನ ನಾಮಯನನುಪಮ ಸರ್ವಗತ ಸರ್ವಜ್ಞ ಸರ್ವೇಶ್ವರನಪ್ಪ ಪರಶಿವನು ಜಗತ್ ಸೃಷ್ಟ್ಯರ್ಥವಾಗಿ ಸಮಸ್ತ ತತ್ವಂಗಳುತ್ಪತ್ತಿಗೆ ಮೂಲಿಗನಾಗಿ ತನ್ನ ಸ್ವೇಚ್ಛೆಯ ನೆನಹೆಂಬ ಚಿಂತಾಶಕ್ತಿಯ ಸಹಸ್ರದೊಳೊಂದಂಶದಲ್ಲಿ ಕುಂಡಲಿನಿಯಪ್ಪ ಪರವು ಜನಿಸಿತ್ತು. ಆ ಪರಶಿವನಪ್ಪ ನಿಃಕಲ ಬ್ರಹ್ಮವೂ ಈ ಕುಂಡಲಿನಿಯೂ ತದಾತ್ಮದಿಂ ಭಿನ್ನವಿಲ್ಲದಿಹುದೆ ಸಕಲ ನಿಃಕಲವಪ್ಪ ಸದಾಶಿವನು. ಆ ಸದಾಶಿವನು ತಾನೆ ಸಾದಾಖ್ಯದಿಂ ಪಂಚ ಬ್ರಹ್ಮಮೂರ್ತಿಯಾಹುದದೆಂತೆಂದೊಡೆ, ಆ ಕುಂಡಲಿನಿಯಪ್ಪ ಪರೆಯ ಸಹಸ್ರದೊಳೊಂದಂಶದಲ್ಲಿ ಆದಿಶಕ್ತಿ ಜನಿಸಿತ್ತು. ಆದಿಶಕ್ತಿಯ ಸಹಸ್ರದೊಳೊಂದಂಶದಲ್ಲಿ ಇಚ್ಛಾಶಕ್ತಿ ಜನಿಸಿತ್ತು. ಇಚ್ಛಾಶಕ್ತಿಯ ಸಹಸ್ರದೊಳೊಂದಂಶದಲ್ಲಿ ಜ್ಞಾನಶಕ್ತಿ ಜನಿಸಿತ್ತು. ಜ್ಞಾನಶಕ್ತಿಯ ಸಹಸ್ರದೊಳೊಂದಂಶದಲ್ಲಿ ಕ್ರಿಯಾಶಕ್ತಿ ಜನಿಸಿತ್ತು. ಆ ನಿಃಕಲವಪ್ಪ ಶಿವನ ನಿಃಕಲೆಯಪ್ಪ ಕುಂಡಲಿನಿಯ ಹತ್ತರೊಳೊಂದಂಶದಲ್ಲಿ ಶಿವಸಾದಾಖ್ಯ ಜನಿಸಿತ್ತು. ಆದಿಶಕ್ತಿಯ ಹತ್ತರೊಳೊಂದಂಶದಲ್ಲಿ ಅಮೂರ್ತಿಸಾದಾಖ್ಯ ಜನಿಸಿತ್ತು. ಇಚ್ಛಾಶಕ್ತಿಯ ಹತ್ತರೊಳೊಂದಂಶದಲ್ಲಿ ಮೂರ್ತಿಸಾದಾಖ್ಯ ಜನಿಸಿತ್ತು. ಜ್ಞಾನಶಕ್ತಿಯ ಹತ್ತರೊಳೊಂದಂಶದಲ್ಲಿ ಕರ್ತೃಸಾದಾಖ್ಯ ಜನಿಸಿತ್ತು. ಕ್ರಿಯಾಶಕ್ತಿಯ ಹತ್ತರೊಳೊಂದಂಶದಲ್ಲಿ ಕರ್ಮಸಾದಾಖ್ಯ ಜನಿಸಿತ್ತು. ಆ ಕರ್ಮಸಾದಾಖ್ಯವಪ್ಪ ಮಹೇಶ್ವರನು ಸಕಲಸ್ವರೂಪದಿಂ ಸೋಮಧರ ಮೊದಲಾದ ಲಿಂಗೋದ್ಭವ ಕಡೆಯಾದ ಪಂಚವಿಂಶತಿ ಲೀಲೆಯಂ ತಾಳನು. ಅಷ್ಟ ತನುವಿನೊಳಗಾದ ಜಗದ ರಚನೆ ಆರಿಂದ ಜನಿಸಿತ್ತು ಅಧಿಕಾರ ಲಯ ಭೋಗಕ್ಕೆ ಆವನಿಹನು ಸೃಷ್ಟಿ,

ಸ್ಥಿತಿ ಸಂಹೃತಿ ತಿರೋಭಾವವನುಗ್ರಹವಾರಿಂದಹುದು ಸರ್ವಜ್ಞತ್ವ ಕರ್ತೃತ್ವ ನಿತ್ಯ ತೃಪ್ತಿತ್ವ ಅನಾದಿ ಬೋಧತ್ವ, ಸ್ವತಂತ್ರ, ಅಲುಪ್ತಾ ಶಕ್ತಿತ್ವವಾವಂ ಗುಂಟು, ಆ ಶಿವನೆ ಘೃತ ಕಾಠಿಣ್ಯದಂತೆ ನಿಃಕಲ ಸಕಲ ನಿಃಕಲ ಸಕಲ ವಾದವನು ಸೌರಾಷ್ಟ್ರ ಸೋಮೇಶ್ವರಲಿಂಗ ಒಬ್ಬನೆ ಕಾಣಿರೋ.

---

## ಷಟ್‌ಸ್ಥಲಗಳು.

೧೨. ಪೃಥ್ವಿ ಅಪ್ಪು ತೇಜ ವಾಯು ಆಕಾಶ ಆತ್ಮ ಮೊದಲಾದ ಷಟ್‌ಸ್ಥಲಗಳ ವಿವರವೆಂತೆಂದೊಡೆ, ಪೃಥ್ವಿ ಭಕ್ತ, ಅಪ್ಪು ಮಹೇಶ, ಅಗ್ನಿ ಪ್ರಸಾದಿ, ನಾಯು ಪ್ರಾಣಲಿಂಗಿ, ಆಕಾಶ ಶರಣ, ಆತ್ಮ ಐಕ್ಯ. ಇದಕ್ಕೆ ಶೃತಿ "ಸದ್ಯೋಜಾತ ಯಥಾ ಭಕ್ತಾ। ವಾಮದೇವ ಮಹೇಶ್ವರಃ। ಅಘೋರಂಚ ಪ್ರಸಾದೀನಾಂ ತತ್ಪುರುಷ ಪ್ರಾಣಲಿಂಗೀ। ಈಶಾನ್ಯ ಶರಣಂ ದೃಷ್ಟ್ವಾ ಐಕ್ಯನಾತ್ಮಮಯಂ ಯಥಾ। ಷಡಂಗಲಿಂಗ ಮೂಲೇನ ದೇವದೇಹಿಕ ಭಕ್ತಯೊ ||" ಇಂತೆಂದುದಾಗಿ ಷಡಂಗಕ್ಕೆ ಲಿಂಗಗಳಾವಾವೆಂದೊಡೆ ಭಕ್ತಂಗಾಚಾರಲಿಂಗ ಮಹೇಶಂಗೆ ಗುರುಲಿಂಗ, ಪ್ರಸಾದಿಗೆ ಶಿವಲಿಂಗ ಪ್ರಾಣಲಿಂಗಿಗೆ ಜಂಗಮಲಿಂಗ, ಶರಣಂಗೆ ಪ್ರಸಾದಲಿಂಗ, ಐಕ್ಯಂಗೆ ಮಹಾಲಿಂಗ. ಇಂತೀ ಷಡುಲಿಂಗಂಗಳಿಗೆ ಕಳೆಗಳಾನಾವವೆಂದಡೆ, ಆಚಾರಲಿಂಗಕ್ಕೆ ನಿವೃತ್ತಿಕಲೆ, ಗುರುಲಿಂಗಕ್ಕೆ ಪ್ರತಿಷ್ಠಾಕಲೆ, ಶಿವಲಿಂಗಕ್ಕೆ ವಿದ್ಯಾಕಲೆ, ಜಂಗಮಲಿಂಗಕ್ಕೆ ಶಾಂತಿಕಲೆ, ಪ್ರಸಾದಲಿಂಗಕ್ಕೆ ಶಾಂತ್ಯಾತೀತಕಲೆ, ಮಹಾಲಿಂಗಕ್ಕೆ ಶಾಂತ್ಯಾತೀತೋತ್ತರಕಲೆ. ಇಂತೀ ಷಡ್ವಿಧಲಿಂಗಂಗಳಿಗೆ ಮುಖಂಗಳಾವಾವೆಂದೊಡೆ, ಆಚಾರಲಿಂಗಕ್ಕೆ ನಾಸಿಕ ಮುಖ, ಗುರುಲಿಂಗಕ್ಕೆ ಜಿಹ್ವೆಮುಖ, ಶಿವಲಿಂಗಕ್ಕೆ ನೇತ್ರವೆ ಮುಖ, ಜಂಗಮಲಿಂಗಕ್ಕೆ ತ್ವಙ್ಮುಖ, ಪ್ರಸಾದಲಿಂಗಕ್ಕೆ ಶ್ರೋತ್ರಮುಖ, ಮಹಾಲಿಂಗಕ್ಕೆ ಹೃದಯಮುಖ, ಇಂತೀ ಷಡ್ವಿಧಲಿಂಗಂಗಳಿಗೆ ಹಸ್ತಂಗಳಾವಾವೆಂದಡೆ, ಆಚಾರಲಿಂಗಕ್ಕೆ ಸುಚಿತ್ತಹಸ್ತ, ಗುರುಲಿಂಗಕ್ಕೆ ಸುಬುದ್ಧಿಹಸ್ತ, ಶಿವಲಿಂಗಕ್ಕೆ ನಿರಹಂಕಾರಹಸ್ತ, ಜಂಗಮಲಿಂಗಕ್ಕೆ ಸುಮನಹಸ್ತ, ಪ್ರಸಾದಲಿಂಗಕ್ಕೆ ಸುಜ್ಞಾನಹಸ್ತ, ಮಹಾಲಿಂಗಕ್ಕೆ ಸದ್ಭಾವಹಸ್ತ, ಇಂತೀ



ಷಡ್ವಿಧಲಿಂಗಂಗಳಿಗೆ ತೃಪ್ತಿ ಆವಾವೆಂದೊಡೆ, ಆಚಾರಲಿಂಗಕ್ಕೆ ಗಂಧ ತೃಪ್ತಿ ಗುರುಲಿಂಗಕ್ಕೆ ರಸತೃಪ್ತಿ, ಶಿವಲಿಂಗಕ್ಕೆ ರೂಪು ತೃಪ್ತಿ, ಜಂಗಮ ಲಿಂಗಕ್ಕೆ ಸ್ಪರ್ಶನತೃಪ್ತಿ, ಪ್ರಸಾದಲಿಂಗಕ್ಕೆ ಶಬ್ದತೃಪ್ತಿ, ಮಹಾಲಿಂಗಕ್ಕೆ ಪಂಚೇಂದ್ರಿಯತೃಪ್ತಿ, ಇಂತೀ ಷಡ್ವಿಧಲಿಂಗಂಗಳಿಗೆ ಶಕ್ತಿಗಳಾವಾವೆಂದೊಡೆ, ಆಚಾರಲಿಂಗಕ್ಕೆ ಕ್ರಿಯಾಶಕ್ತಿ, ಗುರುಲಿಂಗಕ್ಕೆ ಜ್ಞಾನಶಕ್ತಿ, ಶಿವಲಿಂಗಕ್ಕೆ ಇಚ್ಛಾಶಕ್ತಿ, ಜಂಗಮಲಿಂಗಕ್ಕೆ ಆದಿಶಕ್ತಿ, ಪ್ರಸಾದಲಿಂಗಕ್ಕೆ ಪರಾಶಕ್ತಿ, ಮಹಾಲಿಂಗಕ್ಕೆ ಚಿಚ್ಛಕ್ತಿ, ಇಂತೀ ಷಡ್ವಿಧಮಹಾಲಿಂಗಂಗಳಿಗೆ ಭಕ್ತಿ ಆವಾವೆಂದೊಡೆ, ಆಚಾರಲಿಂಗಕ್ಕೆ ಶ್ರದ್ಧಾಭಕ್ತಿ, ಗುರುಲಿಂಗಕ್ಕೆ ನಿಷ್ಠಾಭಕ್ತಿ, ಶಿವಲಿಂಗಕ್ಕೆ ಅವಧಾನಭಕ್ತಿ, ಜಂಗಮಲಿಂಗಕ್ಕೆ ಅನುಭಾವಭಕ್ತಿ, ಪ್ರಸಾದಲಿಂಗಕ್ಕೆ ಆನಂದಭಕ್ತಿ, ಮಹಾಲಿಂಗಕ್ಕೆ ಸಮರಸಭಕ್ತಿ, ಇಂತೀ ಷಡ್ವಿಧಲಿಂಗಂಗಳಿಗೆ ವಿಷಯಂಗಳಾವಾವೆಂದೊಡೆ, ಎಳಿಸುವದು ಆಚಾರಲಿಂಗ ವಿಷಯ, ಎಳಿಸಿ ಮೋಹಿಸುವದು ಗುರುಲಿಂಗ ವಿಷಯ, ಮೋಹಿಸಿ ಕೂಡುವದು ಶಿವಲಿಂಗದ ವಿಷಯ, ಕೂಡಿ ಸುಖಂಬಡೆವುದು ಜಂಗಮಲಿಂಗದ ವಿಷಯ, ಸುಖಂಬಡೆದು ಪರಿಣಾಮತೆಯ ನೈದುವುದು ಪ್ರಸಾದಲಿಂಗದ ವಿಷಯ, ಪರಿಣಾಮತೆಯನೈಯ್ದಿ ನಿಶ್ಚಯ ಬಡೆವುದು ಮಹಾಲಿಂಗದ ವಿಷಯ. ಇನ್ನು ಆಚಾರಲಿಂಗದಲ್ಲಿಯ ವಿಶ್ರಾರ್ಪಣದ ವಿವರವೆಂತೆಂದೊಡೆ, ಬೇರು ಗಡ್ಡೆ ಗೆಣಸು ಮೊದಲಾದವರಲ್ಲಿ ಗಂಧವನರಿವುದು ಆಚಾರಲಿಂಗದಲ್ಲಿಯ ಆಚಾರಲಿಂಗ, ಮರ ತಿಗಡು ಹಗಿನ ಮೊದಲಾದವರಲ್ಲಿಯ ಗಂಧವನರಿವುದು ಆಚಾರಲಿಂಗದಲ್ಲಿಯ ಗುರುಲಿಂಗ, ಚಿಗರು ತಳಿರು ಪತ್ರೆ ಮೊದಲಾದವರಲ್ಲಿಯ ಗಂಧವನರಿವುದು ಆಚಾರಲಿಂಗದಲ್ಲಿಯ ಶಿವಲಿಂಗ, ನನೆ ಮೊಗ್ಗು ಅರಳು ಮೊದಲಾದವರಲ್ಲಿಯ ಗಂಧವನರಿವುದು ಆಚಾರದಲ್ಲಿಯ ಜಂಗಮಲಿಂಗ, ಕಾಯಿ ದೋರೆಹಣ್ಣು ಮೊದಲಾದವರಲ್ಲಿಯ ಗಂಧವನರಿವುದು, ಆಚಾರಲಿಂಗದಲ್ಲಿಯ ಪ್ರಸಾದಲಿಂಗ, ಇಂತಿವರಲ್ಲಿಯ ಗಂಧತೃಪ್ತಿಯನರಿವುದು, ಆಚಾರಲಿಂಗದಲ್ಲಿಯ ಮಹಾಲಿಂಗ. ಇನ್ನು ಗುರುಲಿಂಗದಲ್ಲಿಯ ಮಿಶ್ರಾರ್ಪಣದ ವಿವರವೆಂತೆಂದೊಡೆ, ಮಧುರವಾದ ರುಚಿಯನರಿವುದು ಗುರುಲಿಂಗದಲ್ಲಿಯ ಆಚಾರಲಿಂಗ, ಒಗುರುವಾದ ರುಚಿಯನರಿವುದು ಗುರುಲಿಂಗದಲ್ಲಿಯ ಗುರುಲಿಂಗ ಮತ್ತು ಖಾರವಾದ ರುಚಿಯನರಿವುದು ಗುರುಲಿಂಗದಲ್ಲಿಯ ಶಿವಲಿಂಗ, ಆಮ್ಲವಾದ ರುಚಿಯನರಿವುದು ಗುರುಲಿಂಗದಲ್ಲಿಯ ಜಂಗಮ

ಲಿಂಗ, ಕಹಿಯಾದ ರುಚಿಯನರಿವುದು ಗುರುಲಿಂಗದಲ್ಲಿಯ ಪ್ರಸಾದಲಿಂಗ,
ಲವಣವಾದ ರುಚಿಯನರಿವುದು ಗುರುಲಿಂಗದಲ್ಲಿಯ ಮಹಾಲಿಂಗ. ಇನ್ನು
ಶಿವಲಿಂಗದಲ್ಲಿಯ ಮಿಶ್ರಾರ್ಪಣದ ವಿವರವೆಂತೆಂದೊಡೆ, ಪೀತವರ್ಣದ
ರೂಪುನರಿವುದು ಶಿವಲಿಂಗದಲ್ಲಿಯ ಆಚಾರಲಿಂಗ, ಶ್ವೇತವರ್ಣದ ರೂಪ
ನರಿವುದು ಶಿವಲಿಂಗದಲ್ಲಿಯ ಗುರುಲಿಂಗ, ಹರಿತವರ್ಣದ ರೂಪನರಿವುದು
ಶಿವಲಿಂಗದಲ್ಲಿಯ ಶಿವಲಿಂಗ, ಮಾಂಜಿಷ್ಟವರ್ಣದ ರೂಪನರಿವುದು ಶಿವ
ಲಿಂಗದಲ್ಲಿಯ ಜಂಗಮಲಿಂಗ, ಕಪೋತವರ್ಣದ ರೂಪನರಿವುದು ಶಿವ
ಲಿಂಗದಲ್ಲಿಯ ಪ್ರಸಾದಲಿಂಗ, ಇಂತಿವರ ಸಂಪರ್ಕ ಸಂಯೋಗವರ್ಣವಾದ
ರೂಪನರಿವುದು ಶಿವಲಿಂಗದಲ್ಲಿಯ ಮಹಾಲಿಂಗ. ಇನ್ನು ಜಂಗಮಲಿಂ
ಗದ ಮಿಶ್ರಾರ್ಪಣದ ವಿವರವೆಂತೆಂದೊಡೆ ಕಠಿಣವಾದ ಸ್ಪರ್ಶನವನರಿವುದು
ಜಂಗಮಲಿಂಗದೊಳಗಣ ಆಚಾರಲಿಂಗ, ಮೃದುವಾದ ಸ್ಪರ್ಶನವರಿವುದು
ಜಂಗಮಲಿಂಗದಲ್ಲಿಯ ಗುರುಲಿಂಗ, ಉಷ್ಣವಾದ ಸ್ಪರ್ಶನವರಿವುದು ಜಂಗ
ಮಲಿಂಗದಲ್ಲಿಯ ಶಿವಲಿಂಗ, ಶೈತ್ಯವಾದ ಸ್ಪರ್ಶನವರಿವುದು ಜಂಗಮಲಿಂಗದ
ಲ್ಲಿಯ ಜಂಗಮಲಿಂಗ, ಮಿಶ್ರವಾದ ಸ್ಪರ್ಶನವರಿವುದು ಜಂಗಮಲಿಂಗದಲ್ಲಿಯ
ಪ್ರಸಾದಲಿಂಗ, ಸ್ಪರ್ಶನೇಂದ್ರಿಯ ತೃಪ್ತಿಯನರಿವುದು ಜಂಗಮಲಿಂಗದಲ್ಲಿ
ಮಹಾಲಿಂಗ. ಇನ್ನು ಪ್ರಸಾದಲಿಂಗ ಮಿಶ್ರಾರ್ಪಣದ ವಿವರವೆಂತೆಂದೊಡೆ,
ಗಂಟೆ ಜಯಗಂಟೆ ತಾಳಕಂಸಾಳ ಮೊದಲಾದ ವಾದ್ಯವನರಿವುದು
ಪ್ರಸಾದಲಿಂಗದಲ್ಲಿಯ ಆಚಾರಲಿಂಗ, ವೀಣೆ ರುದ್ರವೀಣೆ ತುಂಬುರ
ವೀಣೆ, ಕಿನ್ನರವೀಣೆ, ಕೈಲಾಸವೀಣೆ, ಮೊದಲಾದ ತಂತಿಕಟ್ಟಿ ನುಡಿವ
ವಾದ್ಯವನರಿವುದು ಪ್ರಸಾದಲಿಂಗದಲ್ಲಿಯ ಗುರುಲಿಂಗ, ಪಟಹಾ ಪಡ
ಢಕ್ಕೆ ಡಮರುಗ ಡಿಂಡಿಮ ಆವುಜ ಪಟಾವುಜ ಮೃದಂಗ ಮುರುಜ ಭೇರಿ
ಮೊದಲಾದ ವಾದ್ಯವನರಿವುದು ಪ್ರಸಾದಲಿಂಗದಲ್ಲಿ ಶಿವಲಿಂಗ, ಕಾಳೆ
ಹೆಗ್ಗಾಳೆ ಶಂಖ ವಾಸುಗಿ ನಾಗಶರ ಉಪಾಂಗ ಮೊದಲಾದ ವಾದ್ಯವನರಿ
ವುದು ಪ್ರಸಾದಲಿಂಗದಲ್ಲಿಯ ಜಂಗಮಲಿಂಗ, ಸಂಗೀತ ಸಾಹಿತ್ಯ ಶಬ್ದಾರ್ಥ
ಮೊದಲಾದ ಶಬ್ದವನರಿವುದು ಪ್ರಸಾದ ಲಿಂಗದಲ್ಲಿಯ ಪ್ರಸಾದಲಿಂಗ,
ಪಂಚಮಹಾ ವಾದ್ಯಂಗಳ ತೃಪ್ತಿಯನರಿವುದು ಪ್ರಸಾದಲಿಂಗದಲ್ಲಿಯ
ಮಹಾಲಿಂಗ. ಇನ್ನು ಮಹಾಲಿಂಗದಲ್ಲಿಯ ಮಿಶ್ರಾರ್ಪಣವೆಂತೆಂದೊಡೆ,
ಆಚಾರಲಿಂಗದಲ್ಲಿಯ ಮಿಶ್ರದ ತೃಪ್ತಿಯನರಿವುದು ಮಹಾಲಿಂಗದಲ್ಲಿಯ
ಆಚಾರಲಿಂಗ, ಗುರುಲಿಂಗದಲ್ಲಿಯ ಮಿಶ್ರದ ತೃಪ್ತಿಯನರಿವುದು ಮಹಾಲಿಂ



ಗದಲ್ಲಿಯ ಗುರುಲಿಂಗ, ಶಿವಲಿಂಗದೊಳಗಣ ಮಿಶ್ರದ ತೃಪ್ತಿಯನರಿವುದು
ಮಹಾಲಿಂಗದೊಳಗಣ ಶಿವಲಿಂಗ, ಜಂಗಮಲಿಂಗದೊಳಗಣ ಮಿಶ್ರದ
ತೃಪ್ತಿಯನರಿವುದು ಮಹಾಲಿಂಗದೊಳಗಣ ಜಂಗಮಲಿಂಗ, ಪ್ರಸಾದಲಿಂ
ಗದೊಳಗಣ ಮಿಶ್ರದ ತೃಪ್ತಿಯನರಿವುದು ಮಹಾಲಿಂಗದೊಳಗಣ ಪ್ರಸಾದ
ಲಿಂಗ, ಮಹಾಲಿಂಗದೊಳಗಣ ಮಿಶ್ರದ ತೃಪ್ತಿಯನರಿವುದು ಮಹಾಲಿಂಗ
ದೊಳಗಣ ಮಹಾಲಿಂಗ. ಅವಿರಳ ಭಾವೈಕ್ಯ ತೃಪ್ತಿಯನರಿವುದು ಮಹಾಲಿಂಗ
ದೊಳಗಣ ಮಹಲಿಂಗ. ಇನ್ನು ಆಚಾರಲಿಂಗ ಮೋಹಿತಾನಾದೊಡೆ ಸತಿ
ಸುತ ಬಾಂಧವರಲ್ಲಿ ಮೋಹವಿಲ್ಲದಿರಬೇಕು. ಆಚಾರಲಿಂಗ ಭಕ್ತನಾ
ದೊಡೆ ಸ್ವಕಾಯಕದಲ್ಲಿರಬೇಕು. ಆಚಾರಲಿಂಗ ವೀರ ತಾನಾದೊಡೆ
ಪೂರ್ವವನಳಿದು ಪುನರ್ಜಾತನಾಗಬೇಕು. ಆಚಾರಲಿಂಗ ಪ್ರಾಣಿಯಾ
ದೊಡೆ ಭವಿಗಳಿಗೆ ತಲೆವಾಗದಿರಬೇಕು. ಆಚಾರಲಿಂಗ ಪ್ರಸಾದಿಯಾ
ದೊಡೆ ಜಿಹ್ವಾಲಂಪಟವಿಲ್ಲದಿರಬೇಕು. ಆಚಾರಲಿಂಗ ತೃಪ್ತನಾದಡೆ ಭಕ್ತ
ಕಾಯ ಮಮಕಾಯನಾಗಿರಬೇಕು. ಇನ್ನು ಗುರುಲಿಂಗ ಮೋಹಿತಾನಾ
ದೊಡೆ ತನುಗುಣನಾಸ್ತಿಯಾಗಿರಬೇಕು. ಗುರುಲಿಂಗ ಭಕ್ತನಾದೊಡೆ
ತನುವ ಗುರುವಿನಲ್ಲಿ ಸವಿಯಬೇಕು. ಗುರುಲಿಂಗ ವೀರನಾದೊಡೆ ಭವರೋ
ಗಂಗಳಿಲ್ಲದಿರಬೇಕು. ಗುರುಲಿಂಗ ಪ್ರಾಣಿಯಾದೊಡೆ ಪ್ರಕೃತಿಗುಣ ರಹಿ
ತನಾಗಿರಬೇಕು. ಗುರುಲಿಂಗ ಪ್ರಸಾದಿಯಾದೊಡೆ ಗುರು ಪ್ರಸಾದವಲ್ಲದೆ
ಸ್ವೀಕರಿಸದಿರಬೇಕು. ಗುರುಲಿಂಗ ತೃಪ್ತನಾದೊಡೆ ಅರಸುವ ಅರಿಕೆ ಇಲ್ಲ
ದಿರಬೇಕು. ಇನ್ನು ಶಿವಲಿಂಗ ಮೋಹಿ ತಾನಾದೊಡೆ ಮನಗುಣನಾ
ಸ್ತಿಯಾಗಿರಬೇಕು. ಶಿವಲಿಂಗ ಭಕ್ತನಾದೊಡೆ ಲಿಂಗದ ಏಕೋಗ್ರಾಹ
ಕತ್ವ ಆಳವಟ್ಟಿರಬೇಕು. ಶಿವಲಿಂಗ ವೀರನಾದೊಡೆ ಕಾಲಕಾಮಾದಿಗಳಿಗೆ
ಅಳುಕದಿರಬೇಕು. ಶಿವಲಿಂಗ ಪ್ರಾಣಿಯಾದೊಡೆ ಜನನ ಮರಣಂಗಳಿ
ಗೊಳಗಾಗದಿರಬೇಕು. ಶಿವಲಿಂಗ ಪ್ರಸಾದಿಯಾದೊಡೆ ಶಿವಪ್ರಸಾದವ
ಲ್ಲದೆ ಸ್ವೀಕರಿಸದಿರಬೇಕು. ಶಿವಲಿಂಗ ತೃಪ್ತನಾದೊಡೆ ದ್ವೈತಾದ್ವೈತವನ
ಳಿದಿರಬೇಕು. ಇನ್ನು ಜಂಗಮಲಿಂಗ ಮೋಹಿ ತಾನಾದೊಡೆ ಪ್ರಾಣಗುಣ
ನಾಸ್ತಿಯಾಗಿರಬೇಕು. ಜಂಗಮಲಿಂಗ ಭಕ್ತನಾದೊಡೆ ಜಂಗಮದಲ್ಲಿ
ಧನ ಮನ ಸವಿಯಬೇಕು. ಜಂಗಮಲಿಂಗ ವೀರನಾದೊಡೆ ಭಯ ಭಂಗ
ವಿಲ್ಲದಿರಬೇಕು. ಜಂಗಮಲಿಂಗ ಪ್ರಾಣಿಯಾದೊಡೆ ತಥ್ಯ ಮಿಥ್ಯ ರಾಗ
ದ್ವೇಷಂಗಳಿಲ್ಲದಿರಬೇಕು. ಜಂಗಮ ಲಿಂಗ ಪ್ರಸಾದಿಯಾದೊಡೆ ಭೋಗ

ಭೂಷಣಂಗಳಾಶೆ ಇಲ್ಲದಿರಬೇಕು. ಜಂಗಮಲಿಂಗ ತೃಪ್ತನಾದೊಡೆ ಹಮ್ಮಿಲ್ಲದಿರಬೇಕು. ಇನ್ನು ಪ್ರಸಾದಲಿಂಗ ಮೋಹಿಯಾದೊಡೆ ಶಬ್ದಜಾಲಂಗಳಿಗೆ ಕಿವಿಯೊಡ್ಡದಿರಬೇಕು. ಪ್ರಸಾದಲಿಂಗ ಭಕ್ತನಾದೊಡೆ ದಾಸೋಹವಿಲ್ಲದಿರಬೇಕು. ಪ್ರಸಾದಲಿಂಗ ವೀರನಾದೊಡೆ ಚಿದಹಮ್ಮಿಲ್ಲದಿರಬೇಕು. ಪ್ರಸಾದಲಿಂಗ ಪ್ರಾಣಿಯಾದೊಡೆ ಪ್ರಾಣಲಿಂಗದೊಳ ಭಿನ್ನನಾಗಿರದೇಕು. ಪ್ರಸಾದಲಿಂಗ ಪ್ರಸಾದಿಯಾದೊಡೆ ಪ್ರಸಾದ ಪ್ರಸನ್ನವಾಗಿರಬೇಕು. ಪ್ರಸಾದ ತೃಪ್ತನಾದೊಡೆ ಇಂದ್ರಿಯಂಗಳಿಚ್ಛೆ ಇಲ್ಲದಿರಬೇಕು. ಇನ್ನು ಮಹಾಲಿಂಗ ಮೋಹಿ ತಾನಾದೊಡೆ ಅಣಿಮಾದ್ಯಷ್ಟೈಶ್ವರ್ಯಂಗಳ ಬಯಸದಿರಬೇಕು. ಮಹಾಲಿಂಗ ಭಕ್ತನಾದೊಡೆ ಅಷ್ಟ ಮಹಾಸಿದ್ಧಿಗಳ ಬಯಸದಿರಬೇಕು. ಮಹಾಲಿಂಗ ವೀರನಾದೊಡೆ ಚತುರ್ವಿಧ ಪದವಿಯ ಹಾರದಿರಬೇಕು. ಮಹಾಲಿಂಗ ಪ್ರಾಣಿಯಾದೊಡೆ ಇಹ ಪರಂಗಳಾಶೆ ಇಲ್ಲದಿರಬೇಕು. ಮಹಾಲಿಂಗ ಪ್ರಸಾದಿಯಾದೊಡೆ ಅರಿವು ಮರಹಳಿದ ಚಿಲ್ಲಿಂಗ ಸಂಗಿಯಾಗಿರಬೇಕು. ಮಹಾಲಿಂಗ ತೃಪ್ತನಾದೊಡೆ ಭಾವ ಸದ್ಭಾವ ನಿರ್ಭಾವವಳಿದು ಭಾವವೈಕ್ಯವಾಗಿ ತಾನಿದಿರೆಂಬ ಭಿನ್ನಭಾವವ ತೋರದಿರಬೇಕು. ಇಂತೀ ನೂರೆಂಟು ಸ್ಥಲದಲ್ಲಿ ನಿಪುಣನಾಗಿ ಮಿಶ್ರ ಷಟ್‌ಸ್ಥಲ, ಷಟ್‌ಸ್ಥಲ, ತ್ರಿವಿಧಸ್ಥಲ, ಏಕಸ್ಥಲವಾಗಿ ಸ್ಥಲ ನಿಃಸ್ಥಲವನೈದಿ ಸೌರಾಷ್ಟ್ರ ಸೋಮೇಶ್ವರಲಿಂಗ ತಾನು ತಾನಾಗಿರಬೇಕಯ್ಯ.

೧೩. ಚರಿಸಿ ವರ್ತಿಸುವುದೆ ಆಚಾರವಾದ ಕಾರಣ ಈಡಾಪಿಂಗಳ ನಾಡಿಯಿಂದೆ ರೇಚಕಪೂರಕಂಗಳು ಚರಿಸಿ ವರ್ತಿಸುವ ದೆಸೆಯಿಂ ನಾಸಿಕಕ್ಕೆ ಆಚಾರಲಿಂಗವಾಗಬೇಕಾಯಿತು. ಮಂತ್ರಮೂರ್ತಿಯೆ ಗುರುವಾದ ಕಾರಣ ಷಡಕ್ಷರಿಯೆ ಷಡ್ರುಚಿಯಾಗಿ ತೋರಿಹುದಾಗಿ ಅಂತಪ್ಪ ಷಡ್ರುಚಿಯೆ ಜಿಹ್ವೆಯ ಮುಖಕ್ಕೆ ಸಲುವ ದೆಸೆಯಿಂ ಜಿಹ್ವೆಗೆ ಗುರುಲಿಂಗವಾಗಬೇಕಾಯಿತ್ತು. ಸ್ವಯಂಪ್ರಕಾಶವೆ ಶಿವನಾದ ಕಾರಣ ಆ ಮಹಾಪ್ರಕಾಶವೆ ನೇತ್ರಂಗಳೊಳಗೆ ನೆಲೆಗೊಂಡು ಸಕಲ ಪದಾರ್ಥಂಗಳ ಕಾಣಿಸಿ ತೋರ್ಪ ದೆಸೆಯಿಂ ನೇತ್ರಕ್ಕೆ ಶಿವಲಿಂಗವಾಗಬೇಕಾಯಿತ್ತು. ಚರವೆ ಜಂಗಮವಾದ ಕಾರಣ ತ್ವಕ್ಕು ಸರ್ವಾಂಗದಲ್ಲಿ ನೆಲೆಗೊಂಡು ಅಲ್ಲಿಗಲ್ಲಿಗೆ ಸ್ಪರುಶನವನರಿವುತ್ತಿಹ ದೆಸೆಯಿಂ ತ್ವಕ್ಕಿಂಗೆ ಜಂಗಮಲಿಂಗವಾಗಬೇಕಾಯಿತ್ತು. ನಾದ ಸುನಾದ ಮಹಾನಾದವೆ ಪ್ರಸಾದ ಕಾರಣ ಪ್ರಸಾದವಪ್ಪ ಶಬ್ದ ಶ್ರೋತ್ರಮುಖಕ್ಕೆ ಸಲುವ ದೆಸೆಯಿಂ ಶ್ರೋತ್ರಕ್ಕೆ ಪ್ರಸಾದಲಿಂಗ



ವಾಗಬೇಕಾಯಿತ್ತು. ಆತನು ನಿರವಯ ನಿರ್ಗುಣ ನಿರ್ವಸ್ತು ನಿರ್ಭಿನ್ನ ನಿರುಪಮನಾದ ದೆಸೆಯಿಂ ಗೋಪ್ಯವಾದಾತ್ಮಂಗೆ ಘನಕ್ಕೆ ಘನತೆಯನುಳ್ಳ ಮಹಾಲಿಂಗವಾಗಬೇಕಾಯಿತ್ತು. ಇಂತೀ ಷಟ್‌ಸ್ಥಲಂಗಳಾದ ದೆಸೆಯಿಂ ಸೌರಾಷ್ಟ್ರ ಸೋಮೇಶ್ವರನೋರ್ವ ಷಡುಲಿಂಗವಾಗಬೇಕಾಯಿತ್ತಯ್ಯ.

೧೪. ಬೀಜವೃಕ್ಷ ಯೋಗದಂತೆ ಭಕ್ತಸ್ಥಲ. ಜಲಮೌಕ್ತಿಕಯೋಗದಂತೆ ಮಾಹೇಶ್ವರಸ್ಥಲ. ಅನಲಕಾಷ್ಠಯೋಗದಂತೆ ಪ್ರಸಾದಿಸ್ಥಲ. ಕೀಟಭ್ರಮರಯೋಗದಂತೆ ಪ್ರಾಣಲಿಂಗಿಸ್ಥಲ. ಕರಕವಾರಿಯೋಗದಂತೆ ಶರಣಸ್ಥಲ. ಶಿಖಿಕರ್ಪುರಯೋಗದಂತೈಕ್ಯಸ್ಥಲ. ಇಂತು ನಿರ್ಭಾವ ನಿರ್ಭೇದ್ಯವಾದಂಗೆ, ಸೌರಾಷ್ಟ್ರ ಸೋಮೇಶ್ವರನಲ್ಲಿ ಲಿಂಗೈಕ್ಯವು.

೧೫. ಮಂಡೆ ಬೋಳಾದರೇನೋ ಹುಟ್ಟು ಬೋಳಾಗದನ್ನಕ್ಕರ? ತನು ನಿರ್ವಾಣವಾದರೇನೋ ಆಶೆ ನಿರ್ವಾಣವಾಗದನ್ನಕ್ಕರ? ಇಂದ್ರಿಯನಿಗ್ರಹವ ಮಾಡಿದೊಡೇನೋ ಷಟ್‌ಸ್ಥಲಾನುಗ್ರಹವಾಗದನ್ನಕ್ಕರ? ಸೌರಾಷ್ಟ್ರ ಸೋಮೇಶ್ವರಲಿಂಗ ಬರಿದೆ ಒಲಿವನೇ?

# ಗುರು ಉಪದೇಶ

೧೬. ಪರಶಿವನೆ ಅಪರಸ್ವರೂಪನಾಗಿ, ಗುರುಸಾಂಪ್ರದಾಯಕನಾದ ಸದ್ಗುರು ಸರ್ವಕಾರಣನು, ಭೋಗಮೋಕ್ಷೋಪಾಯನು, ನಿತ್ಯನು. ಆ ಸದ್ಗುರುವೆ ಪಂಚಸಂಜ್ಞೆ ಎನಿಸುವ ಪರಬ್ರಹ್ಮರೂಪನು. ತಾನೆ ಸೌರಾಷ್ಟ್ರ ಸೋಮೇಶ್ವರನು ಶಿಷ್ಯಕಾರಣನು.

೧೭. ಇನನ ಕಂಡ ತಮದಂತಾಯಿತ್ತೆನ್ನ ಗುರುವಿನುಪದೇಶ. ವಾಯುವಿನ ಕೈಯ್ಯಲ್ಲಿಪ್ಪ ಸೊಡರಿನಂತಾಯಿತ್ತೆನ್ನ ಗುರುವಿನುಪದೇಶ. ಉರಿಯ ಮುಖದೊಳಗಿರ್ಪ ಕರ್ಪುರದಿರವಿನಂತಾಯಿತ್ತೆನ್ನ ಗುರುವಿನುಪದೇಶ. ಮಹಾಘನ ಸೌರಾಷ್ಟ್ರ ಸೋಮೇಶ್ವರ ಸದ್ಗುರುವೆನ್ನ ಕರಸ್ಥಲಕ್ಕೆ ಕೃಪೆಮಾಡಿದ ಕಾರಣ ಸಕಲ ಪ್ರಪಂಚು ಬಿಟ್ಟೋಡಿತ್ತು.

೧೮. ಹೃದಯದೊಳಗಿಹನ್ನಕ್ಕರ ಲಿಂಗಪ್ರಾಣಿ, ಹೃದಯದಿಂದ ಹೊರಯಿಂಕೆ, ಹೊರವಂಟರೆ ಭವಿ. ಆ ಭವಿಗೆ ಜೀವವಿಲ್ಲ, ನಿರ್ಜೀವ. ಆ ಭವಿಗೆ ಉಪದೇಶವಿಲ್ಲ. ಉಪದೇಶವಮಾಡಬಾರದು. ಸತ್ತರೆ ಹೂಣಬಾರದು. ಹೂಣಿದಾತನ ಮನೆಯಹೊಕ್ಕು ಸುಯಿಧಾನವ ಕೊಂಡರೆ ಕುಂಭೀಪಾಕ ನಾಯಕನರಕ ತಪ್ಪದಯ್ಯ ಸೌರಾಷ್ಟ್ರ ಸೋಮೇಶ್ವರಾ.

---



# ಭಕ್ತಸ್ಥಲ.

೧೯. ಅಗಣಿತನದ್ವಯನನುಪಮನಪ್ಪ ಅಭವಂಗೆ ಭವವಿರಹಿತನಾಗಿ ಭಕ್ತಿಯ ಮಾಡಬೇಕಲ್ಲದೆ, ತಾನು ಭವದೊಳಿರ್ದು ಬಂಧನಕ್ಕೊಳಗಾಗಿ, ಮರ್ತ್ಯರಿಗೆ ತೊತ್ತಾಗಿ, ಮಾಯಾಪಾಶದ ಕಾಲು ಕಣ್ಣಿಯೊಳು ಸಿಲ್ಕಿ ಕಾಮಂಗೆ ಗುರಿಯಾಗಿ, ಕಾಲಂಗೆ ವಶವಾಗಿ ಮಾಡುವ ಭಕ್ತಿಗೆ ನಾಚರು ನೋಡಾ. ಮರ್ಮವನರಿತು ಮಾಡದ ಭಕ್ತಿ ಸೊಣಗನ ಹಿಂದೆ ಸೊಣಗ ಹರಿದಂತಾಯಿತ್ತಯ್ಯ ಸೌರಾಷ್ಟ್ರ ಸೋಮೇಶ್ವರಾ.

೨೦. ಶಿವಭಕ್ತಿ ಎಂಬುದು ಯುಕ್ತಿಯ ಪರಿಯಂತಲ್ಲ. ಮೂಗರು ಕಂಡ ಕನಸಿನಂತಿಪ್ಪುದು ಕಾಣಿರೆ. ಹೇಳಿ ಕೇಳಿ ಮಾಡುವದು ಯುಕ್ತಿಭಕ್ತಿ, ಸಾಧಕಂಗದಿಂದ ಮಾಡುವದು ಅಭ್ಯಾಸಭಕ್ತಿ, ಮನ ಕೂರ್ತು ಮಾಡುವುದು ಮುಕ್ತಿಭಕ್ತಿ, ಕೇಡಿಲ್ಲದೆ ಮಾಡುವುದು ನಿತ್ಯಭಕ್ತಿ. ಇದ್ದಂತಿದ್ದು ನಿಜವಪ್ಪುದು ನಿಜಭಕ್ತಿ, ಈ ನಿಜಭಕ್ತಿಯಲ್ಲಿ ಭರಿತರು ಸೌರಾಷ್ಟ್ರ ಸೋಮೇಶ್ವರ ನಿಮ್ಮ ಶರಣರು.

೨೧. ಭಕ್ತಿ ಆಚಾರ ಪಥವಿಡಿದು ನಲನಲಿದುಲಿದರೂ ಲಿಂಗಸಾಹಿತ್ಯವಿಲ್ಲ. ಮನವ ಲಿಂಗದಲ್ಲಿ ನೆಲೆಗೊಳಿಸುವೆನೆಂದು ಧ್ಯಾನ ಮೌನದಲ್ಲಿ ನಿಂತರೂ ಲಿಂಗಸಾಹಿತ್ಯವಿಲ್ಲ. ಸರ್ವ ಪ್ರಪಂಚವು ವಾಯುವಿಂದ ತೋರುತಿರಲು ಆ ಪ್ರಪಂಚವನಳಿದು ಲಿಂಗವನೊಡವೆರಿಸುವೆನೆಂದು ಉಶ್ವಾಸ ನಿಶ್ವಾಸಂಗಳಂ ಪಿಡಿದು ನಿಲಿಸಿದರೂ ಲಿಂಗಸಾಹಿತ್ಯವಿಲ್ಲ. ಸದ್ಭಕ್ತಿವೆತ್ತ ಭಾವ ಪ್ರಸನ್ನತೆಯಿಂ ಕಂಗಳ ಕಳೆದು, ಜಿಹ್ವೆಯ ಕೊಯ್ದು, ಶಿರವನರಿದು, ಹಸ್ತವನುತ್ತರಿಸಿತ್ತರೂ ಲಿಂಗಸಾಹಿತ್ಯವಿಲ್ಲ. ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿ ಎಂಬ ಅಷ್ಟಾಂಗಯೋಗ ಗಟ್ಟಿಗೊಂಡು ಪ್ರಾಣ ಮನ ಪವನ ಹುರಿಗೂಡಿ, ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞೆ ಎಂಬ ಷಡಾಧಾರ ಬಳಿವಿಡಿದು ನೆತ್ತಿಯಿಂದುತ್ತರಕ್ಕೆ ಉಚ್ಚಳಿಸಿ ಹಾಯ್ದು ನಡುನೆತ್ತಿ ತೂತಾದರೂ ಲಿಂಗಸಾಹಿತ್ಯವಿಲ್ಲ. ಸತ್ಯ, ಸಮತೆ, ಸಮಾಧಾನ, ಸದ್ಭಾವ, ವಿರಕ್ತಿಯಿಂದತ್ಯಾನಂದ ತೋರುತಿರಲು ಅದು ನೆಲೆಗೊಂಡು ಸಿಲ್ಲದಾಗಿ ಹೇಳದೆ ಬಂದಿತ್ತು, ಕೇಳದೆ ಹೋಯಿತ್ತು. ಸೌರಾಷ್ಟ್ರ ಸೋಮೇಶ್ವರನ ನಿಜವನರಿಯದೆ ಅಣುಭಾವವ ಮಾಡಿ ಫಲವೇನಯ್ಯಾ.

೨೨. ವೈದಿಕರಪ್ಪ ವೇದವಿತ್ತುಗಳೊಂದು ಕೋಟಿಗೆ ಅನ್ನವನಿಕ್ಕಿದ ಫಲಕ್ಕೆ, ಕೋಟಿ ಮಿಗಿಲು ಶಿವಶರಣಂಗೆ ಒಂದು ಭಿಕ್ಷವನಿಕ್ಕಿದ ಫಲ. ಕೋಟಿ ಕನ್ಯಾದಾನದ ಫಲಕ್ಕೆ ಮಿಗಿಲು ಒಬ್ಬ ಭಸ್ಮಾಂಗಿಯ ಒಂದುವೇಳೆ ಯತೃಪ್ತಿ. ಇದಕ್ಕೆ ಸಾಕ್ಷಿ "ಕ್ಷೀರಕುಂಭ ಸಹಸ್ರಾಣಿ। ಘೃತಕುಂಭ ಸತಾನಿಜ। ಭಸ್ಮಾಂಗಿ ಭಿಕ್ಷ ಮಾತ್ರೇಣ। ಕೌಪಿಯಾಗ್ರಫಲಂ ಭವೇತ್।" ಎಂದುದಾಗಿ, ಚತುರ್ವೇದಿಗಳಿಗೆ ಅನ್ನವನಿಕ್ಕಿದ ಅಕ್ಷಪಾದಾಗೆ ಗೋವಧೆ ಬಂದಿತ್ತು. ಒಬ್ಬ ಶಿವಶರಣ ಚೋಳ ದಾಸ ಉಣಲುಡಲಿತ್ತ ಕೈಯ್ಯಾಡನೆ ಹೊನ್ನಮಳೆ ತವನಿಧಿಯ ಹಡೆದರು. ಇದುಕಾರಣ ನೆಮ್ಮುಗೆವಿಡಿದು ಮಾಡುವ ಭಕ್ತಂಗೆ ಇದೆ ಮಾಟವಯ್ಯ ಸೌರಾಷ್ಟ್ರ ಸೋಮೇಶ್ವರಾ.

೨೩. ಷಟ್‌ತ್ರಿಂಶ ತತ್ವಂಗಳೆ ದೇಹವಾಗಿ, ಪರಶಿವನದಕ್ಕೆ ದೇಹಿಯಾಗಿಪ್ಪದರಿಂದ ತತ್ವಮಯವಾದ ಭಕ್ತನಂಗದಲ್ಲಿ ಪ್ರಾಣಮಯವಾದ ಶಿವನಿಪ್ಪನಯ್ಯ! ತತ್ವಂಗಳು ತತ್ವಂಗಳ ನೈದುವಲ್ಲಿ ಭಕ್ತನು ಜ್ಞಾನಕಾಯವಾಗಿಪ್ಪನಯ್ಯ! ಆ ಕಾಯದಲ್ಲಿ ಕಳಾಸ್ವರೂಪವಾಗಿಪ್ಪನಯ್ಯ ಶಿವನು. ಇಂತು ಆವಾಗಳೂ ಅಗಲನಯ್ಯ ಶಿವನು. ಭಕ್ತದೇಹಿಕನಯ್ಯ ನಮ್ಮ ಸೌರಾಷ್ಟ್ರ ಸೋಮೇಶ್ವರಾ.

೨೪. ದೇಹಪ್ರಾಣದಂತೆ ಕೂಡಿಪ್ಪ ಭಕ್ತ ಜಂಗನು ಉಭಯದನುವನೇನೆಂಬೆನಯ್ಯ! ಅಂಗದೊಳಗನುಭಾವ ಸಾಹಿತ್ಯ, ಆಚಾರಲಿಂಗ ಸಂಬಂಧ, ಚಿದಂಗದೊಳಗೆ ಸ್ವಾನುಭಾವ ಸಮ್ಯಜ್ಞಾನದುದಯ, ಪ್ರಾಣಲಿಂಗ ಸಂಬಂಧ, ಇಂತೀ ಉಭಯದನುವನೇನೆಂಬೆನಯ್ಯ. ಅರಿವಿನೊಳಗನುಭಾವ ಸಾಹಿತ್ಯ. ಅನುಭಾವದೊಳಗರಿವು ಇಪ್ಪಂತೆ ಭಕ್ತನೊಳಗೆ ಜಂಗಮ, ಜಂಗಮದೊಳಗೆ ಭಕ್ತ. ಇಂತೀ ಭಕ್ತ ಜಂಗಮದ ಸಕೀಲ ಸಂಬಂಧವ ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣರೆ ಬಲ್ಲರು.

೨೫. ಬಲ್ಲೆನೆಂಬುದು ಮಾಯೆ, ಅರಿಯೆನೆಂಬುದು ಮಾಯೆ, ಒಲ್ಲೆನೆಂಬುದು ಮಾಯೆ, ಒಲಿವೆನೆಂಬುದು ಮಾಯೆ, ಜೀವನೆಂಬುದು ಮಾಯೆ, ಮುಕ್ತನೆಂಬುದು ಮಾಯೆ, ಸತಿ ಸುತ ಪಿತ ಮಾತೆ ಇವರೆಲ್ಲರು ಮಾಯೆ, ಭೃತ್ಯ ಭ್ರಾತ್ರಾದಿಗಳೆಲ್ಲ ಮಾಯೆ, ಆನೆಂಬುದು ಮಾಯೆ, ನೀನೆಂಬುದು ಮಾಯೆ, ಸೌರಾಷ್ಟ್ರ ಸೋಮೇಶ್ವರಾ ತಾನೆಂಬುದು ಮಾಯೆ.



೨೬. ಮಹಿಯೆ ಎಂಬ ಕುಟ್ಟಿಮದ ಭಿತ್ತಿಯ ಮೇಲೆ ಮುಚ್ಚಿದಂದ ಕಟಾಹ ಅಜನ ತತ್ತಿಯೊಳಗಣ ಪಶು ಜೀವರೆಲ್ಲರೂ ನೆರೆದು ಕರ್ಮವೆಂಬುದೊಂದು ಬಟ್ಟಲೊಳಗೆ, ಮೋಹ, ರಾಗ, ದ್ವೇಷ, ತಾಪ, ಶೋಕ ಹರುಷ, ವೈಚಿಂತ್ಯವೆಂಬ ಏಳು ಮಲಂಗಳನೊಂದಾಗಿ ಕಲಿಸಿ ತಿನ್ನುತ್ತ ಮೂರುಮಲಂಗಳ ಬೇರೆ ಬೇರೆ ಅಗಿವುತ್ತ, ವಿಷಯವೆಂಬ ರಸವ ಕುಡಿದು, ಅಜ್ಞಾನವೆಂಬುದೊಂದೆ ಹಾಸಿಕೆಯಲ್ಲಿ ಮಲಗಿ, ಮೂರ್ಛೆ ತಿಳಿಯದೆ ಇಪ್ಪುದ ಕಂಡು ನಾಚಿತ್ತಯ್ಯ ಎನ್ನ ಮನ. ನಿಮ್ಮಂತರಂಗವೆಂಬ ಚಿದಂಬರದಲ್ಲಿ ನಿಶ್ಶೂನ್ಯವಾಗಿರಿಸೆನ್ನ ಸೌರಾಷ್ಟ್ರ ಸೋಮೇಶ್ವರಾ.

೨೭. ಎಲ್ಲಿ ಸುಳಿದಡೆ ಅಲ್ಲಲ್ಲಿ ಉಪಾಧಿ ಬಿಡದಯ್ಯ! ಈ ಉಪಾಧಿಗೆ ಅಸಾಯವನಿತ್ತು ನಿರುಪಾಧಿಯಲ್ಲಿ ನಿಲಿಸಯ್ಯ! ಎಲ್ಲ ಬಯಕೆಯರತ ಬಟ್ಟೆಯ ತೋರಯ್ಯ! ಸಹಜ ಸಮ್ಯಕ್ತ್ವವನಿತ್ತು ಸಲಹಯ್ಯ! ಸೌರಾಷ್ಟ್ರ ಸೋಮೇಶ್ವರಾ.

೨೮. ಟಕ್ಕೆಯೊಳಗೆ ಮಾಣಿಕ್ಯ ಉಂಟೇ ಅಯ್ಯ? ರಾಮಟದಲ್ಲಿ ಮೃಗನಾಭಿಯುಂಟೆ ಅಯ್ಯ? ಕಲ್ಲಮೊರಡಿಯೊಳಗೆ ಚಿಲುಮೆಯಗ್ಘವಣಿಯುಂಟೆ ಅಯ್ಯ? ಸರ್ವದುರ್ಗುಣಿಯಾನು. ಎನ್ನಲ್ಲಿ ಅವಗುಣವನರಸುವಿರಿ. ನೀವೆ ಕೃಪೆ ಮಾಡಯ್ಯಾ ಸದ್ಗುರುವೆ ಸೌರಾಷ್ಟ್ರ ಸೋಮೇಶ್ವರಾ.

೨೯. ಅಯ್ಯ ಹುಲ್ಲುಮೊರಡಿಯೊಳಗೆ ಕಲ್ಪತರುವನರಸುವರೆ? ಅಯ್ಯ ಹಾವುಮೆಕ್ಕೆಯಲ್ಲಿ ದ್ರಾಕ್ಷಫಳವನರಸುವರೆ? ಅಯ್ಯ ಗೋರಿಕಲ್ಲುಗಳೊಳಗೆ ಚಿಂತಾಮಣಿಯನರಸುವರೆ? ಅಯ್ಯ ರಿತಿಕೆಯಲ್ಲಿ ಅಪರಂಜಿಯನರಸುವರೆ? ಅಯ್ಯ ಬಯಲಲ್ಲಿ ಅರವಿಂದವನರಸುವರೆ? ಅಯ್ಯ ಹೆಮ್ಮರದಲ್ಲಿ ಸುಗಂಧವನರಸುವರೆ? ಅಯ್ಯ ಸರ್ವ ಪ್ರಪಂಚಿಯಾನು. ಎನ್ನೊಳಗದಾವ ಗುಣವನರಸದೆ ನೀವೇ ಕರುಣಿಸಯ್ಯ ಕಾರುಣ್ಯಮೂರ್ತಿಯೆ ಸೌರಾಷ್ಟ್ರ ಸೋಮೇಶ್ವರಾ.

೩೦. ಹದಿನಾರಂಗುಲದುದ್ದ ಸರ್ಪನ ವಿಷ ಕೆಟ್ಟು, ಎರಡು ಕಾಲನಾಕಾಶದಲೂರಿ ಬಂದಿತ್ತು. ಬಹುಮುಖದ ಪಕ್ಷಿ, ಏಕ ಮುಖವಾಗಿ, ಚಂಚು ಪುಟದಲ್ಲಿದ್ದ ರತ್ನ ಪಕ್ಷಿಯ ನುಂಗಿ ರತ್ನ ಕೆಟ್ಟಿತ್ತು. ಸೌರಾಷ್ಟ್ರ ಸೋಮೇಶ್ವರನಲ್ಲಿ ಅರಿಸುವ ಬಿನ್ನಿರೆ ಸುಜ್ಞಾನ ಭರಿತರು.

ಟೀಕು:— ಷೋಡಶಾಂಗುಲ ಪ್ರಮಾಣಿನಿಂ ಚರಿಸುವ ಪ್ರಾಣವಾಯು, ಚೇತನವಿಡಿದಿರ್ಪ ಮನೋಕುಂಡಲಿಯ ಶಂಕಾ ವಿಷಯವ

ಳಿದು, ಜ್ಞಾನ ಕ್ರಿಯಾಚಾರವ ಚಿದಾಕಾಶದಲ್ಲಿ ಸಂಬಂಧಿಸಲೆಂಬುದೀಗ, ಹದಿನಾರಂಗುಲದುದ್ದ ಸರ್ಪನ ವಿಷ ಕೆಟ್ಟು ಎರಡು ಕಾಲನಾಕಾಶದಲ್ಲೂರಿ ನಿಂದಿತ್ತೆಂಬ ಶಬ್ದಕ್ಕರ್ಥ. ಇಂತಾಗಲು, ಸರ್ವತೋ ಮುಖವಾಗಿ ಚರಿಸುವ ಜೀವ ಹಂಸನ ಚರಿತ್ರವಳಿದು, ಸುಜ್ಞಾನ ಕ್ರಿಯಲ್ಲೇಕಮುಖವಾಗಲಾಗಿ, ಸದ್ಭಾವದಲ್ಲಿರ್ದವಿರಳ ಶಿವತತ್ವವಾ ಜೀವಹಂಸ ನನಗ್ರಹಿಸಿ ಅಲ್ಲಿಯೆ ತಲ್ಲಿಯ್ಯವಾಯಿತ್ತೆಂಬುದೀಗ, ಬಹು ಮುಖದ ಪಕ್ಷಿ ಏಕ ಮುಖವಾಗಿ, ಚಂಚು ಪುಟದಲ್ಲಿದ್ದ ರತ್ನ ಪಕ್ಷಿಯ ನುಂಗಿ ರತ್ನ ಕೆಟ್ಟಿತ್ತೆಂಬ ಶಬ್ದಕ್ಕರ್ಥ. ಈ ಭೇದವ ಜ್ಞಾನ ಗುರುಮುಖದಿಂ ಪರಾಮರಿಸಿಕೊಂಬ ಬನ್ನಿ ಸುಜ್ಞಾನ ಭರಿತರೆಂಬದನ್ನುಪದೇಶವಾಗಿ ನಿರೂಪಿಸುತ್ತಿರ್ದ ಶರಣನೆಂಬುದೀಗ, ಸೌರಾಷ್ಟ್ರ ಸೋಮೇಶ್ವರನಲ್ಲಿ ಅರಸುವ ಬನ್ನಿ ಸುಜ್ಞಾನ ಭರಿತರೆಂಬ ಶಬ್ದಕ್ಕರ್ಥ.

೩೧. ಜಗದಗಲದ ಬಲೆಯನಗಲ ಬಲ್ಲವರ ಕಾಣೆ. ಮುಗಿಲುದ್ದಂಬರವನುಗಿಯ ಬಲ್ಲವರ ಕಾಣೆ. ತಗದಿಪ್ಪ ಶುನಕನ ಬಗೆಯ ಬಲ್ಲವರ ಕಾಣೆ. ಅಗಡಾನೆ ಬಿಗಿದು ಬಲ್ಪಿಡಿಯಿತ್ತಲ್ಲಾ ಜಗವೆಲ್ಲನ. ಸೌರಾಷ್ಟ್ರ ಸೋಮೇಶ್ವರನ ನಿಜವನರಿಯದೆ, ಮುಳುಗಿದರಲ್ಲಾ ಮುಪ್ಪುರನಲ್ಲಿ.

ಟೀಕು:— ಚತುರ್ದಶ ಭುವನವನೊಳಕೊಂಡಿಪ್ಪ ಮಾಯಾಪಾಶವೆಂಬುದೀಗ, ಜಗದಗಲದ ಬಲೆ ಎಂಬ ಶಬ್ದಕ್ಕರ್ಥ. ಅಂತಪ್ಪ ಮಾಯಾಪಾಶವ ನಿವೃತ್ತಿಯ ಮಾಡಲರಿಯರೆಂಬುದೀಗ, ಬಲೆಯನಗಲ ಬಲ್ಲವರ ಕಾಣೆನೆಂಬ ಶಬ್ದಕ್ಕರ್ಥ. ಮುಗಿಲೆಂದೊಡೆ ಮಾಯಾಡಂಬರ, ಮಾಯಾಡಂಬರವನವಗ್ರಹಿಸಿಕೊಂಡಿರ್ಪುದು ಜ್ಞಾನ, ಅಂತಪ್ಪ ಅಜ್ಞಾನಾಂಬರವ ನಷ್ಟವ ಮಾಡಬಾರದಾರಿಗೆಯು ಎಂಬುದೀಗ ಮುಗಿಲುದ್ದಂಬರವ ನುಗಿಯ ಬಲ್ಲವರ ಕಾಣೆನೆಂಬ ಶಬ್ದಕ್ಕರ್ಥ. ಜ್ಞಾನಾಜ್ಞಾನ ಭಿನ್ನ ಕ್ರಿಯಾಚಾರವ ನಷ್ಟವ ಮಾಡುವರಿಲ್ಲವೆಂಬುದೀಗ, ಹಗಲಿರುಳು ಸೀಮೆಯ ಮೀಗೆವಿರುವರ ಕಾಣೆನೆಂಬ ಶಬ್ದಕ್ಕರ್ಥ. ವಾಯು ಪಾಶದಿಂ ಬದ್ಧವಾದ ಪಂಚೇಂದ್ರಿಯಂಗಳ ನಿವೃತ್ತಿ ಮಾರ್ಗವನರಿಯರೆಂಬುದೀಗ, ತಗದಿಪ್ಪ ಶುನಕನ ಬಗೆಯ ಬಲ್ಲವರ ಕಾಣೆನೆಂಬ ಶಬ್ದಕ್ಕರ್ಥ. ಮದೋನ್ಮತ್ತವಾದ ಅಹಂಕಾರವೆಂಬ ಗಜವು ತ್ರಿಜಗದಲುಳ್ಳ ದೇವ ದಾನವ ಮಾನವರನವಗ್ರಹಿಸಿತ್ತೆಂಬುದೀಗ, ಅಗಡಾನೆ ಬಿಗಿದು, ಬಲ್ಪಿಡಿಯಿತ್ತಲ್ಲಾ ಜಗವೆಲ್ಲವನೆಂಬ ಶಬ್ದಕ್ಕರ್ಥ. ಅಂತು ಅಹಂಕಾರದಲ್ಲಿ ವಶಗತರಾದ ದೇವದಾನ ಮಾನವರು



ಲಿಂಗದ ನಿಜವನರಿಯದೆ, ತನುತ್ರಯಂಗಳಲ್ಲಿ ಸಿಲ್ಕಿ ಕೆಟ್ಟರೆಂಬುದೀಗ, ಸೌರಾಷ್ಟ್ರ ಸೋಮೇಶ್ವರನ ನಿಜವನರಿಯದೆ ಮುಳುಗಿದರಲ್ಲಾ ಮುಪ್ಪುರದಲ್ಲಿ ಎಂಬ ಶಬ್ದಕ್ಕರ್ಥ.

೩೨. ತಲೆಯಿಲ್ಲದ ಕಾಗೆ ನೆಲದಲ್ಲಿ ನಡೆಯಿತ್ತು. ಹುಲಿ ನಲಿದು ನಿಲುಗಿಸಿ ಗೆಜ್ಜೆಗಟ್ಟಿ ನಲಿದಾಡಿತ್ತು. ಬಲುಹೆಸಿಸಿದ ಕರಡಿ ಹಾಡಿ ಹರಿಸಿ ಬೆಳೆಯಿಸಿತ್ತು. ಕಾಳರಕ್ಕಸಿಯ ಮಗುವ ಚಂದ್ರಸೂರ್ಯರ ರಾಟಳದ ಹುರಿಯೊಳಗೆ ತಿರುಗಿತ್ತು. ಕಳವಳಿಸುವ ಕಪಿಯ ಭೂತ ಹೊಡೆದು ಜೇಳೂರಿ ಘಾಳಿಯೊಳು ನಿಂದು ಧೂಳಿಯ ಹೊಯ್ವುತ್ತಿದೆ. ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಕಾಣದೆ ಕಣ್ಣಡಕದ ಕಣ್ಣಿನಂತೆ, ಕಣ್ಣೆನಿಸಿ ಕೆಟ್ಟೆನಯ್ಯ ಶಿವಧೊ ಶಿವಧೊ.

೩೩. ತನುವೆಂಬ ಮನೆಗೆ ಅಸ್ಥಿಂಗಳು, ಚಮ್ಮದ ಹಂಜರ, ನರದ ಭೀಮುಗಟ್ಟು, ಮೂರುವರೆಕೋಟಿ ರೋಮಂಗಳು ಹೋದರೆ, ಮಾಂಸದ ಭಿತ್ತಿಗೆ, ರಸದ ಹೊಸಣೆ, ಸುಖದ ನೆಲಗಟ್ಟು, ರಕ್ತದ ಸಾರಣೆ, ಮಜ್ಜೆಯ ಕಾರಣೆ, ನೇತ್ರ ಶ್ರೋತ್ರ ಘ್ರಾಣ ಗುದ ಗುಹ್ಯವೆಂಬ ಎಂಟು ಗವಾಕ್ಷ, ಈ ಬಾಗಿಲಿಗೆ ಅಧರ ತಾರುಗದ ದಂತಂಗಳ ಗುಳಿ, ಇಂತಪ್ಪ ಗೃಹಕೆ, ದ್ರವ್ಯವಾವವೆಂದಡೆ, ವಾತ ಪೈತ್ಯವೆಂಬ ಸುಯಿಧಾನ ಸ್ವೇದನೆಂಬಗ್ಗವಣಿ, ಅನ್ನಪಾನಂಗಳೆಂಬ ಕಟ್ಟಿಗೆ, ಉದರಾಗ್ನಿಯಿಂ ಪಾಕವ ಮಾಡಿ, ಅನುಭವಿಸುತ್ತಿಹ ಜೀವನು. ಮಲಮೂತ್ರವೆಂಬ ವಿತ್ತದಿಂ ಎಂಬತ್ತೆರಡು ಸಾವಿರ ನಾಳದಿಂದ್ರಿಯವಪ್ಪುದು. ಸಯವಾಡಿಪೆನೆಂಬ ಜೀವಂಗೆ ಮನವೆಂಬ ಸತಿ, ತನ್ಮಾತ್ರೆಗಳೆಂಬ ಸುತರು, ಇಂತಪ್ಪ ಸಂಸಾರ ಸಾಮಗ್ರಿಯಿಂ ಜೀವಿಸುತ್ತಮಿರಲೊಡನೆ ಕಾಲಚಕ್ರಂಗಳು ತಿರುಗಲೊಡನೆ ಜ್ಞಾನಾಗ್ನಿಯಿಂ ಮನೆ ಬೆಂದು ಎಲ್ಲರೂ ಪ್ರಳಯಕ್ಕೊಳಗಾದರು. ಆನೊಬ್ಬನೆ ನಿತ್ಯಲಿಂಗ ಸಂಗಿ ಉಳಿದೆ ನೋಡಯ್ಯ ಸೌರಾಷ್ಟ್ರ ಸೋಮೇಶ್ವರಾ.

೩೪. ನೆಣದ ಕೊಳ, ರಕ್ತದ ಹುತ್ತು, ಕೀವಿನ ಬಾವಿ, ರೋಮದ ಸೀಮೆ, ತ್ವಕ್ಕಿನ ಇಕ್ಕೆ, ಮಾಂಸದ ವಾಸ, ಕರುಳಿನ ತಿರುಳು, ನರದ ಕರವತಿಗೆ, ಮಲಮೂತ್ರಂಗಳ ನೆಲೆವನೆ, ಕ್ರಿಮಿಯ ಸಮೂಹ, ಕೀಟಕದ ಕೋಟಾರ, ಶುಕ್ಲದ ಕೋಶ, ಎಲುವಿನ ಬಲುಹಿಂದಿಪ್ಪವುದೀ ಕಾಯ ಹೇಯವಯ್ಯ. ಇಂತಾಗಿ ತೋರಿ ಹಾರುವ ದೃಶ್ಯಾದೃಶ್ಯ ಮೀದೇಹವಯ್ಯ. ಇದ

ನನ್ನದೆಂದು ನಚ್ಚಿ, ಮಚ್ಚಿ, ಹೆಚ್ಚಿ, ಕೆಚ್ಚುಗೊಂಡು ಒಚ್ಚತ ಹೋದ
ಎನ್ನ ಮನಕ್ಕೆ ಇನ್ನಾವುದು ಗತಿಯೊ ಸೌರಾಷ್ಟ್ರ ಸೋಮೇಶ್ವರಾ?

೩೫. ಅಯ್ಯ ತನುವಿರ್ದಂತೆ ಮರಣ ಶೋಕ ಭಯಂಗಳು ಎಂತು
ತ್ತಾರವಹವೆಂದರೆ ಏನಯ್ಯ! ಅಯ್ಯ ಮನವಿದ್ದಂತೆ ಮಲ ಮದ ಮಾಯಾ
ಕರ್ಮಂಗಳು ಎಂತು ಹರಿವವೆಂದರೆ ಏನಯ್ಯ! ಅಯ್ಯ ನಿಮ್ಮ ನೋಡುವ
ಕಂಗಳಿಗೆ ವಿವೇಕಾಂಜನಸಿದ್ಧಿ ಎಂತಹುದೆಂದರಿಯೆನಯ್ಯ! ನಿಮ್ಮನರು
ಹಿಸಿ ಎನ್ನ ಮರೆವಂತೆ ಕರುಣಿಸಯ್ಯ ಕಾರುಣ್ಯ ಮೂರ್ತಿಯೆ ಸೌರಾಷ್ಟ್ರ
ಸೋಮೇಶ್ವರಾ.

೩೬. ತಿಳಿದ ತಿಳಿಗೊಳಿದ ತಳಿತ ತಾವರೆಯರಳ ತಂಡುಲದ ರುಚಿಯ
ಕಳಹಂಸೆ ಬಯಸುವಂತೆ, ಸುಧಾ ಕಿರಣನಿಂ ಬೆಳಗಿದ ಬೆಳುದಿಂಗಳ
ರುಚಿಯ ಚಕೋರ ಬಯಸುವಂತೆ, ಕಾರ್ಗಾಲ ಮುಂಬನಿಯ ಸುಖವ
ಚಾದಗೆ ಬಯಸುವಂತೆ, ಆನು ನಿಮ್ಮ ಶರಣರ ಬರವ ಹಾರಿ ಹಾರಿ ಹಂಬ
ಲಿಸುತ್ತಿದ್ದೇನೆ ಕರುಣಿಸಯ್ಯಾ. ಎಲೆ ಸೌರಾಷ್ಟ್ರ ಸೋಮೇಶ್ವರಾ ನಿಮ್ಮ
ಧರ್ಮ ನಿಮ್ಮ ಧರ್ಮ.

೩೭. ಚೈತನ್ಯಕ್ಕೆ ಚೈತನ್ಯ ನೀನಾಗಿ, ನಿನ್ನೊಳಗೆ ಪ್ರಾಣ, ಪ್ರಾಣ
ನೊಳಗೆ ನೀನಿಪ್ಪ ಭೇದವ ನಿಮ್ಮ ಜ್ಞಾನದಿಂದವೆ ಕಂಡು, ನೀ ನಾನೆಂಬ
ಭೇದವ ಮರೆದು ನಿಜಲಿಂಗ ಪ್ರಾಣಸಂಗ ಸುಖಿಯಾಗಿಪ್ಪ ಶರಣರ
ತೋರಿಸಾ ಎನಗೆ ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಧರ್ಮ ನಿಮ್ಮ ಧರ್ಮ.

೩೮. ಅಂಗದಲ್ಲಿ ಲಿಂಗವಿರಲು ಎನ್ನ ತನು ನಿರ್ಮಳವಾಯಿತ್ತು.
ಮನದಲ್ಲಿ ಅರಿವು ಇರಲು ಎನ್ನ ಮನ ನಿರ್ಮಳವಾಯಿತ್ತು. ಪ್ರಾಣದಲ್ಲಿ
ಪ್ರಸಾದವಿರಲು ಎನ್ನ ಪ್ರಾಣ ನಿರ್ಮಳವಾಯಿತ್ತು. ಎನ್ನ ಪಂಚೇಂದ್ರಿ
ಯಂಗಳಲ್ಲಿ ಪಂಚಲಿಂಗವೆಡೆಗೊಂಡಿರಲು ಇಂದ್ರಿಯಂಗಳು ನಿರ್ಮಳವಾ
ದವು. ಸೌರಾಷ್ಟ್ರ ಸೋಮೇಶ್ವರನ ಶರಣರ ಸಂಗದಿಂದ ಶಿವಪ್ರಸಾದ ದೊರೆ
ಕೊಂಡಿತ್ತಾಗಿ, ಸರ್ವಾಂಗ ಲಿಂಗವಾಯಿತ್ತು.

೩೯. ಬಸವಣ್ಣನ ಭಕ್ತಿಸ್ಥಲ, ಮಡಿವಳ ಮಾಚಣ್ಣನ ಮಹೇಶ್ವರ
ಸ್ಥಲ, ಘಟ್ಟವಾಳಯ್ಯ ಮುದ್ದಣ್ಣನ ಪ್ರಸಾದಿಸ್ಥಲ; ಚನ್ನಬಸವಣ್ಣನ ಪ್ರಾಣ
ಲಿಂಗಿಸ್ಥಲ, ಪ್ರಭುವಿನ ಶರಣಸ್ಥಲ, ಸೊಡ್ಡಳ ಬಾಚರಸರ ಐಕ್ಯಸ್ಥಲ, ಅಜ
ಗಣ್ಣನ ಆರೂಢ, ನಿಜಗುಣನ ನಿಬ್ಬೆರಗು, ಅನುಮಿಷನ ನಿಶ್ಚಲ, ಮಹಾ
ದೇವಿಯಕ್ಕನ ಜ್ಞಾನ, ನಿಂಬಿಯಕ್ಕನ ಜ್ಞಾನ ನಿಶ್ಚಯ, ಮುಕ್ತಾಯ



ಕ್ಕನ ಅಕ್ಕರು, ಸತ್ಯಕ್ಕನ ಯುಕ್ತಿ, ಅಲ್ಲಾಳಿಯಕ್ಕನ ಸತ್ಯಮತಿ, ರೇವಣ
ಸಿದ್ದಯ್ಯ ದೇವರ ನಿಷ್ಠೆ, ಸಿದ್ಧರಾಮ ತಂದೆಗಳ ಮಹಿಮೆ, ಮರುಳಸಿದ್ಧ
ಯ್ಯದೇವರ ಅದೃಷ್ಟ ಪ್ರಸಾದನಿಷ್ಠೆ, ಏಕೋರಾಮಯ್ಯಗಳ ಆಚಾರನಿಷ್ಠೆ,
ಪಂಡಿತಾರಾಧ್ಯರ ಸ್ವಯಂಪಾಕ, ಮುಗ್ಧ ಸಂಗಯ್ಯ, ಮೈದುನರಾಮಣ್ಣ,
ಬೇಡರ ಕನ್ನಪ್ಪ, ಕೋಳೂರು ಕೊಡಗೂಸು ತಿರುನೀಲನಕ್ಕರು, ರುದ್ರ
ಪಶುಪತಿಗಳು, ದೀಪದ ಕಲಿಯರು, ಮೂಢಭಕ್ತಿ ಎನ್ನೊಳಗೆಂದಿಪ್ಪದೊ
ಸೌರಾಷ್ಟ್ರ ಸೋಮೇಶ್ವರಾ?

೪೦. ಬಸವಣ್ಣನೆನ್ನ ಅಂಗ, ಮಡಿವಾಳನೆನ್ನ ಮನ, ಪ್ರಭು ಎನ್ನ
ಪ್ರಾಣ, ಚನ್ನಬಸವಣ್ಣನೆನ್ನ ಕರಸ್ಥಲದಲಿಂಗ, ಘಟ್ಟವಾಳನೆನ್ನಭಾವ,
ಸೊಡ್ಡಳಬಾಚರಸರೆನ್ನ ಅರಿವು, ಮಹದೇವಿಯಕ್ಕನೆನ್ನ ಜ್ಞಾನ, ಮುಕ್ತಾ
ಯಕ್ಕನೆನ್ನ ಅಕ್ಕರು ಸತ್ಯಕ್ಕನೆನ್ನ ಯುಕ್ತಿ, ನಿಂಬಿಯಕ್ಕನೆನ್ನ ನಿಶ್ಚಯ,
ಅಲ್ಲಾಳಿಯಕ್ಕನೆನ್ನ ಸಮತೆ, ಅನುಮಿಷನೆನ್ನ ನಿಶ್ಚಲ, ನಿಜಗುಣನೆನ್ನ
ಕ್ಷಮೆ, ರೇವಣಸಿದ್ಧೇಶ್ವರನೆನ್ನ ನೇತ್ರ, ಸಿದ್ಧರಾಮತಂದೆಗಳೆನ್ನ ನೇತ್ರದ
ದೃಕ್ಕು, ಮರಳಸಿದ್ಧೇಶ್ವರದೇವರೆನ್ನ ಶ್ರೋತ್ರ, ಪಂಡಿತಾರಾಧ್ಯರೆನ್ನ ಜಿಹ್ವೆ,
ಏಕೋರಾಮತಂದೆಗಳೆನ್ನ ನಾಸಿಕ, ಅಸಂಖ್ಯಾತರೆನ್ನ ಅವಯವ, ಪುರಾ
ತರೆನ್ನ ಪುಣ್ಯದ ಪುಂಜ, ಏಳುನೂರೆಪ್ಪತ್ತು ಅಮರಗಣಂಗಳೆನ್ನ ಗತಿಮತಿ,
ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣರ ಪಡಿದೊತ್ತಯ್ಯ.

೪೧. ಸಾನುರಾಗ ಸುಸಂಗವಾಗಿ ಸಾರತ ಸವೆದು ಆರತವಳಿದು,
ಸಾಕಾರ ಸನ್ಮೂರ್ತಿಯ ಸಂವಿತ್ತು ಸಂಸುಖವಾಗಿ, ಸಾನಂದ ವೇದ್ಯ
ವಾದ ಮಹಾಮಹಿಮರ ತೋರಿಸಯ್ಯ ಎನಗೆ. ಸೌರಾಷ್ಟ್ರಸೋಮೇಶ್ವರಾ
ನಿಮ್ಮ ಧರ್ಮ ನಿಮ್ಮ ಧರ್ಮ ನಿಮ್ಮ ಧರ್ಮ.

೪೨. ಯೋಗ ವಿಯೋಗವೆಂಬೆರಡಳಿದು, ನಿಮ್ಮ ನೆನಹು ಮನದಲ್ಲಿ
ನಿಜವಾಗಿ ಸಮ್ಯಜ್ಞಾನದಲ್ಲಿ ಪರಮ ಸುಖವಿಂಬುಗೊಂಡು, ಸದ್ಭಾವನೆಯೆ
ಪ್ರಸನ್ನವಾಗಿ, ಚಿದ್ಬಿಂದುವಿನೊಳು ಪ್ರತಿಬಿಂಬಿಸುತ್ತಿಪ್ಪ ಚಿದ್ಬ್ರಹ್ಮವನೊ
ಳಕೊಂಡ ಮಹಾ ಶರಣರ ತೋರಿ ಬದುಕಿಸಾ ಎನ್ನ ಸೌರಾಷ್ಟ್ರ ಸೋಮೇ
ಶ್ವರಾ ನಿಮ್ಮ ಧರ್ಮ ನಿಮ್ಮ ಧರ್ಮಾ.

೪೩. ಪಂಚಗವ್ಯದಿಂದಾದ ಗೋಮಯವ ತಂದಿರಿಸಿ ಪಂಚಾಮೃತ
ಸಂಪರ್ಕದಿಂ ಪಂಚಾಕ್ಷರಿಮಂತ್ರದಿಂ ಅಭಿವಂದಿಸಿ ಶಿವಜ್ಞಾನವಹ್ನಿಯಲ್ಲಿ

ದಹಿಸಿ, ಆ ವಿಭೂತಿಯಂ ಸುಕೃತದಿಂ ತೆಗೆದುಕೊಂಡು, ಎಡದ ಹಸ್ತದೊಳ್ಪಿಡಿದುಕೊಂಡು ಬಲದ ಹಸ್ತದಿಂ ಮುಚ್ಚಿಕೊಂಡು, ಜಲಮಿಶ್ರ ಮಾಡಿ ಲಲಾಟ ಮೊದಲಾಗಿರ್ದ ದಿವ್ಯಸ್ಥಾನಂಗಳೊಳು ಧರಿಸಿ ಲಿಂಗಾರ್ಚನೆಯ ಮಾಡುವ ಶರಣನಾತನೆ ವೇದವಿತ್ತು. ಆತನೆ ಶಾಸ್ತ್ರಜ್ಞ. ಆತನೆ ಸದ್ಯೋನ್ಮುಕ್ತನಯ್ಯ ಸೌರಾಷ್ಟ್ರ ಸೋಮೇಶ್ವರಾ.

೪೪. ಪಂಚಬ್ರಹ್ಮದಿಂದುದಯವಾದ ನಂದೆ, ಭದ್ರೆ, ಸುರಭಿ, ಸುಶೀಲೆ, ಸುಮನೆ ಎಂಬ ಪಂಚಗೋವಿನಿಂದಾದ, ವಿಭೂತಿ, ಭಸಿತ, ಭಸ್ಮ, ಕ್ಷರೆ, ರಕ್ಷೆ ಎಂಬ ಪಂಚನಾಮವಾಯಿತ್ತು. ಅದೆಂತೆಂದೊಡೆ, ಶಿವಜ್ಞಾನ ಸುಖದ ಮಹದೈಶ್ವರ್ಯ ಸ್ವರೂಪಿನಿಂ ವಿಭೂತಿಯಾಯಿತ್ತು. ಸಕಲ ಲೋಕಂಗಳ ಬಯಕೆಯಂ ಸುಟ್ಟ ನಿಃಕಾಮ ರೂಪಿನಿಂ ಭಸಿತವಾಯಿತ್ತು. ಪೂರ್ವ ಕರ್ಮವನುರುಪಿ ನಿಃಕರ್ಮರೂಪಿನಿಂ ಭಸ್ಮವಾಯಿತ್ತು. ಮಲಮಾಯೆಯ ಕಳೆವುದರಿಂ ಕ್ಷರೆಯಾಯಿತ್ತು. ಭೂತ ಪ್ರೇತ ಪಿಶಾಚ ರಾಕ್ಷಸಂಗಳ ಹೊದ್ದಲೀಯದಿಪ್ಪುದುರಿಂದ, ರಕ್ಷೆಯಾಯಿತ್ತು. ಇಂತಪ್ಪ ವಿಭೂತಿಯ ಮಹಾತ್ಮೆಯನರಿದು, ನೀನೊಲಿದ ವಿಭೂತಿಯ ನಾನು ಧರಿಸಿ ಬದುಕಿದೆನು ಕಾಣಾ ಸೌರಾಷ್ಟ್ರ ಸೋಮೇಶ್ವರಾ.

೪೫. ಏಕಮುಖದ ರುದ್ರಾಕ್ಷಿಯ ಒಂದನೆ ಪಶ್ಚಿಮದಲ್ಲಿ ಧರಿಸುವುದಯ್ಯ. ದ್ವಿತ್ರಿದ್ವಾದಶಮುಖದ ಮೂರುಮಣಿಯ ಮೂರ್ಧ್ನಿಯಲ್ಲಿ ಧರಿಸುವದಯ್ಯ. ಏಕದಶಮುಖದ ಮೂವತ್ತಾರು ಮಣಿಯ ಶಿರವ ಬಳಸಿ ಧರಿಸುವದಯ್ಯ. ಐದಳ ಹತ್ತುಮುಖದ ರುದ್ರಾಕ್ಷಿಯ ಒಂದೊಂದು ದ್ವಿಕರ್ಣದಲ್ಲಿ ಧರಿಸುವದಯ್ಯ. ಷಡಷ್ಟಮುಖದ ರುದ್ರಾಕ್ಷಿಯ ದ್ವಾತ್ರಿಂಶ ಕಂಠದಲ್ಲಿ ಧರಿಸುವದಯ್ಯ. ಚತುರ್ಮುಖದ ರುದ್ರಾಕ್ಷಿಯ ಪಂಚಾಶತ್ ಉರಮಾಲೆಯಾಗಿ ಧರಿಸುವದಯ್ಯ. ತ್ರಿದಶಮುಖದ ರುದ್ರಾಕ್ಷಿಯ ದ್ವಾತ್ರಿಂಶತ್ ದ್ವಿಬಾಹುಗಳಲ್ಲಿ ಧರಿಸುವದಯ್ಯ. ನವಮುಖದ ರುದ್ರಾಕ್ಷಿಯ ಚತುರ್ವಿಂಶತಿ ದ್ವಿಮಣಿ ಬಂಧದಲ್ಲಿ ಧರಿಸುವದಯ್ಯ. ಚತುರ್ದಶಮುಖದ ರುದ್ರಾಕ್ಷಿಯ ಅಷ್ಟೋತ್ತರಶತವ ಯಜ್ಞೋಪವೀತವಾಗಿ ಧರಿಸುವದಯ್ಯ. ಇಂತರಿದು ರುದ್ರಾಕ್ಷಿಯ ಧರಿಸಿದ ಶಿವಮಹೇಶ್ವರನ ಹೆಜ್ಜೆಹೆಜ್ಜೆಂಗೆ ಅಶ್ವಮೇಧದ ಫಲ ತಪ್ಪದಯ್ಯ ಸೌರಾಷ್ಟ್ರ ಸೋಮೇಶ್ವರಾ.



೪೬. ತ್ರಿಪುರ ಸಂಹಾರವ ಮಾಡುವಲ್ಲಿ ಶಿವನ ಉನ್ಮಿಷೋನ್ಮಿಲನ ದೃಷ್ಟಿಯಿಂ ಪುಳಕಬಿಂದು ಕಚ್ಚಟೆಯ ಮೇಲೆ ಬೀಳಲುಣ್ಮಿದ ರುದ್ರಾಕ್ಷಿ ಸರ್ವಕಾರಣಾಧಿಕ್ಯವೆಂಬುದನರಿದು ರುದ್ರಾಕ್ಷಿಯ ಧರಿಸಿದಾತನೆ ಸರ್ವತೋರುದ್ರನಪ್ಪುದು ತಪ್ಪದು. ಇದಕ್ಕೆ ಶೃತಿ "ಪುರಾ ತ್ರಿಪುರ ವಧಾಯೋನ್ಮಿಶಿತಾಕ್ಷೆ ಹಂತಿ ಜಲಬಿಂದು ವಾ ಭೂಮೌ ಪತಿತಾಸ್ತ ರುದ್ರಾಕ್ಷ ಜಾತ ಸರ್ವಾನುಗ್ರಹಾರ್ಥಾಯ ಅಥ ಏವ ರುದ್ರಾಕ್ಷಧಾರಣಾ ರುದ್ರಾಯ" ಎಂದುದಾಗಿ ಇಂತಪ್ಪ ರುದ್ರಾಕ್ಷಿಯ ಧರಿಸಿಪ್ಪಾತ ಸೌರಾಷ್ಟ್ರ ಸೋಮೇಶ್ವರಲಿಂಗ ವಲ್ಲದೆ ಬೇರೆ ಅಲ್ಲ.

೪೭. ಮುಖದಲ್ಲಿ ರುದ್ರನಿಪ್ಪನಯ್ಯ, ನಾಭಿಯಲ್ಲಿ ವಿಷ್ಣುವಿಪ್ಪನಯ್ಯ, ಮೂಲದಲ್ಲಿ ಬ್ರಹ್ಮನಿಪ್ಪನಯ್ಯ, ಕೇಶದಲ್ಲಿ ದೇವರ್ಕಳೆಲ್ಲ ಇಪ್ಪರಯ್ಯ. ಇಂತು ಪುಣ್ಯವೆ ಪುಂಜವಾಗಿ ಸೌರಾಷ್ಟ್ರ ಸೋಮೇಶ್ವರನ ಬರಿಸುವ ರುದ್ರಾಕ್ಷಿಯ ಧರಿಸಿರಯ್ಯ ಭಕ್ತರಪ್ಪವರು.

## ಮಹೇಶ್ವರಸ್ಥಲ.

೪೮. ತನುವಿನಲ್ಲಿ ನಿರ್ಮೋಹ, ಮನದಲ್ಲಿ ನಿರಹಂಕಾರ, ಪ್ರಾಣದಲ್ಲಿ ನಿರ್ಭಯ, ಚಿತ್ತದಲ್ಲಿ ನಿರಪೇಕ್ಷ, ವಿಷಯಂಗಳಲ್ಲಿ ಉದಾಸೀನ, ಭಾವದಲ್ಲಿ ದಿಗಂಬರ, ಜ್ಞಾನದಲ್ಲಿ ಪರಮಾನಂದವೆಡೆಗೊಂಡ ಬಳಿಕ ಸೌರಾಷ್ಟ್ರ ಸೋಮೇಶ್ವರಲಿಂಗವು ಬೇರಿಲ್ಲ ಕಾಣಿರೊ.

೪೯. ಅಂಗದ ಕಳವಳ, ಮನದ ಸಂಚಲ, ಭಾವದ ಭ್ರಾಂತು, ಅರುಹಿನ ಮರಹು, ಭಕ್ತಿಯ ಭಿನ್ನ ಜ್ಞಾನದ ಕಳಂಕು, ಪ್ರಾಣ ಪ್ರಕೃತಿ, ಸ್ಥಾನಮಾನವೆಂಬ ಲಕ್ಷ, ಇಹಪರಂಗಳ ತೃಷ್ಣೆ, ಭವರೋಗಂಗಳ ಬಂಧನ, ಇಂದ್ರಿಯಂಗಳ ಇಚ್ಛೆ, ತಾಪತ್ರಯಂಗಳ ಸುಖ ದುಃಖ, ಮಲತ್ರಯಂಗಳಾಸೆ, ಪಂಚ ಮಲಂಗಳ ಸಂಚ, ಅಷ್ಟಮದಂಗಳ ಘಟ್ಟ, ಷಡೂರ್ಮೆಗಳ ವಿಕಾರ, ಇಂತಪ್ಪ ಸಕಲ ಪ್ರಪಂಚಿನೊಳು ಸಿಲುಕದ ಅಕಳಂಕರಪ್ಪ ಸಮ್ಯಜ್ಞಾನ ಸಮತೆ ಸಮಾಧಾನ ಸಹಜಾನಂದ ಯೋಗದೊಳಿಪ್ಪ ಮಹಾಶರಣರ ತೋರಿ ಬದುಕಿಸಾ ಎನ್ನ ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಧರ್ಮ ನಿಮ್ಮ ಧರ್ಮ.

೫೦. ಹಿಡಿದ ವ್ರತವ ಬಿಡ. ಲಿಂಗವಲ್ಲದನ್ಯವನೊಲ್ಲ. ಅನ್ಯದೈವಕ್ಕೆರಗ. ಮರ್ತ್ಯದ ಮನುಜರ ಮನ್ನಿಸ. ಪರಸತಿ ಪರದ್ರವ್ಯವ ಮುಟ್ಟ. ಕೊಟ್ಟುದನೊಲ್ಲ. ಲಿಂಗನಿಷ್ಠಾಭಕ್ತಿಯಹಿಂಗ. ಕೊಲಬಾರದರಿಗಳ ಗೆಲುವ ಕಲಿ ತಾನಾಗಿ. ಅದೇಂತೆಂದೊಡೆ "ಪರಸತಿ ಪರದ್ರವ್ಯ ವರ್ಜಿತೋ ಭಾವಶುದ್ಧಿವಾನ್ ಲಿಂಗನಿಷ್ಠೈಕ ಯುಕ್ತವಾನ್, ಮಾಹೇಶ್ವರಮಿತಿ ಸ್ಮೃತಃ" ಎಂದುದಾಗಿ, ಜೀವಭಾವವ ಹಿಂಗಿ ಶಿವಭಾವದಿಂ ಜೀವಿಸಿಪ್ಪನಯ್ಯ ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣ ಮಾಹೇಶ್ವರನು.

೫೧. ಹಿಡಿಯದೆ ಹಿಡಿದುದ, ಬಿಡದೆ ಬಿಟ್ಟುದ, ಮತ್ತಾರು ಅರಿಯರಲ್ಲಾ! ಒಡಲ ಹಮ್ಮು ಜಾತ್ಯಾಭಿಮಾನವಡಗಿ ತೊಡಗಿರ್ದ ಭಾವವ ಮತ್ತಾರೂ ಅರಿಯರಲ್ಲಾ! ಭಾವ ಭಾವಿಸುತ, ನಿರ್ಭಯಃವಳವಟ್ಟ ಭೇದವನಾರು ಅರಿಯರಲ್ಲಾ! ಸೌರಾಷ್ಟ್ರ ಸೋಮೇಶ್ವರ ಲಿಂಗದ ನಿರ್ಣಯವ ಮತ್ತಾರೂ ಅರಿಯರಲ್ಲಾ.



೫೨. ಹಣ ಬಂಗಾರ ವಸ್ತ್ರ ಕಪ್ಪಡ ಬಟ್ಟೆಯಲ್ಲಿ ನೆಟ್ಟನೆ ಬಿದ್ದಿರಲು ಕಂಡು ಕಾತರಿಸಿ ಕೈಮುಟ್ಟಿ ಎತ್ತದ ಭಾಷೆ. ಕೊಟ್ಟೊಡೆ ಮುಟ್ಟದ ಭಾಷೆ. ಪರಧನ ಪರಸತಿಗೆ ಅಳುಪದ ಭಾಷೆ. ಇಂತಿದಕ್ಕಳುಪಿದೆನಾದೊಡೆ ಸೌರಾಷ್ಟ್ರ ಸೋಮೇಶ್ವರಾ ನಿಮ್ಮಾಣೆ ನಿಮ್ಮ ಪ್ರಮಥರಾಣೆ.

೫೩. ತನುಕರಣಭುವನ ಭೋಗಂಗಳ ಶಕ್ತಿಯುಳ್ಳನ್ನಕ್ಕ ನಾದಪಾಶ ಬಿಡದು, ನೋಡಾ ಅಯ್ಯ! ಕರ್ಮಕ್ಷಯವಾಗದೆ ಜನ್ಮ ಜರೆಮರಣಂಗಳುಳ್ಳನ್ನಕ್ಕ ಬಿಂದುಪಾಶ ಬಿಡದು, ನೋಡಾ ಅಯ್ಯ! ಅಭಿಮಾನವೆರಸಿ ಆನೆಂಬಹಂಕಾರವುಳ್ಳನ್ನಕ್ಕ ಕರ್ಮಪಾಶ ಬಿಡದು, ನೋಡಾ ಅಯ್ಯ! ಕಾಯಭಾವವುಳ್ಳನ್ನಕ್ಕ ಮಾಯಾಪಾಶ ಬಿಡದು, ನೋಡಾ ಅಯ್ಯ! ಪರಶಿವನ ಸ್ವಯಂಪ್ರಕಾಶ ಕಾಣಿಸದನ್ನಕ್ಕ ಮಲ ಪಾಶ ಬಿಡದು, ನೋಡಾ ಅಯ್ಯ! ಇಂತೀ ಪಂಚಪಾಶ ಪ್ರಪಂಚವುಳ್ಳನ್ನಕ್ಕ ಸೌರಾಷ್ಟ್ರ ಸೋಮೇಶ್ವರನ ಕೂಡಿ ತಾನಾಗಬಾರದು, ವಾಗದ್ವೈತಿಗಳಿಗೆ.

೫೪. ಮಂಡೆ ಬೋಳಾದರೇನು ಹುಟ್ಟು ಬೋಳಾಗದನ್ನಕ್ಕ? ತನು ನಿರ್ವಾಣವಾದರೇನು ಆಶೆ ನಿರ್ವಾಣವಾಗದನ್ನಕ್ಕ? ಇಂದ್ರಿಯ ನಿಗ್ರಹಿಯಾದರೇನು ಷಟ್ಸ್ಥಲಾನುಗ್ರಹವಾಗದನ್ನಕ್ಕ? ಸೌರಾಷ್ಟ್ರ ಸೋಮೇಶ್ವರಲಿಂಗವು ಬರಿದೆ ಒಲಿವನೆ?

೫೫. ವೇದಂಗಳ ಹಿಂದೆ ಹರಿಯದಿರು ಹರಿಯದಿರು. ಶಾಸ್ತ್ರಂಗಳ ಹಿಂದೆ ಸುಳಿಯದಿರು ಸುಳಿಯದಿರು. ಪುರಾಣಂಗಳ ಹಿಂದೆ ಬಳಸದಿರು ಬಳಸದಿರು. ಆಗಮಂಗಳ ಹಿಂದೆ ತೊಳಲದಿರು ತೊಳಲದಿರು. ಸೌರಾಷ್ಟ್ರ ಸೋಮೇಶ್ವರನ ಕೈವಿಡಿದು ಶಬ್ದಜಾಲಂಗಳಿಗೆ ಬಳಲದಿರು ಬಳಲದಿರು.

# ಪ್ರಸಾದಿಸ್ಥಲ.

೫೬. ಪ್ರಸಾದವೆ ಪರಮಜ್ಞಾನ, ಪ್ರಸಾದವೆ ಪರಾಪರ, ಪ್ರಸಾದವೆ ಪರಬ್ರಹ್ಮ, ಪ್ರಸಾದವೆ ಪರಮಾನಂದ, ಪ್ರಸಾದವೆ ಗುರು, ಪ್ರಸಾದವೆ ಲಿಂಗ, ಪ್ರಸಾದವೆ ಜಂಗಮ, ಪ್ರಸಾದವೆ ಪರಿಪೂರ್ಣ, ಸೌರಾಷ್ಟ್ರ ಸೋಮೇಶ್ವರಲಿಂಗದ ಪ್ರಸನ್ನತೆಯೆ ಪ್ರಸಾದ. ಇಂತಪ್ಪ ಪ್ರಸಾದ ಮಹಾತ್ಮೆಗೆ ಆನು ನಮೋ ನಮೋ ಎನುತಿರ್ದೆನು.

೫೭. ನಿಜಸುಖದ ಸಂಗದಿಂದ ನೆನಹಳಿದು ಶಿವಾನುಭಾವದ ಸುಖದ ಸುಖದಲ್ಲಿ ಪ್ರಾಣವಡಗಿಯಡಗಿ ನಿಂದ ನಿಂದ ನಿಲವಿನ ನಿರ್ಣಯವೆ ಸೌರಾಷ್ಟ್ರ ಸೋಮೇಶ್ವರಲಿಂಗಕ್ಕೆ ಓಗರವಾಯಿತ್ತು.

೫೮. ಕಾಯದ ಗತಿಯಲ್ಲಿ ನಡೆವನಲ್ಲ ಅಕಾಯ ಚರಿತ್ರನು. ಅನುಪಮ ಲಿಂಗೈಕ್ಯನು ಕುಲ ಛಲ ವಿದ್ಯಾ ಮದ ಮೋಹ ಬಲುವಿಡಿಯ. ನಿರಹಂಕಾರವಿಡಿದು ನಿರಂಗ ಸುಜ್ಞಾನ ಒಡಲಾದ. ಭರಿತ ಪ್ರಸಾದವಲ್ಲದನ್ಯವನರಿಯ. ಶ್ಲೋಕ "ರುಚಿರೂಪ ನ ಚ ಜ್ಞಾನಂ। ಅರ್ಪಿತಾನರ್ಪಿತಸ್ತಥಾ। ವಿಧಿವರ್ತತೆ ವಿಶ್ಯ। ಶಿವೇನ ಸಮೋದತೆ।" ಎಂದುದಾಗಿ ಅಂಗ ರುಚಿಯ ಹಂಗು ಹಿಂಗಿ, ಲಿಂಗ ರುಚಿಯು ಸಂಗವಾದ ಸುಸಂಗಿ ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣ.

೫೯. ಅಂಗದ ಮೇಲಣ ಲಿಂಗ ಹಿಂಗಿದಾತ ಭವಿ ಎಂಬರು. ಅಂಗದ ಮೇಲಣ ಲಿಂಗ ಹಿಂಗದಾತ ಭಕ್ತನೆಂಬರು. ಅಂಗದೊಳಗೆ ಬೆರಸಿಪ್ಪ ಲಿಂಗದ ಹೊಲಬನಾರೂ ಅರಿಯರು. ಆ ಲಿಂಗವಿಲ್ಲದೆ ಒಂದು ಕ್ಷಣ ಒಂದಂಗ ಸುಳಿವುದೆ? ಅಂಗದೊಳಗಣ ಲಿಂಗ ಹಿಂಗದೆ ಆರಾಧಿಸಬಲ್ಲರೆ ಹಿಂಗುವುದು ಭವಮಾಲೆ ಸೌರಾಷ್ಟ್ರ ಸೋಮೇಶ್ವರಾ.

೬೦. ಇಂದ್ರಿಯದ ಬಾಗಿಲಲ್ಲಿ ಮನವಿಪ್ಪುದು. ಮನದ ಮುಂಬಾಗಿಲಲ್ಲಿ ಭೋಗಲಿಂಗವಿದ್ದು, ಸಕಲ ಭೋಗಂಗಳ ಭೋಗಿಸಿ, ಪ್ರಸಾದವ ಕರಣಂಗಳಿಗೆ ಕೊಟ್ಟು ಎನ್ನ ಮನವ ತನ್ನತ್ತ ಸೆಳೆದು ಮರಹ ಮಾಣಿಸಿ ಕುರುಹಳಿದ ತೆರಹುಗೊಂಡ ಸೌರಾಷ್ಟ್ರ ಸೋಮೇಶ್ವರ ಲಿಂಗವ ಬಲ್ಲರೆ ಬಲ್ಲೆ.



೬೧. ಲಿಂಗ ಶರಣನ ಪಂಚೇಂದ್ರಿಯಂಗಳ, ಲಿಂಗಮುಖವಾಗಿ ನಿಂದು ಮನ ಸಹಿತ ಪಂಚ ವಿಷಯಂಗಳಖಿಲ ಸುಖಂಗಳ ಲಿಂಗಾರ್ಪಿತದಿಂದ ಚರಿಸುತ್ತ ಬೇರೆ ಮತ್ತೊಂದು ದೆಸೆ ಇಲ್ಲದೆ ನಿಂದವು ಸೌರಾಷ್ಟ್ರ ಸೋಮೇಶ್ವರ ಲಿಂಗವಾಸಿಯಾದ ಶರಣಂಗೆ.

೬೨. ದೇಹೇಂದ್ರಿಯ ಕರಣ ಜೀವ ಭಾವ ಅರಿವು ಶಬ್ದ ಸ್ಪರ್ಶ ರೂಪು ರಸ ಗಂಧ ಸ್ರಕ್ ಚಂದನ ವನಿತಾದಿ ಅಷ್ಟಭೋಗಂಗಳು ಲಿಂಗದಲ್ಲಿ ಮನಮುಟ್ಟಿ ನಟ್ಟಿರಲು, ಅದೇ ಅರ್ಪಿತ, ಅಂಗಲಿಂಗಾರ್ಪಿತವಾಗಿ. ಪರಿಣಾಮ ಪ್ರಸಾದ ಸಾಹಿತ್ಯವಯ್ಯ ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣಂಗೆ.

೬೩. ಲಿಂಗಪ್ರಸಾದ ತನಗಾಗಬೇಕೆಂಬ ಪ್ರಸಾದಿ, ಶಬ್ದ, ಸ್ಪರ್ಶ, ರೂಪು, ರಸ, ಗಂಧಂಗಳ ತನ್ನ ತನುಕರಣಂಗಳ ಮುಟ್ಟಲೀಯದೆ, ಲಿಂಗ ಮುಂತಾಗಿ ಮನ ಹಿಂತಾಗಿ, ಅಂಗಭಾವವಳಿದು ಅರ್ಪಿಸಿಕೊಳಬಲ್ಲ ಪ್ರಸಾದಿಯು ಪರಮ ಪರಿಣಾಮವೆ ಪ್ರಸಾದ. ಅದೆಂತೆಂದೊಡೆ, ಶ್ಲೋಕ "ಸೌಖ್ಯಂ ಶತಗುಣಾಧಿಕ್ಯಂ। ಯತ್ ಪ್ರಸಾದ ತದುಚ್ಯತೆ" ಎಂದುದಾಗಿ ಇವೆ ಆದಿ ಪ್ರಸಾದನಯ್ಯ ಸೌರಾಷ್ಟ್ರ ಸೋಮೇಶ್ವರ.

೬೪. ತನುಮುಟ್ಟಿ ಮನಮುಟ್ಟದೆ, ಒಂದನೊಂದ ನೆನೆನೆನೆದು ಮುಟ್ಟಿ, ಮುಟ್ಟಿಯರ್ಪಿಸಿ ಪ್ರಸಾದವಾಯಿತ್ತೆಂದುಕೊಳಬಹುದೆ ಅನರ್ಪಿತವ? ಶ್ಲೋಕ॥ "ಅರ್ಪಿತಾನರ್ಪಿತಂ ನಾಸ್ತಿ, ಇತಿ ಭೇದಂ ಸಮರ್ಪಿತಂ" ಎಂಬ ಈ ಸಕೀಲ ಸಂಬಂಧವರಿದು ಅರ್ಪಿಸಿಕೊಳ್ಳದೆ, ಅನರ್ಪಿತವ ಮುಟ್ಟದೆ, ರೂಪು ರುಚಿಯ ಹಾರದೆ ಸಂಗಸುಖದ ಸೋಂಕು, ತನುವ ಸೋಂಕದ ಮುನ್ನವೆ ಷಡುರಸಾದಿಗಳು ಮನವ ಸೋಂಕದ ಮುನ್ನವೆ, ಪರಿಪೂರ್ಣಭಾವಿ ತಾನಾಗಿ ಲಿಂಗಭಾವವಂಗವಾದವಂಗಲ್ಲದೆ ಸೌರಾಷ್ಟ್ರ ಸೋಮೇಶ್ವರಲಿಂಗದ ಪ್ರಸಾದ ದೊರೆಕೊಳ್ಳದು.

೬೫. ಪಿಂಡಪ್ರಸಾದಿಗಳ ಕಂಡು ಬಲ್ಲೆ. ಇಂದ್ರಿಯ ಪ್ರಸಾದಿಗಳ ಕಂಡು ಬಲ್ಲೆ. ಕರಣಪ್ರಸಾದಿಗಳ ಕಂಡು ಬಲ್ಲೆ. ಕಾಯ ಪ್ರಸಾದಿಗಳ ಕಂಡು ಬಲ್ಲೆ. ಜೀವಪ್ರಸಾದಿಗಳ ಕಂಡು ಬಲ್ಲೆ. ಭಾವ ಪ್ರಸಾದಿಗಳ ಕಂಡು ಬಲ್ಲೆ. ಲಿಂಗಪ್ರಸಾದಿಗಳಪೂರ್ವವಯ್ಯ. ಭೋಗಲಿಂಗಕ್ಕೆ ಭೋಗವನಿತ್ತು ಭೋಗಿಸಬಲ್ಲ ಅಚ್ಚಲಿಂಗಪ್ರಸಾದಿ ಸೌರಾಷ್ಟ್ರ ಸೋಮೇಶ್ವರ ಲಿಂಗವ ಭೋಗ ಸಹಿತ ಬೆರಸಿದ ಸುಪ್ರಸಾದಿ.

೬೬. ಸೋಂಕದ ಮುನ್ನವೆ ಸುಯಿಧಾನ ಪ್ರಸಾದಿ, ಅರ್ಪಿಸದ ಮುನ್ನವೆ ಅವಧಾನ ಪ್ರಸಾದಿ, ಅರಿವರತು ಭವಗೆಟ್ಟ ಪರಿಣಾಮ ಪ್ರಸಾದಿ, ನಿಜಗ್ರಾಹಕ ನಿತ್ಯಪ್ರಸಾದಿ, ಸೌರಾಷ್ಟ್ರ ಸೋಮೇಶ್ವರ ಲಿಂಗದಲ್ಲಿ ಸಮರಸ ಪ್ರಸಾದಿ.

೬೭. ತನುಗುಣ ಗಮನ ವಿರಹಿತ ಅನುಪಮ ಜ್ಞಾನ ಸನ್ನಿಹಿತ ಶರಣ ನೋಡಿದುದೆಲ್ಲವೂ ಪ್ರಸಾದ, ನುಡಿದುದೆಲ್ಲವೂ ಪ್ರಸಾದ, ಸೋಂಕಿದುದೆಲ್ಲವೂ ಪ್ರಸಾದವಯ್ಯ, ಸೌರಾಷ್ಟ್ರ ಸೋಮೇಶ್ವರ ಲಿಂಗದ ಪ್ರಸಾದಿಗೆ.

೬೮. ಪ್ರಸಾದ ಪ್ರಸಾದವೆಂದೆಂಬರು, ಪ್ರಸಾದವಾವುದೆಂದರಿಯರು. ಅನ್ನವೇ ಪ್ರಸಾದವೆಂದು ಕೊಡುವಾತ ಶರಣನಲ್ಲ. ಅನ್ನವೇ ಪ್ರಸಾದವೆಂದು ಕೊಂಬುವಾತ ಭಕ್ತನಲ್ಲ. ಅದೆಂತೆಂದೊಡೆ, "ಅನ್ನಮಾಹಾರಜೇತ್ಸರ್ವಂ। ಅನ್ನಮುತ್ಪತ್ತಿಹೇತವೇ। ಅನ್ನ ಮಭ್ಯಂತರಂ ಪ್ರಾಣಂ। ಸರ್ವಮನ್ನಮಯಂ ಜಗತ್॥" ಇಂತೆಂದುದಾಗಿ ಅನ್ನ ಜೀವಕ್ಕಾಧಾರ, ಅನ್ನವೇ ಸರ್ವಜನಕ್ಕೆ ಸಮ್ಮತ. ಇದು ಕಾರಣ ಅನ್ನವೇ ಪ್ರಸಾದವಲ್ಲ. ಶರಣನಪ್ಪ ಸದ್ಗುರುಸ್ವಾಮಿ ನೆತ್ತಿಯಲ್ಲಿದ್ದ ಉತ್ತಮ ಪ್ರಸಾದವನರುಹಿ ಬ್ರಹ್ಮರಂಧ್ರದಲ್ಲಿ ಪ್ರಕಾಶಿಸುತ್ತಿರ್ಪ ಮಹಾಲಿಂಗದೊಳು ಪುಟ್ಟಿದ ಪರಮಾಮೃತವೇ ಪ್ರಸಾದ. ಅಂತಪ್ಪ ಪ್ರಸಾದಗ್ರಹ ಕೃತ್ಯವೆಂತಪ್ಪದೆಂದೊಡೆ, ಲಿಂಗವ ಮರೆದು ಮನ ಮಗ್ನವಾಗಿ ಉಚ್ಛ್ವಾಸನಿಶ್ವಾಸಂಗಳಡಗಿ ಪ್ರಾಣನು ಪ್ರಸಾದದೊಳು ಮುಳುಗಿ ಪರಮ ಕಾಯದಿ ನಿಂದಾತನೆ ಸೌರಾಷ್ಟ್ರ ಸೋಮೇಶ್ವರನಲ್ಲಿ ಮಹಾಪ್ರಸಾದಿ ಎನಿಸಿಕೊಂಬನು.

೬೯. ದಕ್ಷಿಣ ದ್ವಾರದ ವೃಕ್ಷದ ತಂಪಿನಲ್ಲಿ ಸ್ವಯಂ ಜ್ಯೋತಿಯ ಕಂಡೆನಯ್ಯ! ದೀಪಕೆಟ್ಟು ವೃಕ್ಷವಳಿದು, ದಕ್ಷಿಣದ್ವಾರವ ದಾಂಟಿ, ಉತ್ತರದ್ವಾರದ ಬಾಗಿಲ ಬಿಯಗವ ತೆಗೆದಲ್ಲಿ ನಾದ ಮೂರುತಿಯಪ್ಪ ಪ್ರಸಾದವ ಕಂಡೆ. ಆ ಪ್ರಸಾದವ ಭೋಗಿಸಿಹ ಹೋದರೆ ನೆಟ್ಟನೆ ಆ ಪ್ರಸಾದವೆನ್ನ ನುಂಗಿತ್ತು. ಆ ಪ್ರಸಾದವ ನುಂಗಿ ಪ್ರಸಾದಿಯಾದೆನು ಆನು ಸೌರಾಷ್ಟ್ರ ಸೋಮೇಶ್ವರಾ.

೭೦. ಕೂಳು ಪ್ರಸಾದವೆಂದು ನುಡಿವ ಜಾಳು ಮಾತ ಕೇಳಿ, ಕೂಳಿಂಗೆ ಆಳಾಗಿ, ಬೀಳಾದ ಬೇಳುವೆಯಲಾಳಿವ ಗುರುಲಿಂಗಜಂಗಮದ ಪ್ರಸಾದದ ನೆನಹು. ಪ್ರಸಾದದಲ್ಲಿ ಪ್ರಸನ್ನವಾದ ಪ್ರಸಾದಲಿಂಗದ ಪ್ರಸನ್ನತೆಯ



ಪ್ರಸಾದದಿಂದ ಜನಿಸಿದಾತ ಜಂಗಮ. ಆ ಜಂಗಮದ ಮುಖದಿಂದೆ ತೋರಿತ್ತು ಪ್ರಸಾದ. ಇದು ಕಾರಣ ಗುರುಲಿಂಗಜಂಗಮ ಪ್ರಸಾದಲಿಂಗಕ್ಕು ಜಂಗಮಪ್ರಸಾದ. ಚತುರ್ದಶಭುವನಕ್ಕು ಜಂಗಮಪ್ರಸಾದ. ಇದಕ್ಕೆ ಶ್ರುತಿ। "ಗುರೂಣಾಂ ಲಿಂಗಸಂಬಂಧಿ। ತಲ್ಲಿಂಗಂ ಜಂಗಮಸ್ಥಿತಂ। ಜಂಗಮಂಚ ಪ್ರಸಾದೇನ। ತ್ರೈಲೋಕ್ಯಂ ಉಪಜೀವಿತಂ॥" ಇಂತೆಂದುದಾಗಿ ಪ್ರಸಾದವನರಿತು ಪ್ರಸಾದನೆ ಪ್ರಾಣವಾಗಿರಬಲ್ಲಡೆ ಸೌರಾಷ್ಟ್ರ ಸೋಮೇಶ್ವರಲಿಂಗವೆಂದೆಂಜೆನು.

೭೧. ಗುರುವೆ ಲಿಂಗ ಲಿಂಗವೆ ಮನ ಜಂಗಮವೆ ಪ್ರಾಣವಯ್ಯ. ನಾದವೆ ಗುರು ಬಿಂದುವೆ ಲಿಂಗ ಕಳೆಯೆ ಜಂಗಮವಯ್ಯ "ನಾದಂ ಗುರು ಮುಖಶ್ಚೈವ ಬಿಂದು ಲಿಂಗಮುಖಸ್ತಥಾ ಕಳಾಚರ ಮುಖಂ ಜ್ಞಾತ್ವಾ ಗುರೂರ್ಲಿಂಗಂತು ಜಂಗಮಂ" ಇಂತೆಂದುದಾಗಿ ಪ್ರಸಾದಕಿನ್ನು ಗುರುವೆ ಲಿಂಗ, ಲಿಂಗವೆ ಜಂಗಮ, ಜಂಗಮವೆ ಪ್ರಸಾದ, ಪ್ರಸಾದವೆ ಪರಿಪೂರ್ಣವಾದ ಸೌರಾಷ್ಟ್ರ ಸೋಮೇಶ್ವರಲಿಂಗವು ತಾನೆ.

೭೨. ಗುರುಕರುಣವೆಂಬ ಪಾದೋದಕದಲ್ಲಿ ಮಿಂದು ಮಿಂದು ನಿಷ್ಕ್ರಿಯೆ ಆಯಿತ್ತಯ್ಯಾ. ಇಂತು ನಿರ್ಮಲನಾಗಿ ಲಿಂಗಕ್ಕೆ ಮಜ್ಜನಕ್ಕೆರೆದು, ಲಿಂಗೋದಕವಾಯಿತು. ಲಿಂಗೋದಕ ಸೋಂಕಿನಿಂದ ಪಾದೋದಕವಾಯಿತು. ಲಿಂಗಾರ್ಪಿತದಿಂದ ಪ್ರಸಾದೋದಕವಾಯಿತು. ಲಿಂಗೋದಕ ಮಜ್ಜನದಲ್ಲಿ ಪಾದೋದಕ ಕರಚರಣ ಮುಖಪ್ರಕ್ಷಾಲನೆಯಲ್ಲಿ ಪ್ರಸಾದೋದಕ ಲಿಂಗ ಭೋಗೋಪಭೋಗದಲ್ಲಿ ಇಂತೀ ತ್ರಿವಿದೋದಕದ ಪರಿಯನರಿದು ಭೋಗಿಸ ಬಲ್ಲ ಸೌರಾಷ್ಟ್ರ ಸೋಮೇಶ್ವರ ನಿಮ್ಮ ಶರಣ.

೭೩. ಶ್ರೀಗುರುವಿನ ಶ್ರೀಚರಣದಲ್ಲಿ ಅರವತ್ತೆಂಟು ತೀರ್ಥಂಗಳು ನೆಲಿಸಿಪ್ಪವಾಗಿ, ಎಲ್ಲ ತೀರ್ಥಂಗಳಿಗೂ ಗುರುಪಾದತೀರ್ಥವೆ ಅಧಿಕ ನೋಡಾ. ಗುರುಕರುಣದಿಂದ ದೀಯತೆ ಎಂಬ ಸುಜ್ಞಾನವ ಹಡೆದು ಗುರು ಪಾದೋದಕದಿಂದ ಕ್ಷೀಯತೆ ಎಂದು ಮಲತ್ರಯವ ಕ್ಷಯಮಾಡುವ. ಅದೆಂತೆಂದೊಡೆ "ಶೋಷಣಂ ಪಾಪಪಂಕಸ್ಯ ದೀಪನಂ ಜ್ಞಾನತೇಜಸಾ, ಗುರು ಪಾದೋದಕಂ ಪೀತ್ವಾ ಸಂಸಾರ ನಾಶನಂ॥" ಇಂತೆಂದುದಾಗಿ ಗುರುಕರುಣಾಮೃತರಸ ಪಾದೋದಕದಲ್ಲಿ ಸುಜ್ಞಾನಾನಂದ ರಸಮಯನಾಗಿ ಬೆರಸಿ ಬೆರಸದಂತಿರ್ದೆನಯ್ಯ ಸೌರಾಷ್ಟ್ರ ಸೋಮೇಶ್ವರಾ.

೭೪. ಗುರುಕರುಣವೆಂಬ ಪಾದೋದಕದಲ್ಲಿ ನಾಂದು ನಾಂದು ನಾಂದು ನಿಃಕ್ರಿಯೆ ಆಯಿತ್ತಯ್ಯ. ಇಂತು ನಿರ್ಮಲನಾಗಿ ಲಿಂಗಕ್ಕೆ ಮಜ್ಜನಾರ್ಪಿತದಿಂದ ಪ್ರಸಾದವಾಯಿತ್ತು. ಲಿಂಗದ ಸೋಂಕಿನಿಂದ ಪಾದೋದಕವಾಯಿತ್ತು.... ಲಿಂಗೋದಕ ಮಜ್ಜನದಲ್ಲಿ ಪಾದೋದಕ ಕರಚರಣ ಮುಖ ಪ್ರಕ್ಷಾಲನದಲ್ಲಿ ಪಾದೋದಕ ಲಿಂಗ ಭೋಗೋಪಭೋಗದಲ್ಲಿ ಇಂತೀ ತ್ರಿವಿಧೋದಕದ ಪರಿಯನರಿತು ಭೋಗಿಸಬಲ್ಲ ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣಾ.

೭೫. ಲಿಂಗೋದಕ ಪಾದೋದಕ ಪ್ರಸಾದೋದಕವಾದ ತ್ರಿವಿಧೋದಕದಲ್ಲಿ. ಲಿಂಗೋದಕದಿಂದ ಸಂಚಿತ ಕರ್ಮವಿಲ್ಲ. ಪಾದೋದಕದಿಂದ ಪ್ರಾರಬ್ಧ ಕರ್ಮವಿಲ್ಲ. ಪ್ರಸಾದೋದಕದಿಂದ ಆಗಾಮಿ ಕರ್ಮವಿಲ್ಲ. ಇಂತೀ ತ್ರಿವಿಧೋದಕದಿಂದ ಬ್ರಹ್ಮಹತ್ಯ ಭ್ರೂಣಹತ್ಯ ಪಾಪಪಂಕ ಪ್ರಕ್ಷಾಲನವಯ್ಯಾ ಸೌರಾಷ್ಟ್ರ ಸೋಮೇಶ್ವರಾ.

---

## ಪ್ರಾಣಲಿಂಗಿಸ್ಥಲ.

೭೬. ಏಳು ನೆಲೆಯ ಕರು ಮಾಡುದುಪ್ಪರಿಗೆಯೊಳಗೆ ಒಂದೇ ಮುತ್ತಿನನೆಲಗಟ್ಟಿನ ಮೇಲೆ ಭಿತ್ತಿ ಇಲ್ಲದೆ ರತ್ನದ ಹೊದಿಕೆಯ ಮೇಲಿಪ್ಪ ಕಳಸವ ಕಂಡವರಾರನು ಕಾಣೆ. ಸೌರಾಷ್ಟ್ರ ಸೋಮೇಶ್ವರ ಲಿಂಗವ ಹಿಡಿದು ನಿಲಲರಿಯದೇರಿದವರು ಜಾರಿಬಿದ್ದು ಸೂರೆಹೋದರು ಕಾಲಂಗೆ.

೭೭. ಬಾಹಿರವ ಕಳೆದು, ಎಡೆ ನಾಣ್ಯವನುಳಿದು, ಹಲವು ನಾಣ್ಯವ ಕಳೆದು, ಸಲುವ ನಾಣ್ಯವ ಹಿಡಿದು ನೋಡುವೆನಯ್ಯ! ತೂಕಗುಂದದ ನೋಟವ ನೋಡುವೆನಯ್ಯ! ಪರಮಜ್ಞಾನ ಕಂಗಳಿಂದ ಪರಬ್ರಹ್ಮನಿಂದ ನೋಟವ ನೋಡುವೆನಯ್ಯ! ಅದ್ವೈತದ ನಾಣ್ಯವ ಕಣ್ಮುಚ್ಚದ ನೋಟದಿಂ ನೋಡುವೆನಯ್ಯ! ಅನುಮಿಷ ದೃಷ್ಟಿಯಲ್ಲಿ ನಿರಾಳ ನಿಂದ ನೋಟವ ನೋಡುವೆನಯ್ಯ! ಸೌರಾಷ್ಟ್ರ ಸೋಮೇಶ್ವರ ಲಿಂಗದ ನಿಜ ನಿಂದ ನೋಟವ ನೋಡಿ ನೋಡಿ ನಿಬ್ಬೆರಗಾದೆನಯ್ಯ.

೭೮. ಪ್ರಾಣಲಿಂಗ ಧಾರಣದಲ್ಲಿ ಅಲ್ಲದೆ, ಪ್ರಾಣವಾಯು ಧಾರಣದಲ್ಲಿ ಜೀವಗನಾದಿ ಕರ್ಮ ಕೆಡದು ನೋಡಾ! ಅಯ್ಯ ಶಿವಾದ್ವೈತ ಜ್ಞಾನದಲ್ಲಿ ಅಲ್ಲದೆ, ಆತ್ಮಾದ್ವೈತ ಜ್ಞಾನದಲ್ಲಿ ಮೂಲವಿದ್ಯೆ ಕೆಡದು ನೋಡಾ! ಅಯ್ಯಾ ತನುಭಾವವಳಿದು, ಬ್ರಹ್ಮಭಾವ ಕರಿಗೊಂಡಲ್ಲದೆ ಅಷ್ಟಾದಶದೋಷಂಗಳು ಅಳಿಯವು ನೋಡಾ ಅಯ್ಯ! ಸೌರಾಷ್ಟ್ರ ಸೋಮೇಶ್ವರ ಲಿಂಗದಲ್ಲಿ ಅವಿರಳವಾದಲ್ಲದೆ, ನಿತ್ಯ ಮುಕ್ತಿ ಇಲ್ಲ ನೋಡಾ ಅಯ್ಯ.

೭೯. ಘಟ ಜಲ ಬಾಹ್ಯಾಗ್ನಿಯುಷ್ಣ ಸೋಂಕಿಯುಷ್ಣೋದಕವಾದಂತೆ, ತಿಲಕುಸುಮ ಸಂಗದಿಂದ ಕುಸುಮ ಸಾರ ತಿಲಸಾರಕ್ಕೆ ವೇಧಿಸಿದಂತೆ, ಅಂಗಲಿಂಗಸಂಗದಿಂದ ಪ್ರಾಣಲಿಂಗ ವೇದ್ಯವಾಯಿತ್ತು ನೋಡಾ! ಇಷ್ಟಪ್ರಾಣ ಸಮರಸಾದ್ವೈತವಾದುದೇ ತೃಪ್ತಿ. ಇದು ಕಾರಣ ಸಗುಣಕ್ಕೆ ಸಗುಣ ಬ್ರಹ್ಮವಾಗಿ ಎನ್ನಂಗ ಪ್ರಾಣ ಮನಭಾವ ಕರಣಂಗಳೊಳ ಹೊರಗೆ ತೆರಹಿಲ್ಲದಿರ್ದೆಯಲ್ಲಾ ಸೌರಾಷ್ಟ್ರ ಸೋಮೇಶ್ವರಾ.

೮೦. ಶುಕ್ಲ ಶೋಣಿತದಿಂದ ತನುಮನ ಜನಿಸಿತ್ತು. ತನುಮನದಿಂದ ನಡೆನುಡಿ ಜನಿಸಿತ್ತು. ನಡೆನುಡಿಯಿಂದ ಅಹಂಕಾರ ಮಮಕಾರ

ಜನಿಸಿತ್ತು. ಇವರ ಬೆಸೆಯಿಂದ ರಸ, ಗಂಧ, ರೂಪು, ಶಬ್ದ, ಸ್ಪರ್ಶನ ಜನಿಸಿತ್ತು. ಇವಕ್ಕಾಶ್ರಯವಾಗಿ ಮನ ಬಂದಿದ್ದಿತಲ್ಲದೆ, ಆ ಮನವು ಮಹದಲ್ಲಿ ಲಯವಾದಲ್ಲಿ ಆತ್ಮನಾವೆಡೆಯಲ್ಲಿದ್ದಿತ್ತು? ಷಡುವರ್ಣದೊಳಗಲ್ಲ. ನಡೆನುಡಿ ಚೈತನ್ಯದಲ್ಲಿ ಹಿಡಿತಕ್ಕೆ ಬರಲಿಲ್ಲ. ಇನ್ನೆಂತಿಪ್ಪುದೊ? ದರ್ಪಣದ ಪ್ರತಿಬಿಂಬಕ್ಕೊಂದು ಚೇಷ್ಟೆಯುಂಟೆ? ನೆಳಲಿಂಗೊಂದು ಹರಿದಾಟ ಉಂಟೆ? ನಿಃಕಳಂಕ ಶಾಂತ ಮಲ್ಲಿಕಾರ್ಜುನಯ್ಯ ಮನದ ನೆನಹೆ ಆತ್ಮನಲ್ಲದೆ, ಬೇರೊಬ್ಬಾತ್ಮನಿಲ್ಲ ಕಾಣಾ ಸೌರಾಷ್ಟ್ರ ಸೋಮೇಶ್ವರಾ.

೮೧. ತನುಗುಣ, ಮನಗುಣ, ಪ್ರಾಣಗುಣದಲ್ಲಿ ಹುದಗಿದಡೆ, ಪಂಚೇಂದ್ರಿಯ ಅರಿಷಡ್ವರ್ಗಂಗಳೊಳು ಮನ ಕೂರ್ತು ಬೆರಸಿದಲ್ಲಿ ಆ ಮನದ ಹಸ್ತದಲ್ಲಿ ಲಿಂಗವಿಲ್ಲ. ಲಿಂಗವಿಲ್ಲವಾಗಿ ಭಕ್ತಿ ಇಲ್ಲ. ಭಕ್ತಿ ಇಲ್ಲವಾಗಿ ವಿವೇಕವಿಲ್ಲ. ವಿವೇಕವಿಲ್ಲವಾಗಿ ಅರುಹಿಲ್ಲ. ಅರುಹಿಲ್ಲವಾಗಿ ಸುಜ್ಞಾನವಿಲ್ಲ. ಸುಜ್ಞಾನವಿಲ್ಲವಾಗಿ ಪಾರಮಾರ್ಥ ಸೂಸದು. ಇವೆಲ್ಲವ ಕಳೆದುಳಿದಲ್ಲಿ ಮನದ ಹಸ್ತದಲ್ಲಿ ಲಿಂಗವಿದ್ದಿತ್ತು. ಲಿಂಗದಲ್ಲಿ ಮನ ಸಂದಿತ್ತು. ಮನ ಸಂದಲ್ಲಿ ಸೌರಾಷ್ಟ್ರ ಸೋಮೇಶ್ವರ ಸ್ಥಿರವಾದನು.

೮೨. ಗುರುಲಿಂಗಜಂಗಮ ಒಂದಾದ ಕ್ರಿಯಲ್ಲಿ ನಿಂದ ಪ್ರಕಾಶಂಗೆ, ಆವ ಸಂದೇಹವಿಲ್ಲ. ಆವ ವಿಷಯಂಗಳೊಳಗೆ ಮನವಿಹುದು, ಆ ರೂಪ ತಾನಾಗಿ ಸೌರಾಷ್ಟ್ರ ಸೋಮೇಶ್ವರ ಲಿಂಗದ ವಿಷಯದೊಳಿಪ್ಪ ಮನ ತದ್ರೂಪು ತಲ್ಲಿಯ್ಯ.

೮೩. ಒಬ್ಬನಿಗೆ ರೂಹಿಲ್ಲ. ಒಬ್ಬನಿಗೆ ರೂಹುಂಟು. ಒಬ್ಬನ ರೂಹು ಹೋಗುತ್ತ ಬರುತ್ತದೆ. ಈ ಮೂವರನೊಂದೆಡೆಗೆ ತಂದರೆ ಏನಹರೆಂಬುದು ನೋಡಿಕೊಳ್ಳಿರಣ್ಣಾ! ಕಂಡಡೆ ಉಣಲಿಲ್ಲ. ಕಾಣದಿರ್ದಡೆ ಉಣದಿರಲಿಲ್ಲ. ಇದೇನು ಸೋಜಿಗವಯ್ಯ ಸೌರಾಷ್ಟ್ರ ಸೋಮೇಶ್ವರಾ?

೮೪. ನಾಸಿಕಾಗ್ರ ಭ್ರೂ ನಿಟಿಲ ಮಧ್ಯದೊಳ್ಪ್ರಜ್ವಲಿಸಿ ಬೆಳಗುವ ಸ್ವಯಂಪ್ರಕಾಶ ಲಿಂಗಕ್ಕೆ, ಆಕಾಶದಿಂದೊಸರ್ದ ಅಗ್ಗವಣಿಯಿಂ ಮಜ್ಜನವಂ ಮಾಡಿ, ಸ್ವಾನುಭಾವದಿಂ ಸವೆದ ನಿಜತತ್ವದ ಗಂಧವನಿತ್ತು, ಪಕ್ಷಾಪಕ್ಷಂಗಳಳಿದ ಅಕ್ಷತೆಯಂ ಧರಿಸಿ, ನೆನಹು ನಿರ್ವಾಣವಾದ ಮನೋಲ್ಲಯವೆಂಬ ಪುಷ್ಪವನರ್ಪಿಸಿ, ಭಾವ ನಿರ್ಭಾವಂಗಳ ಸುಳುಹ ನಷ್ಟವಾದ ಸದ್ಭಾವದ ಧೂಪವನಿಕ್ಕಿ, ಸಮ್ಯಜ್ಞಾನದಿಂ ಪ್ರಕಾಶಿಸಿ ತೋರ್ಪ



ದೀಪವಂ ಬೆಳಗಿ, ಬ್ರಹ್ಮರಂಧ್ರದಿಂದೊಸರ್ದು ಹರಿತಪ್ಪ ಪರಮಾಮೃತವನಾರೋಗಣೆಯನವಧರಿಸಿ, ಉಲುಹಡಗಿದ ನಿಃಶಬ್ದವೆಂಬ ತಾಂಬೂಲವನಿತ್ತು, ಇಂತಪ್ಪ ಅಷ್ಟವಿಧಾರ್ಚನೆಯಿಂದರ್ಚಿಸಿ, ಪರಮ ಪರಿಣಾಮವಿಂಬುಗೊಂಡು ಪರಮ ಪ್ರಸಾದವನವಗ್ರಹಿಸಿ ಪರಮ ಸುಖಿಯಾಗಿಪ್ಪ ಮಹಾಶರಣರ ತೋರಿಸೆನ್ನ ಬದುಕಿಸಾ. ಸೌರಾಷ್ಟ್ರ ಸೋಮೇಶ್ವರಾ ನಿಮ್ಮಲ್ಲಿ ಅಭಿನ್ನವಾಯಿತ್ತೆನಗೆ.

೮೫. ಶಿವಲಿಂಗಾರ್ಚನ ಕ್ರಿಯಾಶಕ್ತಿಗೆ ಅಭ್ಯಾಸದ ಯೋಗದವರೆಲ್ಲ ಸರಿಯಲ್ಲ ನೋಡಾ. ಯೋಗಬಲದಿಂದ ಸೇವಿಸುವ ಶ್ರೇಷ್ಠಾಮೃತವು ಶಿವ ಪ್ರಸಾದಾಮೃತಕ್ಕೆ ಸರಿಯಲ್ಲ ನೋಡಾ! ಪ್ರಾಣನ ಬ್ರಹ್ಮರಂಧ್ರದಲ್ಲಿ ಬಿಡುವ ಯೋಗವು ಪ್ರಾಣಲಿಂಗೈಕ್ಯ ಸಂಬಂಧ ಸಂಯೋಗಕ್ಕೆ ಸರಿಯಲ್ಲ ನೋಡಾ! ಶಿವಾನುಭಾವಕ್ಕೆ ಯೋಗಕ್ಕೆ ಎಷ್ಟು ಅಂತರವು ನೋಡಯ್ಯಾ ಸೌರಾಷ್ಟ್ರ ಸೋಮೇಶ್ವರಾ?

೮೬. ತನುಗುಣವಳಿದಲ್ಲಿ ತ್ಯಾಗಾಂಗ, ಲಿಂಗದೊಡನೆ ಸಕಲಸುಖಂಗಳ ಭೋಗಿಸುವಲ್ಲಿ ಭೋಗಾಂಗ, ನಿಜದಲ್ಲಿ ಬೆರೆಯಲು ಯೋಗಾಂಗ, ಇಂತೀ ತ್ರಿವಿಧದಲ್ಲಿಯೂ ಯೋಗಾಂಗ, ಇದಲ್ಲದನ್ಯ ಯೋಗಂಗಳೆಲ್ಲ ವಿಯೋಗವಯ್ಯ ಸೌರಾಷ್ಟ್ರ ಸೋಮೇಶ್ವರಾ.

೮೭. ಹಠಯೋಗ, ಲಂಬಿಕಾಯೋಗ, ಆತ್ಮಯೋಗ, ಸಿದ್ಧಿಯೋಗ, ಪಿಶಾಚಯೋಗ, ಅಷ್ಟಾಂಗಯೋಗಂಗಳೆಂಬ ಷಡ್ವಿಧ ಕರ್ಮಯೋಗಂಗಳೊಳು ಶೋಷಣೆ, ದೋಹನೆ, ಸ್ಥಾಪನೆ, ಚಾಲನೆ, ಕಳಾಸವಂಮಾಡಿ ತ್ರಿದೋಷಾದಿಗಳಂ ಪ್ರವರ್ತಿಸಲೀಯದೆ, ಗಜಕರಣಂಗಳಿಂ, ಪವನಧಾರಣೆಯಿಂ, ಕಲ್ಪಯೋಗಂಗಳಿಂ, ಮೂಲಿಕಾಬಂಧದಿಂ ಬಂಧಿಸಿ, ಘಟವಂ ನಟಿಸುವುದು ಹಠಯೋಗ. ಪವನಾಭ್ಯಾಸಂಗಳಿಂದಭ್ಯಾಸಯೋಗ, ಕ್ರಮಕ್ರಮಂಗಳಿಂ ಜಿಹ್ವೆಯ ಬೆಳಸಿ ಹಠ ಸಮ್ಮಿಶ್ರದಿಂ ಷಡಾಧಾರದ ಪಶ್ಚಿಮದ ಪಥವಿಡಿದು ಪ್ರಾಣಪವನನ ಮಸ್ತಕಕ್ಕೇರಿಸಿ ಜಿಹ್ವೆಯ ಸುಷುಮ್ನೆಯಲ್ಲಿಟ್ಟು, ಸೋಮಪಾನವ ಸೇವಿಸಿ ಸಪ್ತಸ್ಥಾನ ನವಚಕ್ರದಲ್ಲಿ ನಿಂದು ಮುಕ್ತ್ಯಾಂಬಿಕೆಯೊಡಗೂಡುವುದು ಲಂಬಿಕಾಯೋಗ. ಆತ್ಮನಂ ಭೇದಿಸಿ ಪ್ರಾಣವಾಯು ನಾಡಿಗಳನರಿತು, ಹಿಡಿವ ಭೇದವಂ ತಿಳಿದು ತೆಗೆವ ಬಿಗಿವ ಸಂಚವಂ ಕಂಡು, ಒಡ್ಡಿಯಾಣಬಂಧ, ಜಾಳಿಂದರಬಂಧ, ಠಾಣ

ಕಾಮುದ್ರೆ ಭ್ರೂಸಂಕೋಚ ಬ್ರಹ್ಮಸ್ಥಾನದುತ್ತರನಾಡಿಯಿಂದಾತ್ಮನನಾತ್ಮ ಲಿಂಗದಲ್ಲಿ ಸಂಯೋಗವ ಮಾಡುವುದಾತ್ಮಯೋಗ. ಅಂಜನಸಿದ್ಧಿ, ಮೂಲಿಕಾಸಿದ್ಧಿ, ಗುಟಿಕಾಸಿದ್ಧಿ, ಶರೀರಸಿದ್ಧಿ, ಪರಕಾಯಪ್ರವೇಶ, ತ್ರಿಕಾಲಜ್ಞಾನ, ದೂರಶ್ರವಣ, ದೂರದೃಷ್ಟಿಯೊಳಗಾದ ಅಷ್ಟಮಹಾಸಿದ್ಧಿಯಂ ಪಡೆದು ರಸಸಿದ್ಧಿ, ಪಾಷಾಣಸಿದ್ಧಿ, ಲೋಹಸಿದ್ಧಿ, ವಯಸ್ಥಂಭ, ಪರವಂಚನೆ, ಕಾಯವಂಚನೆ, ವೇದಶಾಸ್ತ್ರಸಿದ್ಧಿ, ಭರತಸಿದ್ಧಿ, ಗಾಂಧರ್ವಸಿದ್ಧಿ, ಕಿನ್ನರಸಿದ್ಧಿ, ಪಿಶಾಚಸಿದ್ಧಿ, ಖೇಚರತ್ವ ಮಹೇಂದ್ರಜಾಲದೊಳಗಾದ ಚೌಷಷ್ಟಿ ವಿದ್ಯಾಸಿದ್ಧಿ, ಅಣಿಮಾ, ಮಹಿಮಾ, ಗರಿಮಾ, ಲಘಿಮಾ ಪ್ರಾಪ್ತಿ, ಪ್ರಾಕಾಮ್ಯ ಈಶತ್ವ, ವಶತ್ವವೆಂಬ ಅಷ್ಟೈಶ್ವರ್ಯಸಿದ್ಧಿ, ವ್ಯಾಳಿ, ಚರ್ಚಪಿ, ಕೋರಾಂಟ, ರತ್ನಘೋಷಿ, ಭೂತನಾಥ ನಾಗಾರ್ಜುನ, ಮತ್ಸ್ಯೇಂದ್ರ ಗೋರಕ್ಷ, ಮಂಜುನಾಥ, ನವನಾಥ ಸಿದ್ಧರೊಳಗಾದ ಸಮಸ್ತ ಸಿದ್ಧಿಬುದ್ಧಿಗಳಿಂ ಲಿಂಗವನರಸಿ, ಅಟ್ಟಿಮುಟ್ಟಿ ಹಿಡಿದೆನೆಂಬುವುದು ಸಿದ್ಧಿಯೋಗ, ಪಿಶಾಚತ್ವದಿಂ ತ್ರಿಭುವನಿಯಂ ಸೇವಿಸಿ, ಅಮರಿಗಳಂ ಸೇವಿಸಿ, ಅಮರಿ ಭ್ರಮರಾದೇವಿ, ಅಮರಿ ತ್ರಿಪುರಾಂತಕಿ, ಅಮರಿ ಕಾಲಸಂಹಾರಿ, ಅಮರಿ ತ್ರೈಲೋಕ್ಯಸಾಧನಿ, ಇಂತೆಂಬ ಶೃತಿಗಳು, ವಜ್ರ ಅಮರಿಗಳಂ ಅಂಗಲೇಪಂ ಮಾಡಿ, ಶುಲಕಮಂ ಸೇವಿಸಿ, ಭೂತಸಂಕುಳಂಗಳೊಡನಾಡಿ, ಅಜ್ಞಾನವಶದಿಂ ಲಿಂಗವನೇನೆಂದರಿಯದೆ ಕ್ಷೀಣಶಕ್ತಿಯ ಪಿಶಾಚತ್ವದಿಂ ಇಪ್ಪುದು ಪಿಶಾಚಯೋಗ, ಹಿಂಸೆಯನುಳಿದು ಶೌಚತ್ವದಿಂ, ಬ್ರಹ್ಮಚರಿಯದಿಂ ತತ್ವಂಗಳ ನಾಮಾಸಿಸುತಿಪ್ಪುದು ಯಮಯೋಗ. ವಿವೇಕ ವಿಚಾರತ್ವದಿಂ ತತ್ವಂಗಳನರಿತು ಆಚರಿಸಿ ಅಡಿಇಟ್ಟು ನಡೆವುದು ನಿಯಮಯೋಗ, ಪದ್ಮಾಸನ, ಸಿದ್ಧಾಸನ, ಬದ್ಧಾಸನ, ವಜ್ರಾಸನ, ಮಯೂರಾಸನ, ಕೂರ್ಮಾಸನ, ಕುಕ್ಕುಟಾಸನ, ಮಂಡುಕಾಸನ, ಗೋಮುಖಾಸನ ಮತ್ಸ್ಯಾಸನ, ಗರುಡಾಸನ, ಅರ್ಧಾಸನ, ವೀರಾಸನ, ಸ್ಮಶಾನಾಸನ, ಹಸ್ತಾಸನ, ಮೌಕ್ತಿಕಾಸನ, ಕುತಾಸನ, ಸಿಂಹಾಸನ, ಮಧ್ಯಲವಣಿ, ಶಿರೋಲವಣಿಯೊಳಗಾದ ಆಸನ ಬಂಧಂಗಳಿಂದ ಚರಿಸುವುದು ಆಸನಯೋಗ. ತತ್ವಮೂವತ್ತಾರಕ್ಕೆ ಪ್ರಾಣವೆ ಮೂಲವೆಂದರಿತು, ಷಡಾಧಾರಚಕ್ರಂಗಳ ಅಕ್ಷರವರ್ಣಂಗಳ ತಿಳಿದು ಮೇಲಣ ಅಜನಾಳ, ಬ್ರಹ್ಮಸ್ಥಾನ, ತುರೀಯಾತೀತದ ಓಂಕಾರ ಪ್ರಣಮವನರಿವುದು ಪ್ರಾಣಾಯಾಮಯೋಗ. ಪ್ರತ್ಯಾಹಾರಯೋಗಕ್ರಮಂಗಳಿಂದಾಸನ ಪ್ರಮಾಣವನಾಹಾರಿಸುವನು, ಪ್ರತ್ಯಾ



ಹಾರಯೋಗ. ಪ್ರಣವಕ್ಕತೀತವಾದ ಪರಶಿವಮೂರ್ತಿ ಮನದಲ್ಲಿ ಚಿಗುರ್ತು ಅಂತರಂಗದಲ್ಲಿ ಧ್ಯಾನಾರೂಢನಾಗಿ ಧ್ಯಾನಿಸುವುದು ಧ್ಯಾನಯೋಗ. ಆ ಪರಶಿವನ ಮೂರ್ತಿಯೇ ಇಷ್ಟಲಿಂಗವೆಂಬ ಭಾವನೆಯಿಂದಷ್ಟವಿಧಾರ್ಚನೆ ಷೋಡಶೋಪಚಾರದಿಂದಿಷ್ಟಲಿಂಗಧಾರಣದಿಂದಿರ್ಪುದು. ಧಾರಣ ಎನಿಸಿ ಅಪ್ರಶಿಖಾಸ್ಥಾನದಿಂದುತ್ತಂಗ ವಿಭಾಗೆಯಚಿತ್ತು, ಪ್ರಭೆಯಿಂದುಜ್ವಳತೇಜ ಸ್ವಯಂಪ್ರಕಾಶ ದಿವ್ಯತೇಜದಿಂದೊಪ್ಪಿಪ್ಪ ಮಹಾಘನ ಪರವಸ್ತುವನಿದಿರಿಟ್ಟೀಕ್ಷಿಸಿ ಆ ಮಹಾಪ್ರಕಾಶದಲ್ಲೊಡಗೂಡಿ ತಾನು ತಾನಾಗಿ, ಜಗದ್ವ್ಯವಹರಣೆಯ ಏನೆಂದರಿಯದೆ. ಪರಮುಕ್ತಿಯ ಸಮಾಧಿಯಲ್ಲಿಪ್ಪುದು ಸಮಾಧಿಯೋಗ. ಇಂತಪ್ಪ ಅಷ್ಟಾಂಗಯೋಗದೊಳಗಾದ ಷಡ್ವಿಧಯೋಗ, ಕರ್ಮಯೋಗಂಗಳಂ ಮೆಟ್ಟಿ ಚತುರ್ವಿಧ ಪದವಿಯಂ ಹೊದ್ದದೆ ಫಲಭೋಗಂಗಳಂ ಮುಟ್ಟದೆ, ಖ್ಯಾತಿಲಾಭಪೂಜೆಯಂ ತಟ್ಟದೆ, ಇಹಪರಂಗಳಂ ಸಾರದೆ, ಭವಬಂಧಕ್ಕೆ ಬಾರದೆ, ಗೆಲ್ಲಸೋಲಕ್ಕೆ ಹಾರದೆ, ತನುವಿನಿಚ್ಛೆಯಲ್ಲಿ ಸುಳಿಯದೆ, ಮನದಿಚ್ಛೆಯಲ್ಲಿ ಹರಿಯದೆ, ಪ್ರಾಣನ ಸುಳುಹಿನಲ್ಲಿ ಸಿಲ್ಕದೆ, ಪ್ರಕೃತಿವಶಕ್ಕೊಳಗಾಗದೆ, ಇಂದ್ರಿಯಂಗಳಿಗೆ ಮೈಯೊಡ್ಡದೆ, ಸರ್ವಸಂದೇಹ ನಿವೃತ್ತಿಯಾಗಿ, ನಿಂದಲ್ಲಿ ನಿರಾಳ, ನಡೆದಲ್ಲಿ ನಿರ್ಗಮನಿ, ನುಡಿದಲ್ಲಿ ನಿಃಶಬ್ದಿ, ಸುಳಿದರೊಡಲಿಲ್ಲದುಪಾಧಿಯರತು, ಅಂಗವೇ ಲಿಂಗವಾಗಿ ಲಿಂಗವೇ ಪ್ರಾಣವಾಗಿ, ಪ್ರಾಣವೇ ಪ್ರಸಾದವಾಗಿ, ಪ್ರಸಾದವೇ ಪರಿಪೂರ್ಣವಾಗಿ, ನಿಜಲಿಂಗೈಕ್ಯವಾಗಿ, ನಿಜಸುಖಸಂಬಂಧಿಯಾಗಿ, ನಿಜಯೋಗಸನ್ನಿಹಿತವಾಗಿ, ಕಾಯವಿದ್ದು ಅಕಾಯರಾಗಿಪ್ಪರೈಯ್ಯಾ ಸೌರಾಷ್ಟ್ರ ಸೋಮೇಶ್ವರ ನಿಮ್ಮ ಶರಣರು.

೬೮ ಬೆಚ್ಚು ಬೇರಿಲ್ಲದ ಸುಖವೆನಗಚ್ಚಾದ ಪರಿಯ ನೋಡಯ್ಯಾ! ಅಂಗವಿಲ್ಲದ ಕೂಟ, ಸಂಗವಿಲ್ಲದ ಬೇಟ, ಸಮರತಿ ಇಲ್ಲದಾನಂದ, ಸನ್ನಿಹಿತವಾಯಿತ್ತೆನಗೆ. ಸೌರಾಷ್ಟ್ರ ಸೋಮೇಶ್ವರ ಲಿಂಗದ ಸಂಗವೇನೂ ಅಲ್ಲದ ನಿಸ್ಸಂಗದ ನಿಜ ಸುಖವನೇನೆಂಬೆನಯ್ಯಾ.

೬೯. ಅಯ್ಯ ನಿಮ್ಮನೆನ್ನ ಕರಸ್ಥಲದಲ್ಲಿ ಧರಿಸಿದರೆ, ನೀನೆನ್ನ ಮನಸ್ಥಲವ ನೆಲೆಗೊಂಡುದ ನಾನೇನೆಂಬೆನಯ್ಯ? ಅಯ್ಯ ನಿಮ್ಮನೆನ್ನ ಪಂಚಮುಖದಲ್ಲಿ ಧರಿಸಿದಡೆ, ನೀವೆನ್ನ ಸರ್ವಾಂಗವ ನವಗ್ರಹಿಸಿಕೊಂಡುದ ನಾನೇನೆಂಬೆನಯ್ಯ? ಅಯ್ಯ ನಿಮ್ಮನೆನ್ನ ಅರಿವಿನಲ್ಲಿ ಬಯಿಚ್ಚಿಟ್ಟರೆ ನೀವೆನ್ನ ನಿರ್ಭಾವದಲ್ಲಿ ನೆಲೆಗೊಂಡುದ ನಾನೇನೆಂಬೆನಯ್ಯ? ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಮುಟ್ಟಿ ಹಮ್ಮುಗೆಟ್ಟುದ ನಾನೇನೆಂಬೆನಯ್ಯ?

೯೦. ಆಶ್ರಯನಲ್ಲ, ಅನಾಶ್ರಯನಲ್ಲ, ದ್ವೈತಿಯಲ್ಲ, ಅದ್ವೈತಿಯಲ್ಲ, ದೇಹವಿಲ್ಲದ ಲಿಂಗ, ಪ್ರಾಣವಿಲ್ಲದ ಶರಣ, ಉಭಯವಿಲ್ಲದ ಪರಮಾತ್ಮ ಪರಮೈಕ್ಯ ನಿರ್ಗಮನಗಮನಿ, ಅರಿವುದಕ್ಕೆ ಒಡಲಿಲ್ಲದ ಭರಿತನನುಭವಕ್ಕೆ ಬಾರದ ಅಗಣಿತ ಸ್ವತಂತ್ರ ಸೌರಾಷ್ಟ್ರ ಸೋಮೇಶ್ವರ ಲಿಂಗದಲ್ಲಿ ನಿಜ ನಿಂದ ಸುಖಿ.

೯೧. ನಾದವೇ ಲಿಂಗ ಬಿಂದುವೆ ಪೀಠವಾಗಿ, ಶಿವ ಭಕ್ತಿ ಸಂಪುಟ ತದ್ರೂಪವಾದ ಪಂಚಮುದ ಕರ್ಮೇಶಲಿಂಗ ನಿರ್ಮಯಲ ಪಿಂಡ ಅಂಗ ವೆಂಬ ಪಿಂಡದ ತದ್ರೂಪವನೈದಿ ಪರಿಪೂರ್ಣ ಪಿಂಡಾಕಾಶ ರೂಪ ತಾನಾಗಿ, ನುಡಿಗೆಡೆಯಿಂದ ನಿಂದ ನಿರವಯ ಘನ ತೇಜ ಇದ್ದೂ ಇಲ್ಲದಿಪ್ಪ ಬೆಡ ಗಿನ ಭೇದವ ನಿಮ್ಮಲ್ಲಿಯೆ ಕಂಡೆನಯ್ಯ ಸೌರಾಷ್ಟ್ರ ಸೋಮೇಶ್ವರಾ.

೯೨. ಅಂಗ ಲಿಂಗವಾದರೆ ಮತ್ತೆ ಕಾಳಪ್ಪುದೆ? ಮನ ಲಿಂಗವಾ ದರೆ ನಿಚ್ಚ ನಿಚ್ಚ ಲಯವಪ್ಪುದೆ? ಪ್ರಾಣ ಲಿಂಗವಾದರೆ ಪ್ರಕೃತಿಯ ತಳೆ ವುದೆ? ಅರಿವು ಲಿಂಗವಾದರೆ ಮರಹಿಂಗೊಳಗಹುದೆ? ಭಾವ ಲಿಂಗವಾ ದರೆ ಸಕಲ ವಿಷಯಂಗಳಿಗೆ ಭ್ರಮಿಸುವುದೆ? ಜ್ಞಾತೃಜ್ಞಾನಜ್ಞೇಯ ಲಿಂಗ ವಾದರೆ ಅರಿವುದೇನು? ಅರುಹಿಸಿಕೊಂಬುದೇನು? ಇವು ತಾವು ತಮ್ಮ ತಮ್ಮಂತೆ ಸೌರಾಷ್ಟ್ರ ಸೋಮೇಶ್ವರ ಲಿಂಗ ಮುನ್ನಿನಂತೆ.

೯೩. ಅಂಗಸುಖಿಗೆ ಲಿಂಗಸುಖವಳವಡದು. ಲಿಂಗಸುಖಿಗೆ ಅಂಗ ಸುಖವಳವಡದು. ವಾಗದ್ವೈತ ಕ್ರಿಯಾದ್ವೈತ ಭಾವಾದ್ವೈತ ಇಂತೀ ತ್ರಿವಿಧಾದ್ವೈತ ಲಿಂಗ ಸುಖ ಸಾಹಿತ್ಯವಾದಲ್ಲಿ ನರಕವಿಲ್ಲ. ಕರ್ಮ ವಿಲ್ಲ. ಫಲವಿಲ್ಲ. ಪದವಿಲ್ಲ. ಇಹವಿಲ್ಲ. ಪರವಿಲ್ಲ. ಸೌರಾಷ್ಟ್ರ ಸೋಮೇ ಶ್ವರ ನೀ ಸಾಕ್ಷಿಯಾಗಿ ಅಂಗಸುಖಿಗೆ ಲಿಂಗಸುಖ ದೋಕೊಳ್ಳದು

೯೪. ಅಂಗವೆಂಬ ಅಂಗನೆಯು ಆತ್ಮನೆಂಬ ಪುರುಷನಪ್ಪಿ ಮುಂಡೆ ತನುವಿಲ್ಲದಿಪ್ಪ ಭೇದವ ತಿಳಿದು ನೋಡಿರಣ್ಣಾ. ಕುಂಟಣಿಯಾದ ಒಡಹು ಟ್ಟಿದ ನಪುಂಸಕನಾದ ಕಾರಣ ಲಿಂಗಸಂಗಿಯಲ್ಲದೆ ಹೋದ ಕೇಳಿರಣ್ಣಾ. ಪ್ರಾಣನು ಪುರುಷನಾದರು ಲಿಂಗವ ಕೂಡುವ ಭರದಿಂದ ಸತಿಯಾಗ ಬಲ್ಲ. ಶರಣ ಸತಿ ಲಿಂಗ ಪತಿ ಎಂಬುದುಂಟಾಗಿ, ಶಿವಜ್ಞಾನ ಸಖಿಯ ಕೈವಿಡಿದು ಸೌರಾಷ್ಟ್ರ ಸೋಮೇಶ್ವರಲಿಂಗವ ಕೂಡಿ ಸುಖಿಯಾದೆ.

---

## ಶರಣಸ್ಥಲ.

೯೫. ಅವಿರಳಾತ್ಮಕನಾಗಿ, ನಿಃಷ್ಕಲ ಬ್ರಹ್ಮದೊಳೊಡವೆರಸಿ, ಪರಮ ಜ್ಞಾನವಿಂಬುಗೊಂಡು, ಪರಮಾಶ್ರಯ ಪರಿಪೂರ್ಣವಾಗಿ ನಿಜಸುಖದಾ ವಾಸ ಸುಜ್ಞಾನ ಭರಿತರ ತೋರಿ, ಬದುಕಿಸಾ ಎನ್ನ ಸೌರಾಷ್ಟ್ರ ಸೋಮೇ ಶ್ವರಾ ನಿಮ್ಮ ಧರ್ಮ ನಿಮ್ಮ ಧರ್ಮ..

೯೬. ಬೆಟ್ಟದ ಮೇಲೊಂದು ದಳ್ಳುರಿ ನಿಮಿರಿ ಬಳ್ಳಿವರಿದು ಆಕಾ ಶಕ್ಕಡರಿ ಜಗದೊಳ್ಪಸರಿಸಿ, ಸಪ್ತಸಮುದ್ರಂಗಳ ನುಂಗಿತ್ತು. ಅಷ್ಟದಿಗು ದಂತಿಗಳ ಸುಟ್ಟುರುಹಿತ್ತು. ಪಂಚವಕ್ತ್ರಂಗಳ ಮುಖಗೆಡಿಸಿತ್ತು. ನವಬ್ರ ಹ್ಮರ ಸುಳುಹನಾರಡಿಗೊಂಡಿತ್ತು. ಸಮ್ಯಜ್ಞಾನವೆಂಬ ದಳ್ಳುರಿ ಸೌರಾಷ್ಟ್ರ ಸೋಮೇಶ್ವರನ ತೋರಿ ಭವಗೆಡಿಸಿತ್ತು.

೯೭. ಜಿಹ್ವೇಂದ್ರಿಯ ಗುಹ್ಯೇಂದ್ರಿಯ ಇಚ್ಛೆಯುಳ್ಳನ್ನಕ್ಕರ ಜಂಗ ಮವಲ್ಲ. ಪುತ್ರ ಮಿತ್ರ ಕಳತ್ರದಲ್ಲಿ ಮೋಹವುಳ್ಳನ್ನಕ್ಕರ ಭಕ್ತನಲ್ಲ. ಮಾತಿನ ಮಾಲೆಯ ಹೆಚ್ಚು ಕುಂದಿನ ಹೋರಾಟವುಳ್ಳನ್ನಕ್ಕರ ಅದ್ವೈತಿಯಲ್ಲ. ಅಂಗ ಪ್ರಾಣದಾಸೆವುಳ್ಳನ್ನಕ್ಕರ ನಿಸ್ಪೃಹನಲ್ಲ. ಸೌರಾಷ್ಟ್ರ ಸೋಮೇಶ್ವರಲಿಂಗವ ನರಿವನ್ನಕ್ಕರ ಸ್ವಯಾನುಭಾವಿಯಲ್ಲ.

೯೮. ಗೊತ್ತುಮೆಟ್ಟೆ ದಾಂಟಿ ಹುಟ್ಟದೆ ಹೋದ ಪರಿಯ ನೋಡಾ! ಕತ್ತಲೆ ಬೆಳಗನೊತ್ತರಿಸಿ ಹತ್ತೆ ಸಾರಿ ನಿಂದ ಪರಿಯ ನೋಡಾ! ಒತ್ತಿ ಪಿಡಿದು ಅಸುರನ ನೆತ್ತಿಯನೊಡೆದು ಮುತ್ತ ಸರಗೆಯ್ದ ಪರಿಯ ನೋಡಾ! ಸೌರಾಷ್ಟ್ರ ಸೋಮೇಶ್ವರಲಿಂಗದೊಡನಾಡಿ ಹೊಡೆಯ ಕೊಯ್ದ ಪರಿಯ ನೋಡಾ.

ಟೀಕು:—ಸುಜ್ಞಾನೋದಯವಾದ ಶರಣನು ಶ್ರೀಗುರು ಕಾರುಣ್ಯ ದಿಂದಿಷ್ಟಲಿಂಗ ಸಂಬಂಧಿಯಾಗಿ, ಸತ್ಕ್ರಿಯಾಚಾರವನಾಶ್ರಯಿಸಿ ನಿಂದನೆಂ ಬುದೀಗ, ಗೊತ್ತಮೆಟ್ಟೆ ಎಂಬ ಶಬ್ದಕ್ಕರ್ಥ. ಆ ಸತ್ಕ್ರಿಯಾಚಾರದಲ್ಲಿ ನಿರ್ಧರವಾಗಿ, ನಿಂದಾಚರಿಸುತ್ತಿರ್ದ ಶರಣಂಗೆ ಸಕಲ ಪ್ರಪಂಚು ನಾಸ್ತಿ ಯಾಯಿತ್ತೆಂಬುದೀಗ, ದಾಂಟಿ ಎಂಬ ಶಬ್ದಕ್ಕರ್ಥ. ಅಂತು ಪ್ರಪಂಚು ನಾಸ್ತಿಯಾದ ಶರಣಂಗೆ ಜನನಾಂಕುರ ನಷ್ಟವಾದ ಪರಿ ಚೋದ್ಯವೆಂಬು ದೀಗ, ಹುಟ್ಟದೆ ಹೋದ ಪರಿಯ ನೋಡಾ ಎಂಬ ಶಬ್ದಕ್ಕರ್ಥ. ಅಂತು

ಜನನಾಂಕುರ ನಷ್ಟವಾಗಲು, ಜ್ಞಾನಾಜ್ಞಾನಂಗಳೆರಡು ತೊಲಗಿ ಹೋದ ವೆಂಬುದೀಗ, ಕತ್ತಲೆ ಬೆಳಗನೊತ್ತರಿಸಿ ಎಂಬ ಶಬ್ದಕ್ಕರ್ಥ. ಅಜ್ಞಾನಾಜ್ಞಾನಂಗಳೆರಡು ನಷ್ಟವಾದ ಸುಜ್ಞಾನ ಸ್ವರೂಪನಾದ ಶರಣನು ಪರಶಿವ ತತ್ವವನಾಶ್ರಯಿಸಿ ನಿಂದುದು ಚೋದ್ಯವೆಂಬುದೀಗ ಹತ್ತೆ ಸಾರಿನಿಂದ ಪರಿಯ ನೋಡಾ, ಎಂಬ ಶಬ್ದಕ್ಕರ್ಥ. ಆ ಪರಿಪೂರ್ಣವಾದ ಪರಶಿವ ತತ್ವವನಾಶ್ರಯಿಸಿ ನಿಂದ ಶರಣನು ಸಕಲ ಕರಣಂಗಳನು ಧ್ವಂಸವ ಮಾಡಿ, ಪರವಸ್ತುವ ಕೃತ ನಿಶ್ಚಯ ಹಸ್ತದಲ್ಲಿ ದೃಢವಿಡಿದನೆಂಬುದೀಗ ಒತ್ತಿ ಪಿಡಿದು ಎಂಬ ಶಬ್ದಕ್ಕರ್ಥ. ಅಂತು ಕೃತ ನಿಶ್ಚಯ ಹಸ್ತದಲ್ಲಿ ಶಿವತತ್ವವ ದೃಢವಿಡಿದು, ಶರಣನು ಅಸುರ ಕರ್ಮ ಸಂಬಂಧಿಯಪ್ಪ ಜೀವನ ಜ್ಞಾನವೆಂಬ ಶಿರಸ್ಸನು ಸುಜ್ಞಾನ ಪ್ರಕಾಶದಿಂದ ಛೇದಿಸಿದನೆಂಬುದೀಗ, ಅಸುರ ನೆತ್ತಿಯ ನೊಡೆದು ಎಂಬ ಶಬ್ದಕ್ಕರ್ಥ. ಆ ಜೀವನ ಅಜ್ಞಾನವೆಂಬ ಶಿರಸ್ಸು ಸುಜ್ಞಾನ ಪ್ರಕಾಶದಿಂ ಭಿನ್ನವಾಗಲು, ಶರಣ ತನ್ನ ಸ್ವಾನುಭಾವ ಸೂತ್ರದಿಂ ಮುಕ್ತಿ ಸ್ವರೂಪವಾದ ಪರಮ ಚಿತ್ಕಲಾ ಲಿಂಗವ ಪವಣಿಸಿದುದು ಚೋದ್ಯವೆಂಬುದೀಗ. ಮುತ್ತ ಸರಗೆಯ್ದ ಪರಿಯ ನೋಡಾ ಎಂಬ ಶಬ್ದಕ್ಕರ್ಥ. ಆ ಪರಮ ಚಿತ್ಕಲಾ ಲಿಂಗದಲ್ಲಿ ಅಭಿನ್ನ ಜ್ಞಾನ ಕ್ರಿ ವಿಡಿದಾಚರಿಸಿದ ಶರಣನು ಇದಿರಿಟ್ಟು ತೋರುವ ಭಿನ್ನ ಫಲ ಪದಂಗಳ ಛೇದಿಸಿದನೆಂಬುದೀಗ, ಸೌರಾಷ್ಟ್ರ ಸೋಮೇಶ್ವರ ಲಿಂಗದೊಡನಾಡಿ ಹೊಡೆಯ ಕೊಯ್ದ ಪರಿಯ ನೋಡಾ ಎಂಬ ಶಬ್ದಕ್ಕರ್ಥ.

೯೯. ಕೊಡಗೂಸಿಂಗೆ ಕಡು ಬೇನೆಯಾದುದ ಕಂಡೆ. ಹಡೆದಿರ್ದ ಶಿಸುವ ಕೊಡಗೂಸ ನುಂಗಿತ್ತ ಕಂಡೆ. ಹಿಡಿದಿರ್ದ ಕೋಳಿ ಒಡನುಂಬುದ ಕಂಡೆ. ಒಡನಿದ್ದನಿಲ ಬಿಡುಮುತ್ತಾದುದ ಕಂಡೆ. ಕೊಡನೊಳಗೊಂದು ಕಡೆ ಇಲ್ಲದ ರತ್ನವ ಕಂಡೆ. ಸೌರಾಷ್ಟ್ರ ಸೋಮೇಶ್ವರನೆಡೆವಿಡಿವಿಲ್ಲದಿಪ್ಪ ಬೆಡಗ ಕಂಡೆ.

ಟೀಕು:— ಸುಜ್ಞಾನೋದಯ ಶರಣಸತಿ ಎಂಬುದೀಗ, ಕೊಡಗೂಸೆಂಬ ಶಬ್ದಕ್ಕರ್ಥ. ಅಂತಪ್ಪ ಶರಣಸತಿಗೆ ಪರಶಿವ ತತ್ವದಲ್ಲಿ ಬೆರಿಸಬೇಕೆಂಬ ತೂರ್ಯಾವಸ್ಥೆ ತೋರಿತ್ತೆಂಬುದೀಗ, ಕೊಡಗೂಸಿಂಗೆ ಕಡುಬೇನೆಯಾದುದ ಕಂಡೆನೆಂಬ ಶಬ್ದಕ್ಕರ್ಥ. ಅಂತು ತೂರ್ಯಾವಸ್ಥೆಯು ಮುಂದುಗೊಂಡು ಭಕ್ತಿಯಿಂದುಪಾವಸ್ಥೆಯ ಮಾಡುತ್ತಿರ್ದ ಶರಣಸತಿಯ ಆತ್ಮಾಂತರ್ಗತವಾಗಿರ್ಪ ಚಿತ್ಪ್ರಭಾಲಿಂಗವೆ, ಗುರುಮುಖದಿಂ ಬಹಿಷ್ಕರಿಸಿ ಇಷ್ಟ



ಲಿಂಗ ಸ್ವರೂಪವಾಗಿ ಮೂರ್ತಿಗೊಂಡಿತ್ತೆಂಬುದೀಗ, ಹಡೆದಿರ್ದ ಶಿಸುವನೆಂಬ ಶಬ್ದಕ್ಕರ್ಥ. ಅಂತು ಗುರುಮುಖದಿಂ ಪ್ರತ್ಯಕ್ಷವಾದಲ್ಲಿ ಸತ್ಕ್ರಿಯಾ ಲಿಂಗವನು ಚಿತ್ಸ್ವರೂಪನಾದ ಶರಣ ತನ್ನ ಸುಜ್ಞಾನ ಪ್ರಕಾಶದಲ್ಲಿ ಅವಗ್ರಹಿಸಿದನೆಂಬುದೀಗ, ಕೊಡಗೂಸು ನುಂಗಿತ್ತ ಕಂಡೆನೆಂಬ ಶಬ್ದಕ್ಕರ್ಥ. ಆ ಚಿದ್ರೂಪನಾದ ಶರಣ ಸುಜ್ಞಾನ ಪ್ರಕಾಶದಲ್ಲಿ ಸಂಬಂಧವಾದ ಸತ್ಪ್ರಣಮಲಿಂಗವು ಷಡಿಂದ್ರಿಯಂಗಳಲ್ಲಿ ಷಡ್ವಿಧಲಿಂಗವಾಗಿ ಷಡ್ವಿಧ ಪದಾರ್ಥವ ಕೈಕೊಳ್ಳುತ್ತಿಹುದೆಂಬುದೀಗ, ಹಿಡಿದಿರ್ದ ಕೋಳಿ ಒಡನುಂಬುದ ಕಂಡೆನೆಂಬ ಶಬ್ದಕ್ಕರ್ಥ. ತನ್ನಂತರಂಗದೊಳಗಿರ್ದ ಅಜ್ಞಾನವೆಂಬುದೀಗ ಒಡನಿರ್ದ ನಿಲವೆಂಬ ಶಬ್ದಕ್ಕರ್ಥ. ಅಂತಪ್ಪ ಅಜ್ಞಾನವು ಸುಜ್ಞಾನ ಪ್ರಕಾಶದಿಂದೆ ನಿವೃತ್ತಿಯಾಗಲು, ಮುಕ್ತಿ ಸ್ವರೂಪನಾದ ಶರಣನೆಂಬುದೀಗ ಬಿಡು ಮುತ್ತಾದುದ ಕಂಡೆನೆಂಬ ಶಬ್ದಕ್ಕರ್ಥ. ಆ ಮುಕ್ತಿ ಸ್ವರೂಪನಾದ ಶರಣನ ಚಿದ್ಬ್ರಂಡದಲ್ಲಿ ವೇದಾಗಮಂಗಳಿಗತೀತವಾದ ಚಿತ್ಪ್ರಭಾ ಲಿಂಗವು ಮೂರ್ತಿಗೊಂಡಿಹುದ ಸುಜ್ಞಾನ ದೃಷ್ಟಿಯಿಂದ ಕಂಡೆನೆಂಬುದೀಗ, ಕೊಡನೊಳಗೊಂದು ಕಡೆ ಇಲ್ಲದ ರತ್ನವ ಕಂಡೆನೆಂಬ ಶಬ್ದಕ್ಕರ್ಥ. ಇಂತು ಸರ್ವಾಂಗವು ಲಿಂಗದಲ್ಲಿ ಸಮರಸವಾದ ಶರಣಂಗೆ ಶರಣ ಲಿಂಗವೆಂಬ ಭಿನ್ನಭಾವವಿಲ್ಲ. ಪರಿಚೋದ್ಯವೆಂಬುದೀಗ, ಸೌರಾಷ್ಟ್ರ ಸೋಮೇಶ್ವರನೆಡೆವಿಲ್ಲದಿರ್ಪ ಬೆಡಗ ಕಂಡೆನೆಂಬ ಶಬ್ದಕ್ಕರ್ಥ.

೧೦೦. ಆಕಾಶದಲಾಡುವ ಹದ್ದನೊಂದು ಸರ್ಪ ನುಂಗಿತ್ತ ಕಂಡೆ. ಆ ಸರ್ಪ ಕಿಚ್ಚಿನೊಳು ಬಿದ್ದು ನಿಂದುರಿವುದ ಕಂಡೆ. ಷಣ್ಮುಖನ ಶಿರವರಿದು ಬಯಲಾದುದ ಕಂಡೆ. ಉರಿ ಕೆಟ್ಟಲ್ಲಿ ಕರಿ ಇಲ್ಲ. ಭಸಿತವಿಲ್ಲ. ಈ ಪರಿಯ ಸೌರಾಷ್ಟ್ರ ಸೋಮೇಶ್ವರ ನಿಮ್ಮ ಶರಣರೇ ಬಲ್ಲರು.

ಟೀಕು:— ಆತ್ಮ ತತ್ವವೆಂಬುದೀಗ, ಆಕಾಶವೆಂಬ ಶಬ್ದಕ್ಕರ್ಥ. ಅಂತಪ್ಪ ಆತ್ಮ ತತ್ವದಲ್ಲಿ ಸ್ವಲೀಲಾಪರನಾಗಿರ್ಪ ಪರಮಹಂಸನೆಂಬುದೀಗ, ಆಕಾಶದಲಾಡುವ ಹದ್ದನೆಂಬ ಶಬ್ದಕ್ಕರ್ಥ. ಆ ಪರಮಹಂಸನ ಶಂಕಾವಿಷ ಸಂಬಂಧಿಯಪ್ಪ ಮನೋಸರ್ಪನವಗ್ರಹಿಸಿತ್ತೆಂಬುದೀಗ, ಒಂದು ಸರ್ಪ ನುಂಗಿತ್ತ ಕಂಡೆನೆಂಬ ಶಬ್ದಕ್ಕರ್ಥ. ಅಂತಪ್ಪ ಮನೋಮಧ್ಯದಲ್ಲಿ ಸಮ್ಯಜ್ಞಾನೋದಯವಾಗಲು, ಆ ಜ್ಞಾನಾಗ್ನಿ ಪ್ರಕಾಶದಲ್ಲಿ ಮನೋಪ್ರಕೃತಿಯಳಿಯಿತ್ತೆಂಬುದೀಗ, ಆ ಸರ್ಪ ಕಿಚ್ಚಿನೊಳಗೆ ಬಿದ್ದು ಎಂಬ

ಶಬ್ದಕ್ಕರ್ಥ. ಆ ಮನೋ ಪ್ರಕೃತಿಯಳಿಯಲು ಉನ್ಮನಿ ತತ್ವದಲ್ಲಿ ಸ್ವಸ್ಥಿರವಾಗಿ ಪ್ರಕಾಶಿಸುತ್ತಿಹುದೆಂಬುದೀಗ, ನಿಂದುರಿವುದ ಕಂಡೆನೆಂಬ ಶಬ್ದಕ್ಕರ್ಥ. ಅಂತು ಮನವಳಿದು ಉನ್ಮನಿ ತತ್ವ ಸ್ವರೂಪವಾಗಿ, ಪ್ರಕಾಶಿಸುತ್ತಿರಲು ಷಡಿಂದ್ರಿಯಂಗಳೆ ಮುಖವಾಗುಳ್ಳ ಜೀವನ ಅಜ್ಞಾನವೆಂಬ ಶಿರಸ್ಸು ಸುಜ್ಞಾನ ಪ್ರಕಾಶದಿಂದೆ, ಛೇದನವಾಯಿತ್ತೆಂಬುದೀಗ, ಷಣ್ಮುಖನ ಶಿರ ಹರಿದು, ಎಂಬ ಶಬ್ದಕ್ಕರ್ಥ. ಅಂತು ಸುಜ್ಞಾನ ಪ್ರಕಾಶದಿಂದೆ ಜೀವಭಾವವಳಿದು ಸಜೀವನು ಶ್ರೀಗುರು ಕಾರುಣ್ಯದಿಂದೆ ಸರ್ವಾಂಗಲಿಂಗ ಸಂಬಂಧವಾಗಿಹುದ ಶರಣ ಕಂಡೆನೆಂಬುದೀಗ, ಬಯಲಾದುದ ಕಂಡೆನೆಂಬ ಶಬ್ದಕ್ಕರ್ಥ. ಇಂತು ಸರ್ವಾಂಗ ಲಿಂಗ ಸಂಬಂಧವಾದ ಶರಣನ ಜ್ಞಾನಾಗ್ನಿ ಪ್ರಕಾಶವು ಚಿದ್ಘನಲಿಂಗದಲ್ಲಿ ನಿಷ್ಪತ್ತಿಯಾಯಿತ್ತೆಂಬುದೀಗ, ಉರಿ ಕೆಟ್ಟಲ್ಲಿ ಎಂಬ ಶಬ್ದಕ್ಕರ್ಥ. ಆ ಶಿವಜ್ಞಾನ ಪ್ರಕಾಶ ನಿಷ್ಪತ್ತಿಯಾದ ಶರಣನ ವೃತ್ತಿ ಜ್ಞಾನವಳಿದು ಲಿಂಗಾಂಗವೆರಡು ನಿರ್ವಯಲಾಯಿತ್ತೆಂಬುದೀಗ, ಕರಿಇಲ್ಲ ಭಸಿತವಿಲ್ಲ ಎಂಬ ಶಬ್ದಕ್ಕರ್ಥ. ಇಂತಪ್ಪ ಲಿಂಗಾಂಗದ ಸಮರಸೈಕ್ಯವನು ಶಿವಾನುಭಾವಿಗಳೆ ಬಲ್ಲರೆಂಬುದೀಗ, ಈ ಪರಿಯು ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣರೆ ಬಲ್ಲರು ಎಂಬ ಶಬ್ದಕ್ಕರ್ಥ.

೧೦೧. ಕತ್ತೆಯ ಗರ್ಭದಿಂದ ಪ್ರಸೂತವಾದ ಎತ್ತು ಹುಲ್ಲು ತಿನ್ನದು, ನೀರ ಕುಡಿಯದು, ಇರ್ದಲ್ಲಿ ಇರದು ಹೋದತ್ತಹೋಗದು. ಇದೇನು ಸೋಜಿಗ ಬಲ್ಲರೆ ಹೇಳಿರಣ್ಣಾ! ಎತ್ತ ಬಿಟ್ಟಿತ್ತು ಸತ್ತನೊಳಕೊಂಡಿತ್ತು ಮುತ್ತನುಗುಳಿ ಹೋಯಿತ್ತು. ಇದೇನು ವಿಪರೀತ? ಬಲ್ಲರೆ ಹೇಳಿರಣ್ಣಾ. ಎತ್ತು ಕೆಟ್ಟಿತ್ತು. ಅರಸುವರ ಕಾಣೆನಣ್ಣ ಸೌರಾಷ್ಟ್ರಸೋಮೇಶ್ವರ ಲಿಂಗದೊಡಗೂಡಿ ಎತ್ತೆತ್ತ ಹೋಯಿತ್ತೆಂದರಿಯೆನಣ್ಣಾ.

ಟೀಕು:— ಜಡ ಸ್ವರೂಪವುಳ್ಳ ಮಾಯಾಸಂಭೂತ ಜೀವನೆಂಬುದೀಗ ಕತ್ತೆಯ ಗರ್ಭದಿಂದ ಪ್ರಸೂತವಾದ ಎತ್ತೆಂಬ ಶಬ್ದಕ್ಕರ್ಥ. ಅಂತಪ್ಪ ಜೀವಂಗೆ ಸುಜ್ಞಾನೋದಯವಾಗಲು, ತೃಣ ಪ್ರತಿಪತ್ತಾದ ಸಂಸಾರ ಸುಖವನನುಭವಿಸುವದು ವಿಷಯ ರಸೋದಕವ ಕೊಳ್ಳದು. ತನು ಕರಣೇಂದ್ರಿಯಂಗಳಲ್ಲಿರ್ದು, ಅವ ಹೊದ್ದದು ಮುನ್ನ ವರ್ತಿಸುವ ಕಾಲಕ್ರಮ ವರ್ಣಾಚಾರದಲ್ಲಿ ವರ್ತಿಸದಿರ್ಪುದು ಇದು ಅತ್ಯಾಶ್ಚರ್ಯ

820
544



ವಾದುದನಾರು ಅರಿಯರೆಂಬುದೀಗ, ಹುಲ್ಲು ತಿನ್ನದು, ನೀರ ಕುಡಿಯದು ಇರ್ದಲ್ಲಿ ಇರದು, ಹೋದತ್ತ ಹೋಗದು, ಇದೇನು ಸೋಜಿಗ ಬಲ್ಲರೆ ಹೇಳಿರಣ್ಣಾ ಎಂಬ ಶಬ್ದಕ್ಕರ್ಥ. ಇಂತು ಸುಜ್ಞಾನೋದಯದಿಂ ಸಕಲ ಪ್ರಪಂಚುವನತಿಗಳೆದ ಜೀವನು ಚಿದೋಪದೇಶದಿಂ ಜೀವಭಾವವಳಿದು ಸದ್ರೂಪವಾದ ಸಗುಣಬ್ರಹ್ಮವ ಸರ್ವಾಂಗದಲ್ಲಿ ಧರಿಸಿ ಮುತ್ತೆಂಬ ನಾಮವನುಳ್ಳ ಖಂಡಿತ ಮುಕ್ತಿಯನುದ್ಗಾರಿಸಿ ಶಿವತತ್ವದತ್ತಯ್ದಿದ ಭೇದವ ಚೋದ್ಯವಾದುದನಾರು ಅರಿಯರೆಂಬುದೀಗ, ಎತ್ತ ಬಿಟ್ಟಿತ್ತು ಸತ್ತನೊಳಕೊಂಡಿತ್ತು, ಮುತ್ತನುಗಳಿಹೋಯಿತ್ತು, ಇದೇನು ವಿಪರೀತ ಬಲ್ಲರೆ ಹೇಳಿರಣ್ಣಾ ಎಂಬ ಶಬ್ದಕ್ಕರ್ಥ. ಇಂತು ಜೀವನು ಪ್ರಕೃತಿ ಭಾವವಳಿದು, ಲಿಂಗದಲ್ಲಿ ಏಕಾರ್ಥವಾಗಲು, ಆ ಜೀವನ ಬಳಿವಿಡಿದರಸುವ ಸಕಲ ಕರಣಂಗಳು ತಲ್ಲೀಯವಾದವೆಂಬುದೀಗ, ಎತ್ತು ಕಟ್ಟಿತ್ತು ಅರಸುವರ ಕಾಣೆನಣ್ಣ ಎಂಬ ಶಬ್ದಕ್ಕರ್ಥ. ಇಂತು ಜೀವನು ಲಿಂಗದಲ್ಲಿ ಸಮರಸ ಸಂಯೋಗವಾಗಿ ನಿರ್ವಯಲಾದ ಭೇದವನುಪಮಿಸಬಾರದೆಂಬುದೀಗ, ಸೌರಾಷ್ಟ್ರ ಸೋಮೇಶ್ವರ ಲಿಂಗದೊಡಗೂಡಿ ಎತ್ತತ್ತ ಹೋಯಿತ್ತೆಂದರಿಯೆನಣ್ಣಾ ಎಂಬ ಶಬ್ದಕ್ಕರ್ಥ.

೧೦೨. ಕೋಣನೊಂದು ಕುದುರೆಯ ನುಂಗಿತ್ತು. ಇರುವೆ ಒಂದಾನೆಯ ನುಂಗಿತ್ತು. ಭಲ್ಲುಕನ ಅಲ್ಲವೆನಿಸಿತ್ತು. ಕಟ್ಟಿದ ಪಕ್ಷಿ ನೆರೆ ಪಾರಿತ್ತು. ಗಗನಕ್ಕೆ ಚಿದಾಕಾಶವೆ ತಾನಾಗಿ, ಬಿಂದ್ವಾಕಾಶವನೊಡೆಯಿತ್ತು. ದೃಷ್ಟಾಕಾಶವ ನಷ್ಟಂಗೆಯ್ಯಿತ್ತು. ಭಿನ್ನಾಕಾಶವನೊಡಗೂಡಿತ್ತು. ಮಹದಾಕಾಶವನೊಳಕೊಂಡಿತ್ತು. ಸೌರಾಷ್ಟ್ರ ಸೋಮೇಶ್ವರನೆಂಬ ನಿಜದಾಕಾಶದಲ್ಲಿ ನಿಂದು ನಾಮ ರೂಪು ನಷ್ಟವಾಯಿತ್ತು.

ಟೀಕು:— ಜೀವನೆಂಬ ಪಶುವೀಗ ಕೋಣನೆಂಬ ಶಬ್ದಕ್ಕರ್ಥ. ಅಂತಪ್ಪ ಜೀವಂಗೆ ಶಿವ ಕೃಪೆಯಿಂದೆ ಸಮ್ಯಜ್ಞಾನೋದಯವಾಗಲು, ತನ್ನಾತ್ಮ ಚೈತನ್ಯ ಸ್ವರೂಪವಪ್ಪ ಸತ್ವ್ರಣವುವನವಗ್ರಹಿಸಿತ್ತೆಂಬುದೀಗ, ಕೋಣನೊಂದು ಕುದುರೆಯ ನುಂಗಿತ್ತೆಂಬ ಶಬ್ದಕ್ಕರ್ಥ. ಅಂತು ಸತ್ವ್ರಣವು ಗ್ರಾಹಕನಾದ ಶರಣನ ನಿಜಾಂತರಂಗದಲ್ಲಿ ಸೂಕ್ಷ್ಮವಾಗಿರ್ಪ ಪರಿಪೂರ್ಣ ಜ್ಞಾನಾಹಂಕಾರವನವಗ್ರಹಿಸಿತ್ತೆಂಬುದೀಗ, ಇರುಹೆ ಒಂದಾನೆಯ ನುಂಗಿತ್ತೆಂಬ ಶಬ್ದಕ್ಕರ್ಥ. ಅಂತಪ್ಪ ಅಹಂಕಾರವನವಗ್ರಹಿಸಿದ ಶರಣನ ಪರಿಪೂರ್ಣಜ್ಞಾನವು ಮನೋಮಧ್ಯದಲ್ಲಿರ್ಪ ಮತ್ಸರವ ನಷ್ಟವ

ಮಾಡಿತ್ತೆಂಬುದೀಗ, ಭಲ್ಲುಕನ ಅಲ್ಲವೆನಿಸಿತ್ತೆಂಬ ಶಬ್ದಕ್ಕರ್ಥ. ಅಂತಪ್ಪ ಮತ್ಸರವಳಿಯಲು, ಭವದಲ್ಲಿ ಬೀಗಿವಡೆದಿರ್ಪ ಜೀವಂಗೆ ಸದ್ವಿವೇಕ ಜ್ಞಾನ ತಲೆದೋರಿ ತನ್ನಾತ್ಮ ಚೈತನ್ಯ ಸ್ವರೂಪವಪ್ಪ ಪರಬ್ರಹ್ಮದತ್ತಲೆಯ್ದಿದವನು ಶರಣನು ಜ್ಞಾನಾಕಾಶವೆ ತಾನಾಗಿ ಬಿಂದು ಸ್ವರೂಪವಾದ ಮನೋಪ್ರಕೃತಿಯ ನಷ್ಟವ ಮಾಡಿದನೆಂಬುದೀಗ, ಚಿದಾಕಾಶವೆ ತಾನಾಗಿ ಬಿಂದ್ವಾಕಾಶವನೊಡೆಯಿತ್ತೆಂಬ ಶಬ್ದಕ್ಕರ್ಥ. ಅಂತು ಮನೋಪ್ರಕೃತಿಯಳಿದು, ಉನ್ಮನಿ ತತ್ವ ಸ್ವರೂಪವಾದ ಶರಣನ ಅನಿತ್ಯವಾದ ದೇಹಭಾವ ನಷ್ಟವಾಯಿತ್ತೆಂಬುದೀಗ, ದೃಷ್ಟಾಕಾಶವ ನಷ್ಟಂಗೈಯ್ಯಿತ್ತೆಂಬ ಶಬ್ದಕ್ಕರ್ಥ. ಅಂತು ತನುಮನೋಪ್ರಕೃತಿ ನಷ್ಟವಾದ ಶರಣನು ಸಕಲ ಪ್ರಪಂಚಿಗೆ ಬೇರಾದ ಪರಿಪೂರ್ಣ ಪರಬ್ರಹ್ಮವನು ತನು ಮನ ಪ್ರಾಣಂಗಳಲ್ಲಿ ಅವಗ್ರಹಿಸಿದನೆಂಬುದೀಗ, ಭಿನ್ನಾಕಾಶವನೊಡಗೂಡಿತ್ತೆಂಬ ಶಬ್ದಕ್ಕರ್ಥ. ಅಂತು ತನು ಮನ ಪ್ರಾಣಂಗಳಲ್ಲಿ ಲಿಂಗ ಗ್ರಾಹಕನಾದ ಶರಣನರಿವು ನಾದ ಬ್ರಹ್ಮಮಯವಾದ ಮಹಾಘನ ಲಿಂಗತತ್ವವನವಗ್ರಹಿಸಿತ್ತೆಂಬುದೀಗ, ಮಹಾಕಾಶವನೊಳಕೊಂಡಿತ್ತೆಂಬ ಶಬ್ದಕ್ಕರ್ಥ. ಅಂತು ಸರ್ವಾಂಗದಲ್ಲಿ ಲಿಂಗ ಗ್ರಾಹಕನಾದ ಶರಣನ ಪರಿಪೂರ್ಣ ಜ್ಞಾನದರಿವು ನಿಷ್ಕಲವಾದ ನಿರವಯ ಪರಬ್ರಹ್ಮದಲ್ಲಿ ಸಮರಸವಾಯಿತ್ತೆಂಬುದೀಗ, ಸೌರಾಷ್ಟ್ರ ಸೋಮೇಶ್ವರನೆಂಬ ನಿಜಾಕಾಶದಲ್ಲಿ ನಿಂದು ನಾಮ ರೂಪು ನಷ್ಟವಾಯಿತ್ತೆಂಬ ಶಬ್ದಕ್ಕರ್ಥ.

೧೦೩. ತಲೆ ಇಲ್ಲದ ಕಾಗೆ, ನೆಲದಲ್ಲಿ ನಡೆಯಿತ್ತು. ಹುಲಿ ನಲಿದು ಗಿಲಿಗಿಸಿ ಗೆಜ್ಜೆಗಟ್ಟಿ ಒಲಿದಾಡಿತ್ತು. ಬಲುಹದಿಸಿದ ಕರಡಿ ಹಾಡಿ ಹರಸಿ ಬೆಳೆಯಿತ್ತು. ಕಾಳರಕ್ಕಸಿಯ ಮಗುವು ಚಂದ್ರಸೂರ್ಯರ ರಾಟಾಳದ ಹುರಿಯೊಳಗೆ ತಿರಿಗಿತ್ತು. ಕಳವಳಿಸುವ ಕಪಿಯ ಭೂತ ಹೊಡೆದು ಜೇಳೂರೆ ಗಾಳಿಯೊಳು ಸಿಕ್ಕಿ ಸೌರಾಷ್ಟ್ರ ಸೋಮೇಶ್ವರನ ಕಾಣದೆ ಕಣ್ಣಡಕದ ಕಣ್ಣಿನಂತೆ, ಕಣ್ಣೆನಿಸಿ ಕಣ್ಣುಗೆಟ್ಟಿತ್ತು.

ಟೀಕುಃ— ಜ್ಞಾನವೆಂಬ ಶಿರಸ್ಸಿಲ್ಲದ ಅಜ್ಞಾನ ಸ್ವರೂಪವಾದ ಪ್ರಕೃತಿ ಎಂಬ ವಾಯಸ ದೇಹಭಾವದಲ್ಲಿ ಗಮಿಸುತ್ತಿಹುದೆಂಬುದೀಗ, ತಲೆ ಇಲ್ಲದ ಕಾಗೆ ನೆಲದಲ್ಲಿ ನಡೆಯಿತ್ತೆಂಬ ಶಬ್ದಕ್ಕರ್ಥ. ಇಂತು ಅಜ್ಞಾನ ಪ್ರಕೃತಿ ದೇಹಭಾವ ವಿಡಿದು ಗಮಿಸಲು, ಕ್ರೋಧವೆಂಬ ವ್ಯಾಘ್ರ ಮನೋನುರಾಗದಿಂದ ಹಮ್ಮೆಂಬ ಘೂಕು ಶಬ್ದಂಗಳಿಂದುಲಿದೋಲಾಡುತ್ತಿಹುದೆಂಬುದೀಗ, ಹುಲಿ ನಲಿದು ಗಿಲಿಗಿಸಿ ಗೆಜ್ಜೆಗಟ್ಟಿ ಒಲಿದಾಡಿತ್ತೆಂಬ ಶಬ್ದ



ಕ್ಕರ್ಥ. ಹೀಗೆ ಕ್ರೋಧ ಉಲಿವುತ್ತಿರಲು ಸಕಲರ ಹಿಡಿದು ಬಿಡದ ಸಾಮರ್ಥ್ಯವನುಳ್ಳ ದ್ವೇಷವೆಂಬ ಭಲ್ಲೂಕ ದೂಷಣ ಭೂಷಣಗಳಿಂ ಹಾಡಿ ಗನ್ನಗತುಕಗಳಿಂ ಹರಿಸಿ ಸರ್ವಾಂಗದೊಳ್ವರ್ಧನವಾಯಿತ್ತೆಂಬುದೀಗ, ಬಲುಹೆನಿಸಿದ ಕರಡಿ ಹಾಡಿ ಹರಿಸಿ ಬೆಳೆಯಿತ್ತೆಂಬ ಶಬ್ದಕ್ಕರ್ಥ. ಈ ಪ್ರಕಾರದಿಂ ದ್ವೇಷ ಸರ್ವಾಂಗದೊಳ್ವರ್ಧನವಾಗಲು, ಅಜ್ಞಾನ ತಮೋವರ್ಣವನುಳ್ಳ ಸಂಸಾರ ಕಾರಣಮಪ್ಪ ಮಾಯೆ ಎಂಬ ದ್ವೈತಿಯ ಗರ್ಭದೊಳ್ಜನಿಸಿದ ಜೀವನೆಂಬ ಶಿಸು ಈಡಾ ಪಿಂಗಳದೋರದ ಪ್ರಾಣವಾಯು ವಿಕಾರವಿಡಿದು, ಭ್ರಮಿಸುತ್ತಿಹುದೆಂಬುದೀಗ, ಕಾಳರಕ್ಕಸಿಯ ಮಗುವು ಚಂದ್ರಸೂರ್ಯರ ರಾಟಳದ ಹುರಿಯೊಳಗೆ ತಿರಿಗಿತ್ತೆಂಬ ಶಬ್ದಕ್ಕರ್ಥ. ಈ ಕ್ರಮದಿಂ ಜೀವನು ಚರಿಸುತ್ತಿರಲು, ಸಂಕಲ್ಪ ವಿಕಲ್ಪಂಗಳಿಂ ಭ್ರಮಿಸುವ ಮನೋ ಮರ್ಕಟವ ಕಾಮವೆಂಬ, ಗ್ರಹಾವರಣವಾಗಿ, ಭವ ದುಃಖವೆಂಬ ವೃಶ್ಚಿಕ ದಷ್ಟದಿಂ ವಿಷಮಗತಿಯಾಗಿ ಚರಿಸುವ ದಶವಾಯು ವಿಕಾರದೊಳು ಸಿಕ್ಕಿ ಶಿವತತ್ವದ ನಿಜವನರಿಯದೆ ಶ್ರುತಜ್ಞಾನವೆಂಬುಪಚಕ್ಷುವಿರ್ದು ತನ್ನ ತಾ ತಿಳಿಯದೆ, ಅಜ್ಞಾನಿ ಎನಿಸಿತ್ತೆಂಬುದೀಗ, ಕಳವಳಿಸುವ ಕಪಿಯ ಭೂತ ಹೊಡೆದು, ಜೇಳೂರೆ ಗಾಳಿಯೊಳು ಸಿಕ್ಕಿ ಸೌರಾಷ್ಟ್ರ ಸೋಮೇಶ್ವರನ ಕಾಣದೆ ಕಣ್ಣಡಕದ ಕಣ್ಣಿನಂತೆ ಕಣ್ಣೆನಿಸಿ ಕಣ್ಣುಗೆಟ್ಟಿತ್ತೆಂಬ ಶಬ್ದಕ್ಕರ್ಥ.

೧೦೪. ಅಂಗೈಯೊಳಗಣ ಹಂಸೆ ಹಾಲನೊಲ್ಲದೆ ನೀರ ಕುಡಿಯಿತ್ತು. ನೀರು ಬಾಯಾರಿ ನೀರಡಸಿ ಅರಕೆಗೊಂಡಿತ್ತು. ಅರಗಿನ ಮಡುವು ಉರಿಯುಂಡು ಗರಿ ಗತವಾಯಿತ್ತು. ಕರ್ಪುರದ ಮಾಡ ಅಗ್ನಿಯನೊಳಕೊಂಡು, ಉರಿಯದು ನೋಡಾ ಸೌರಾಷ್ಟ್ರ ಸೋಮೇಶ್ವರಾ.

ಟೀಕುಃ— ಚಿಚ್ಛಕ್ತಿಯ ಕೃಪಾ ಹಸ್ತದೊಳಿರ್ಪ ಜೀವ ಹಂಸನು ಜ್ಞಾನೋದಯದಿಂ ಸಂಸಾರ ವಿಷಯ ರಸವನೊಲ್ಲದೆ, ಸದ್ವಿವೇಕ ಜಲವ ಸ್ವೀಕರಿಸುತ್ತಿಹುದೆಂಬುದೀಗ, ಅಂಗೈಯೊಳಗಣ ಹಂಸೆ, ಹಾಲನೊಲ್ಲದೆ ನೀರ ಕುಡಿಯಿತ್ತೆಂಬ ಶಬ್ದಕ್ಕರ್ಥ. ಇಂತಪ್ಪ ಸದ್ವಿವೇಕ ಜಲಸ್ವರೂಪವಾದ ಉನ್ಮನಿ ಮನ ಶಿವತತ್ವದಲ್ಲಿ ಕೂಡಬೇಕೆಂಬ ತೃಷ್ಣಾತುರದಿಂ ಪರಮಾನಂದ ಜಲವ ನಿಶ್ಚೈಸಿ ಮೋಕ್ಷಾಪೇಕ್ಷೆಯ ಮುಂದುಗೊಂಡಿರ್ಪುದೆಂಬುದೀಗ, ನೀರು ಬಾಯಾರಿ ನೀರಡಿಸಿ ಅರಿಕೆಗೊಂಡಿತ್ತೆಂಬ ಶಬ್ದಕ್ಕರ್ಥ. ಇಂತಾಗಲು ಚಿದೋಪದೇಶದಿಂ ಮಹಾಜ್ಞಾನಾಗ್ನಿಯ ಪ್ರಭಾ ಪುಂಜವೆನಿ

ಸುವ ದಿವ್ಯ ತೇಜೋಲಿಂಗವಂಗವನವಗ್ರಹಿಸಲು, ಜೀವನ ಪ್ರಕೃತಿ ಪಂಚ ರಕ್ಕೆಗಳಳಿದವೆಂಬುದೀಗ, ಅರಗಿನ ಮಾಡ ಉರಿಯುಂಡು ಗರಿಗತವಾಯಿತ್ತೆಂಬ ಶಬ್ದಕ್ಕರ್ಥ. ಆ ದಿವ್ಯ ತೇಜೋಲಿಂಗಕ್ಕೆ ಆಧಾರ ಚೈತನ್ಯವಾದ ಮಹಾಜ್ಞಾನಾಗ್ನಿಯು ಶರಣನ ಸದ್ವಾಸನ ಸಂಬಂಧವಪ್ಪ ನಿಜಾನುಭಾವಾಂತರಂಗ ಒಳಕೊಂಡು, ತಾಪತ್ರಯಾಗ್ನಿಯಲ್ಲಿ ಉರಿಯದೆಂಬುದೀಗ, ಕರ್ಪುರದ ಮಾಡ ಅಗ್ನಿಯನೊಳಕೊಂಡು, ಉರಿಯದು ನೋಡಾ ಸೌರಾಷ್ಟ್ರ ಸೋಮೇಶ್ವರ ಎಂಬ ಶಬ್ದಕ್ಕರ್ಥ.

೧೦೫. ಏಳು ನೆಲೆಯ ಕರು ಮಾಡದುಪ್ಪರಿಗೆಯೊಳಗೆ ಬಂದೆ. ಮುತ್ತಿನ ನೆಲಗಟ್ಟಿನ ಮೇಲೆ, ಭಿತ್ತಿ ಇಲ್ಲದ ರತ್ನದ ಹೊದಿಕೆಯ ಮೇಲಿಪ್ಪ ಕಳಶವ ಕಂಡವನಾರನು ಕಾಣೆ. ಸೌರಾಷ್ಟ್ರ ಸೋಮೇಶ್ವರ ಲಿಂಗವ ಹಿಡಿದು ನಿಲಲರಿಯದವರು ಜಾರಿಬಿದ್ದು ಸೂರೆಹೋದರು ಕಾಲಂಗೆ.

ಟೀಕು:-- ಸಪ್ತ ಚಕ್ರಂಗಳೆಂಬುದೀಗ ಏಳು ನೆಲೆ ಎಂಬ ಶಬ್ದಕ್ಕರ್ಥ. ಅಂತಪ್ಪ ಸಪ್ತ ಚಕ್ರಂಗಳ ಮೇಲಿಪ್ಪ ಸಹಸ್ರ ದಳ ಪದ್ಮದಿಂದೊಪ್ಪುವ ಬ್ರಹ್ಮರಂಧ್ರಸ್ಥಾನವೆಂಬುದೀಗ ಏಳು ನೆಲೆಯ ಕರು ಮಾಡದುಪ್ಪರಿಗೆಯೊಳಗೆಂಬ ಶಬ್ದಕ್ಕರ್ಥ. ಅಂತಪ್ಪ ಬ್ರಹ್ಮರಂಧ್ರದೊಳಗೆ ಎರಡಿಲ್ಲದಿರ್ಪ ಮುಕ್ತಿ ಸ್ವರೂಪವಾದ ಸುಚಿತ್ತವೆಂಬ ನೆಲಗಟ್ಟಿನ ಮೇಲೆ ಎಂಬುದೀಗ, ಒಂದೆ ಮುತ್ತಿನ ನೆಲೆಗಟ್ಟಿನ ಮೇಲೆ ಎಂಬ ಶಬ್ದಕ್ಕರ್ಥ. ಅಂತಪ್ಪ ಸುಚಿತ್ತವೆಂಬ ನೆಲೆಗಟ್ಟಿನಲ್ಲಿ ತಾನೆಂಬಹಂಕಾರವಳಿದ ಪರಿಪೂರ್ಣ ಜ್ಞಾನಾಂಬರವೆ ಆವರಣವಾಗಿಹುದೆಂಬುದೀಗ, ಭಿತ್ತಿ ಇಲ್ಲದ ರತ್ನದ ಹೊದಿಕೆ ಎಂಬ ಶಬ್ದಕ್ಕರ್ಥ. ಆ ಪರಿಪೂರ್ಣ ಜ್ಞಾನಾಂಬರದಲ್ಲಿ ಪ್ರಕಾಶಿಸುತ್ತಿರ್ಪ ಜ್ಞಾನ ಸ್ವರೂಪವಾದ ನಿಷ್ಕಲ ಶಿವತತ್ವವಿಹುದೆಂಬುದೀಗ, ಮೇಲಿಪ್ಪ ಕಳಸವೆಂಬ ಶಬ್ದಕ್ಕರ್ಥ. ಅಂತಪ್ಪ ನಿಷ್ಕಲವಸ್ತುವಭಿನ್ನಜ್ಞಾನ ದೃಷ್ಟಿಯಿಂ ಕಂಡಿಹೆನೆಂಬವರಿಗಸಾಧ್ಯವೆಂಬುದೀಗ ಕಂಡವರನಾರನು ಕಾಣೆನೆಂಬ ಶಬ್ದಕ್ಕರ್ಥ. ಅಂತಪ್ಪ ನಿರಾಕಾರವಾದ ಪರಬ್ರಹ್ಮವ ಶ್ರೀಗುರುಕಾರುಣ್ಯದಿಂ ಪ್ರತ್ಯಕ್ಷವ ಮಾಡಿಕೊಂಡು ಕರಸ್ಥಲದಲ್ಲಿ ದೃಢವಿಡಿದು, ಸುಜ್ಞಾನಕ್ರಿಯಿಂದಲಾಚರಿಸಿ, ಅಂಗ ಮನಪ್ರಾಣಂಗಳ ಲಿಂಗದಲ್ಲಿ ಸ್ವಸ್ಥಿರವ ಮಾಡಲರಿಯದ ಭಿನ್ನಜ್ಞಾನಿಗಳು ಲಕ್ಷವಿಟ್ಟು ಪರಬ್ರಹ್ಮವ ಸಾಧಿಸಿಹೆನೆಂದೊಡೆ, ಸಾಧ್ಯವಲ್ಲದೆ ಶಿವತತ್ವಕ್ಕೆ ಭಿನ್ನವಾಗಿ ಭವಕ್ಕೀಡಾಗಿ, ಯಮನ



ಬಾಧೆಗೊಳಗಾದರೆಂಬುದೀಗ, ಸೌರಾಷ್ಟ್ರ ಸೋಮೇಶ್ವರ ಲಿಂಗವ ಹಿಡಿದು ನಿಲಲರಿಯದವರು ಜಾರಿಬಿದ್ದು ಸೂರೆ ಹೋದರು ಕಾಲಂಗೆ ಎಂಬ ಶಬ್ದಕ್ಕರ್ಥ.

೧೦೬. ನಟ್ಟಡವಿಯಲ್ಲಿ ಕೆಂಡದ ಮಳೆಗರೆದು, ಊರಡವಿಯನೊಂದಾಗಿ ಸುಟ್ಟಿತ್ತು ನೋಡಾ! ಊರೈವರನಾರೈವರ ಮೂಗು ಹೋಯಿತ್ತು ನೋಡಾ! ಹೋಗದ ಊರಿನ ಬಾರದ ದಾರಿಯ ಕಂಡು ಸುಖಿಯಾದೆನಯ್ಯ ಸೌರಾಷ್ಟ್ರ ಸೋಮೇಶ್ವರಾ.

ಟೀಕು:--ಶರಣನ ಮನೋಮಧ್ಯದಲ್ಲಿ ಸುಜ್ಞಾನಾಗ್ನಿ ಪ್ರಭವಿಸಿ ಸಕಲೇಂದ್ರಿಯವೆಂಬರಣ್ಯದಲ್ಲಿ ಕರೆವುತ್ತಿಹುದೆಂಬುದೀಗ, ನಟ್ಟಡವಿಯಲ್ಲಿ ಕೆಂಡದ ಮಳೆಗರೆದು ಎಂಬ ಶಬ್ದಕ್ಕರ್ಥ. ಆ ಜ್ಞಾನಾಗ್ನಿ ದೇಹೇಂದ್ರಯಂಗಳ ಸುಟ್ಟುರುಹಿತ್ತೆಂಬುದೀಗ, ಊರಡವಿಯನೊಂದಾಗಿ ಸುಟ್ಟಿತ್ತು ನೋಡಾ ಎಂಬ ಶಬ್ದಕ್ಕರ್ಥ. ಇಂತಾಗಲಾ ದೇಹ ಸಂಬಂಧವಾದ ಪಂಚಭೂತಂಗಳ ತತ್ಸಂಬಂಧವಾದ ಸುಖವನಾರೈದನುಭವಿಸುವ ಕರಣಂಗಳ ಸರ್ವಾಭಿಮಾನಹಂಕಾರವಳಿಯಿತ್ತೆಂಬುದೀಗ, ಊರೈವರ ನಾರೈವರ ಮೂಗ ಹೋಯಿತ್ತು ನೋಡಾ ಎಂಬ ಶಬ್ದಕ್ಕರ್ಥ. ಇಂತಾಗಲಾ ಶರಣನು ಆರೂ ಎಯ್ದುಬಾರದ ಮೋಕ್ಷ ಗ್ರಾಮದ ಭವಕ್ಕೆ ಬಾರದ ಸತ್ಪಥ ಮಾರ್ಗವ ಸದ್ವಿವೇಕದಿಂ ಕಂಡು, ಪರಮ ಪರಿಣಾಮಿಯಾಗಿರ್ದ ಶರಣನೆಂಬುದೀಗ, ಹೊಗದ ಊರಿನ ಬಾರದ ದಾರಿಯ ಕಂಡು, ಸುಖಿಯಾದೆನಯ್ಯ ಸೌರಾಷ್ಟ್ರ ಸೋಮೇಶ್ವರನೆಂಬ ಶಬ್ದಕ್ಕರ್ಥ.

೧೦೭. ಆಡಿನ ತತ್ತಿಯೊಳಗೊಂದು, ಹೇರಡವಿ ಇದ್ದಿತ್ತು. ಆ ಹೇರಡವಿಯೊಳಗೆ ಮೇರುವೆ ಇದ್ದಿತ್ತು. ಆ ಮೇರುವಿನ ಒಡಲಲ್ಲಿ ಚತುರ್ದಶ ಭುವನ ಚರಾಚರಂಗಳೆಲ್ಲ ಇದ್ದಿತ್ತು. ತತ್ತಿ ಒಡೆಯಿತ್ತು. ಹೇರಡವಿಯೊಳಗೆ ಆಡವಿ ಅಡಗಿತ್ತು ಸೌರಾಷ್ಟ್ರ ಸೋಮೇಶ್ವರ ಲಿಂಗ ಇಲ್ಲದಂತೆ ಇತ್ತು.

ಟೀಕು:--ರಜೋಗುಣ ಸಂಬಂಧವಾದ ಜೀವನ ಪ್ರಕೃತಿರೂಪವಾದ ತನುವಿನ ಮಧ್ಯದಲ್ಲಿ ಭವಾರಣ್ಯ ತನ್ಮಯವಾಗಿದ್ದಿತ್ತೆಂಬುದೀಗ, ಆಡಿನ ತತ್ತಿಯೊಳಗೊಂದು ಹೇರಡವಿ ಇದ್ದಿತ್ತೆಂಬ ಶಬ್ದಕ್ಕರ್ಥ. ಅಂತಪ್ಪ ಭವಾರಣ್ಯದ ಮಧ್ಯದಲ್ಲಿ ಅಹಂಕಾರವೆಂಬ ಮೇರುವೆ ಹುಟ್ಟಿತ್ತೆಂಬುದೀಗ, ಹೇರ

ಡವಿಯೊಳಗೆ ಮೇರುವೆ ಇದ್ದಿತ್ತೆಂಬ ಶಬ್ದಕ್ಕರ್ಥ. ಅಂತಪ್ಪ ಅಹಂಕಾರ ಮಧ್ಯದಲ್ಲಿ ಹದಿನಾಲ್ಕು ಲೋಕ ಸಚರಾಚರ ಪ್ರಾಣಿಗಳೆಲ್ಲ, ಆ ಅಹಂಕಾರ ಯುಕ್ತವಾಗಿಹವೆಂಬುದೀಗ, ಆ ಮೇರುವಿನ ಒಡಲಲ್ಲಿ ಚತುರ್ದಶ ಭುವನ ಸಚರಾಚರಂಗಳೆಲ್ಲ ಇದ್ದಿತ್ತೆಂಬ ಶಬ್ದಕ್ಕರ್ಥ. ಅಂತಪ್ಪ ದೇಹಿಗಳೊಳಗೆ ಒಬ್ಬ ಜೀವಂಗೆ ಸುಜ್ಞಾನೋದಯವಾಗಲು ಸಕಲ ಪ್ರಪಂಚು ನಿವೃತ್ತಿಯ ಮಾಡಿ ಗುರೂಪಾವಸ್ಥೆಯ ಮಾಡಲು ಆ ಶ್ರೀಗುರು ಕರುಣಿಸಿ ಸರ್ವಾಂಗ ಲಿಂಗ ಸಂಬಂಧವ ಮಾಡಲು, ತನುಭಾವ ನಷ್ಟವಾಯಿತ್ತೆಂಬುದೀಗ, ತತ್ತಿ ಒಡೆಯಿತ್ತು ಎಂಬ ಶಬ್ದಕ್ಕರ್ಥ. ಅಂತಪ್ಪ ಲಿಂಗ ಸಂಬಂಧದಿಂ ತನು ಭಾವ ನಷ್ಟವಾದ ಶರಣಂಗೆ ಭವಾರಣ್ಯವಳಿಯಿತ್ತೆಂಬುದೀಗ, ಅಡಗಿ ಅಡಗಿತ್ತೆಂಬ ಶಬ್ದಕ್ಕರ್ಥ. ಅಂತಪ್ಪ ಭವಾರಣ್ಯ ನಷ್ಟವಾದ ಶರಣನ ಸರ್ವಾಂಗವು ಚಿದ್ಘನಲಿಂಗದಲ್ಲಿ ಸಮರಸವಾಗಲು, ಶರಣ ಲಿಂಗವೆಂಬುಭಯ ಭಾವವಿಲ್ಲದೆ ಹೋಯಿತ್ತೆಂಬುದೀಗ, ಸೌರಾಷ್ಟ್ರ ಸೋಮೇಶ್ವರ ಲಿಂಗ ಇಲ್ಲದಂತೆ ಇದ್ದಿತ್ತೆಂಬ ಶಬ್ದಕ್ಕರ್ಥ.

೧೦೮. ಆಶ್ರಮಿಗಳೆದ್ದು ಆತ್ಯಾಶ್ರಮವ ತಳೆದು ತತ್ವಜ್ಞಾನ ಭರಿತನಾಗಿ ನಿಂದುದೆ ಎನ್ನಿಷ್ಟ. ಅಣು ಮಾಯಾ ಕಾರ್ಮಿಕ ಮಲತ್ರಯವನುಳಿದು ನಿರ್ಮಲಾಂಗವಾದುದೆ ಎನ್ನಿಷ್ಟ. ಅರಿವರತು ಮರಹು ನಷ್ಟವಾಗಿ ಶರಣಸ್ಥಲಕ್ಕೆ ಸಂದು ದ್ವಿಕರ್ಮ ನಷ್ಟವಾಗಿ ನಿಂದುದೆ ಎನ್ನಿಷ್ಟ. ಸತ್ಯಜ್ಞಾನಾನಂದ ಶಿವಲಿಂಗಾಂಗಿ ಸೌರಾಷ್ಟ್ರ ಸೋಮೇಶ್ವರ ಲಿಂಗವಾದುದೆ ಎನ್ನಿಷ್ಟ.

೧೦೯. ಅರಿವು ಮರಹಳಿದುದಕ್ಕೇನ ದೃಷ್ಟ? ಆವ ಭ್ರಮೆಯಳಿದುದೆ ದೃಷ್ಟ. ಭಾವಭ್ರಮೆ ಅಳಿದುದಕೇನು ದೃಷ್ಟ? ಮನ ಸಂಚಲವಳಿದುದೇ ದೃಷ್ಟ. ಮನ ಸಂಚಲವಳಿಮುದಕೇನು ದೃಷ್ಟ? ತನುವಿಕಾರವಳಿದುದೇ ದೃಷ್ಟ. ತನುಪಿಕಾರವಳಿದುದಕೇನು ದೃಷ್ಟ? ಪರಮ ಸುಖವಿಂಬುಗೊಂಡುದೆ ದೃಷ್ಟ. ಪರಮ ಸುಖವಿಂಬುಗೊಂಡುದಕ್ಕೇನು ದೃಷ್ಟ? ಸೌರಾಷ್ಟ್ರ ಸೋಮೇಶ್ವರನೆಂಬ ನಿಜ ತತ್ವಾಂಗವಾದುದೆ ದೃಷ್ಟ.

೧೧೦. ಅರ್ಥೇಷಣ, ಪುತ್ರೇಷಣ, ದಾರೇಷಣವೆಂಬ ಈ ಷಣತ್ರಯವನುಳಿದು, ಅಸಿ, ಮಸಿ, ಕೃಷಿ, ವಾಣಿಜ್ಯಂಗಳೆಂಬ ವ್ಯಾಪಾರಂಗತವಾಗಿ, ಸಂಸಾರ ಸ್ಪೃಹವಳಿದು ನಿಸ್ಪೃಹನಾಗಿ ರಕ್ತ, ಅನುರಕ್ತ,



ಅತಿರಕ್ತವೆಂಬ ರಕ್ತತ್ರಯಗೆಟ್ಟು ವಿರಕ್ತನಾಗಿ, ಸಗುಣದಲ್ಲಿ ಸಲ್ಲದೆ ನಿರ್ಗುಣದಲ್ಲಿ ನಿಲ್ಲದೆ, ಸಗುಣ ನಿರ್ಗುಣಕ್ಕುಪಮಾತೀತನಾದ ಶಿವಲಿಂಗಾಂಗಿ ಸೌರಾಷ್ಟ್ರ ಸೋಮೇಶ್ವರಲಿಂಗವಾದುದೆನ್ನಿಷ್ಟ.

೧೧೧. ಖಂಡಿತವಳಿದಿಂದ್ರಿಯಂಗಳಖಂಡಿತವಾದವಯ್ಯ. ಖಂಡಿತವಳಿದು ತನ್ಮಾತ್ರೆಗಳಖಂಡಿತವಾದವಯ್ಯ. ಖಂಡಿತವಳಿದು ಭೌತಿಕಂಗಳಖಂಡಿತವಾದವಯ್ಯ! ಪಂಚಭೂತಮಯವಾದ ಬ್ರಹ್ಮಾಂಡ ಶರಣನಂಗದಲ್ಲಿ ಪಂಚಬ್ರಹ್ಮಮಯವಾಯಿತ್ತಾಗಿ ಇಷ್ಟಖಂಡಿತವಾಗಿ, ಸೌರಾಷ್ಟ್ರ ಸೋಮೇಶ್ವರನ ಶರಣರಿಗೆ ಹಿರಿದೊಂದು ಘನವಿಲ್ಲ.

೧೧೨. ಸೂಕ್ಷ್ಮನಾದದಿಂದತ್ತಣಾದಿ ಬಿಂದುವಿನಲ್ಲಿ ಅರಿವು ರೂಪಾದ ಖಂಡಿತ ನಿರ್ವಯಲು ಚಿತ್ಸ್ವರೂಪವ ತಾಳಿ ಮಹಾಘನ ರೂಪವಡಗಿಸಿದ ಸ್ವತಂತ್ರ ನಿಃಕಳ ನಿರಂಜನ, ಪರೆ ಪಶ್ಯಂತಿ ವೈಖರಿಗೆ ಮೂಲವಾದ ಪ್ರಭಾಶಕ್ತಿಯೊಳಗೆ ತೆರಹಿಲ್ಲದ ಬಯಲು ತಾನಾದ ಸೌರಾಷ್ಟ್ರ ಸೋಮೇಶ್ವರ ಲಿಂಗದಲ್ಲಿ ಭೇದವಳಿದ ಶರಣ.

೧೧೩ ಆಕೃತಿ ನಿರಾಕೃತಿಗಳೆಂಬ ಕೃತಿಯಳಿದು ವ್ಯಾಕುಳ ನಿರಾಕುಳವಡಗಿ, ನಿಃಕರಿಸುವುದು, ಸ್ವಿಕರಿಸುವುದಲ್ಲದೆ, ಚರಾಚರನಲ್ಲದಖಿಳಾತೀತನಾಗಿ ನಿಂದ ನಿಜವು ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣ.

೧೧೪. ಲಿಂಗವೆ ಪ್ರಾಣವಾಗಿ, ಪ್ರಾಣವೆ ಲಿಂಗವೆಂಬ ಪ್ರಪಂಚವನರಿಯೆನಯ್ಯ! ಘನವು ಮನದಲ್ಲಿ ವೇಧಿಸಿ ಮನ ಲಿಂಗ ಲೀಯವಾಗಿ, ನೆನಹಿನ ಸಂಕಲ್ಪ ಕ್ರಿ ನಿಃಪತಿಯಾಗಿ ಅಂಗಲಿಂಗವೆಂಬ ಭಾವಗೆಟ್ಟು ಲಿಂಗವೆ ಸರ್ವಾಂಗ ಮುಖವಾದ ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣನ ಸ್ವತಂತ್ರತೆಯ ಗತಿಯ ನೋಡಾ.

೧೧೫. ಕಲ್ಲಿನಲ್ಲಿ ಕನಕ ಒಗೆದರೆ ಕನಕ ಕಲ್ಲಿಂಗೆ ಕಿಂಕರನಪ್ಪುದೆ? ಶುಕ್ತಿಯಲ್ಲಿ ಮೌಕ್ತಿಕ ಒಗೆದರೆ ಮುತ್ತು ಶುಕ್ತಿಗೆ ಕಿಂಕರನಪ್ಪುದೆ? ಧರೆಯಲ್ಲಿ ಸುರತರು ಒಗೆದರೆ ಸುರತರು ಧರೆಗೆ ಕಿಂಕರವಪ್ಪುದೆ? ಜನನಿಯ ಉದರದಲ್ಲಿ ಘನಶರಣ ಒಗೆದರೆ ಜನನಿಜನಕಂಗೆ ಕಿಂಕರನಪ್ಪನೆ? ಸೌರಾಷ್ಟ್ರ ಸೋಮೇಶ್ವರ ನಿಮ್ಮ ಶರಣರು ಸ್ವತಂತ್ರ ಶೀಲರು ಅಗ್ರಗಣ್ಯರು

೧೧೬. ಸಾಕಾರ ನಿರಾಕಾರದೊಳಗೆ ಚಿದ್ರೂಪವಂ ತಳೆದ ಮಹಾಮಹಿಮನಿರಲು ಬೆಳುದಿಂಗಳೊಳಗಣ ಅಚ್ಚ ಪಳುಕಿನ ಪರ್ವತವ ಬೆಳು

ದಿಂಗಳೆಂದಿಪ್ಪಂತೆ, ಸ್ಫಟಿಕದ ಘಟದೊಳಗಣ ಜ್ಯೋತಿಯಂತೆ, ಸದ್ಭಾವ ಪ್ರಕಾಶಿಸಲು ಒಳಹೊರಗೆಂಬುದಿಲ್ಲ ಸೌರಾಷ್ಟ್ರ ಸೋಮೇಶ್ವರನ ಶರಣಂಗೆ.

೧೧೭. ಪ್ರತಿ ರಹಿತವಾದ ಲಿಂಗದಲ್ಲಿ, ಪ್ರತಿ ರಹಿತನಾದ ಮಹಿಮಂಗೆ ಅತಿಶಯ ಒಂದಿಲ್ಲ. ಸಂಸ್ಮೃತಿ, ವಿಸ್ಮೃತಿಗಳಿಲ್ಲ. ಸೂಕ್ಷ್ಮಸೂಕ್ಷ್ಮವಿಲ್ಲ. ಯೋಗ ವಿಯೋಗವಿಲ್ಲ. ಅಭೇದ್ಯ ಚಿತ್ಪ್ರಕಾಶಂಗೆ ಒಳಗು ಹೊರಗಿಲ್ಲ. ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣಂಗೆ.

೧೧೮. ವೇದಾಗಮಂಗಳ ದ್ವೈತಾದ್ವೈತದ ಬಗೆಗೆ ಸಿಲುಕುವನಲ್ಲ ಶರಣನ ತರ್ಕ್ಯನು. ಅಖಿಲಾತೀತ ಚರಾಚರಕೆ ನಿಲುವವನಲ್ಲ ಅತ್ಯತಿಷ್ಠದ್ದಶಾಂಗುಲನಹಂಕಾರ ವೈದದನುಪಮ. ಸ್ಥಾವರ ಜಂಗಮವಲ್ಲದ ಭರಿತ ಸರ್ವಕರ್ತೃ ಸೌರಾಷ್ಟ್ರ ಸೋಮೇಶ್ವರನಲ್ಲಿ ಅವಿರಳವಾದ ಶರಣ.

೧೧೯. ಅರಿವಿನ ತರಹರದಿಂದ ಭಾವ ಸದ್ಭಾವವನೈದಿದ ಶರಣನ ಭಾವದೊಳಗೆ ಲಿಂಗದೇವ ಲಿಂಗದೊಳಗೆ, ಸದ್ಭಾವ ಭೇದವಿಲ್ಲದೆ, ಮಾರ್ಗಕ್ರಿ ಮೀರಿದ ಕ್ರಿಗತೀತವಾದ ಲಿಂಗೈಕ್ಯನ ಪ್ರಾಣದೊಳಗೆ ಲಿಂಗ ಲಿಂಗ ಭಾವದೊಳಗೆ ಪ್ರಾಣ, ಇಂತೀ ಶಿವಭಾವ ಜೀವವಾಗಿಪ್ಪ ಶರಣಂಗೆ ಲಿಂಗ ಮುಖವಾದ ಸತ್ಪಥವಿದೆ ಕಂಡಯ್ಯ ಸೌರಾಷ್ಟ್ರ ಸೋಮೇಶ್ವರಾ.

೧೨೦. ಚೈತನ್ಯಕ್ಕೆ ಚೈತನ್ಯನಾಗಿ, ನಿನ್ನೊಳಗೆ ಪ್ರಾಣ, ಪ್ರಾಣದೊಳಗೆ ನೀನಿಪ್ಪ ಭೇದವ ನಿಮ್ಮ ಜ್ಞಾನದಿಂದವೆ ಕಂಡು, ನೀ ನಾನೆಂಬ ಭೇದವ ಮರೆದು, ನಿಜಲಿಂಗ ಪ್ರಾಣಸಂಗ ಸುಖಿಯಾಗಿಪ್ಪ ಶರಣ ನೀನೆಯಯ್ಯ ಸೌರಾಷ್ಟ್ರ ಸೋಮೇಶ್ವರಾ.

೧೨೧. ಮನ ಮುಕ್ತನಾದ ಶರಣ ತಾನೆ ಲಿಂಗವಾಗಿ, ಪ್ರಾಣ ಮುಕ್ತನು ನೋಡಾ ಅಯ್ಯ. ಪ್ರಸಾದ ಸನ್ನಿಹಿತನಾಗಿ ಕಾಯ ಮುಕ್ತನು. ಇದಕ್ಕೆ ಶ್ಲೋಕ "ಸ್ವಲಿಂಗೆ ಪ್ರಾಣಮುಕ್ತಸ್ಯ ಮನೋ ಮುಕ್ತಸ್ಯ ಜಂಗಮಃ ಪ್ರಸಾದ ಕಾಯ ಮುಕ್ತಸ್ಯ ತ್ರಿವಿಧಂ ತತ್ವನಿಶ್ಚಯು" ಎಂದುದಾಗಿ, ಇಂತೀ ತ್ರಿವಿಧ ಮುಕ್ತನಾಗಿ ನಿರ್ಮಲ ನಿರ್ಮಾಯ ಸತ್ಯ ಜ್ಞಾನಾನಂದ ಭರಿತ ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣ ಅಕಾಯ ಚರಿತ್ರನು.

೧೨೨. ಮಲ ಜಲವ ತೊಳೆಯಲುಂಟಲ್ಲದೆ, ನಿರ್ಮಲ ಜಲವ ತೊಳೆಯಲುಂಟೆ? ತವರಾಜ ಕಗ್ಗಿನವಾಗಬಲ್ಲುದೆ? ಮುತ್ತು ನೀರಾಗಬಲ್ಲುದೆ? ಸಹಸ್ರ ನಯನ ಚತುರ್ಮುಖ ಅಧೋಕ್ಷಜ ರುದ್ರಪದವನತಿಗಳೆದು, ಭಾವ ಬ್ರಹ್ಮವಾದ ಕಾಯ ಚರಿತ್ರಂಗೆ ಪೂರ್ವ ಕ್ರಿಯೆಗಳುಂಟೆ? ತನು ಗುಣವಳಿದ ಲಿಂಗದೇಹಿ ನಿರ್ದೇಹಿ ಅಪ್ರತಿಮ ನಿತ್ಯಜ್ಯೋತಿಯೊಳಗೆ ನಿಃಪತಿಯಾದ ಸೌರಾಷ್ಟ್ರ ಸೋಮೇಶ್ವರ ಲಿಂಗದೊಳಿಪ್ಪ ಅಪ್ರತಿಮ ಶರಣ.



೧೨೩. ತಾನೆ ಶಿವನೆಂದು ಕುರುಹ ತೋರುವ ಹಾಗೆ ಮರ್ತ್ಯದಲ್ಲಿ ಸುಳಿದನಲ್ಲದೆ, ಕುರುಹುಂಟೆ ಶರಣಂಗೆ? ಮತ್ತೊಮ್ಮೆ ಅರಿವು ಮರಹುಂಟೆ? ಬಿಚ್ಚುಬೇರಿಲ್ಲ ಬೆರಸಿಹೋದಲ್ಲದೆ ದ್ವಂದ್ವ ರಹಿತ ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣ.

೧೨೪. ಅಂಗದ ಕಳೆ ಲಿಂಗಸಂಗನಾಗಿ, ಅಂಗವೆಂಬ ಸಂಕೆಯ ಭಂಗವ ತೋರದು. ಲಿಂಗಾಂಗ ಸಂಗವೆಂಬ ಸಂದ ಮೀರಿ, ಪರಮ ಪ್ರಕಾಶದಿಂದ ಬೆಳಗುವ ಸ್ವಯಂ ಜ್ಯೋತಿಯ ನಿಜದಲ್ಲಿ ನಿಂದು ತನ್ಮಯನಾದ ಪರಮ ಲಿಂಗ ಕಾಯ ಸುಚರಿತ್ರ ನಿಶ್ಚಿಂತ ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣ.

೧೨೫. ಅಂಗವೆಂಬಂಗನೆಯು ಆತ್ಮನೆಂಬ ಪುರುಷನನಪ್ಪಿ, ಮುಂಡೆತನವಿಲ್ಲದೆ ಇಪ್ಪ ಭೇದವ ತಿಳಿದು ನೋಡಿರಣ್ಣಾ. ಈ ಕುಂಟಣಿಯಾದ ಒಡಹುಟ್ಟ ನಪುಂಸಕನಾದ ಕಾರಣ ಲಿಂಗಸಂಗಿಯಲ್ಲದೆ ಹೋದ ಕೇಳಿರಣ್ಣಾ! ಪ್ರಾಣನು ಪುರುಷನಾದರೂ ಲಿಂಗವ ಕೂಡುವ ಭರದಿಂದ ಸತಿಯಾಗ ಬಲ್ಲ. ಶರಣ ಸತಿ ಲಿಂಗ ಪತಿ ಎಂಬುದುಂಟಾಗಿ ಶಿವಜ್ಞಾನವೆಂಬ ಸಖಿಯ ಕೈವಿಡಿದು ಸೌರಾಷ್ಟ್ರ ಸೋಮೇಶ್ವರ ಲಿಂಗವ ಕೂಡಿ ಸುಖಿಯಾದನು.

೧೨೬. ಎನ್ನಂಗ ಮನ ಪ್ರಾಣ ತ್ರಿವಿಧದಲ್ಲಿ ತ್ರಿವಿಧದ ಲಿಂಗ ಸನ್ನಿಹಿತವೆಂದರೆ ಗುರು ಸಂಬಂಧದಿಂದಾದ ಇಷ್ಟಲಿಂಗ, ಲಿಂಗ ಸಂಬಂಧದಿಂದಾದ ಪ್ರಾಣಲಿಂಗ, ಜಂಗಮ ಸಂಬಂಧದಿಂದಾದ ತೃಪ್ತಿಲಿಂಗ. ತನುವಿನ ಕೈಯ್ಯಲ್ಲಿ ಇಷ್ಟಲಿಂಗ, ಮನದ ಕೈಯ್ಯಲ್ಲಿ ಪ್ರಾಣಲಿಂಗ, ಪ್ರಾಣನ ಕೈಯ್ಯಲ್ಲಿ ತೃಪ್ತಿಲಿಂಗ. ಇಂತು ಅಂತರಂಗ ಬಹಿರಂಗಾತ್ಮ ಸಂಗದಿಂದ ತೆರಹಿಲ್ಲದಿಪ್ಪ ಗುರುಲಿಂಗಜಂಗಮ ತ್ರಿವಿಧ ಸಾರಾಯ ಸಂಪತ್ತು ಸೌರಾಷ್ಟ್ರ ಸೋಮೇಶ್ವರಾ ನೀನೊಲಿದ ಶರಣಂಗೆ.

೧೨೭. ಪೃಥ್ವಿಯ ಕೂಡಿ ನೆಲನಹನಲ್ಲ. ಅಪ್ಪುವ ಕೂಡಿ ಜಲವಹನಲ್ಲ. ಅಗ್ನಿಯ ಕೂಡಿ ಕಿಚ್ಚಹನಲ್ಲ. ವಾಯುವ ಕೂಡಿ ಗಾಳಿಯಹ

ನಲ್ಲ. ಆಕಾಶವ ಕೂಡಿ ಬಯಲಹನಲ್ಲ. ಆತ್ಮನ ಕೂಡಿ ಭವ ಕರ್ಮಿಯಲ್ಲ. ಲಿಂಗವ ಕೂಡಿ ಲಿಂಗವಹ ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣ.

೧೨೮. ಕುಂಜರನ ಪಂಜರವೆ ಸಂಜೀವನವಾದವರೆಲ್ಲರು ಭಕ್ತರೆಂತಪ್ಪರಯ್ಯ? ಮುಪ್ಪುರದಲ್ಲಿ ಮುಳುಗಿದವರೆಲ್ಲರು ಯುಕ್ತರೆಂತಪ್ಪರಯ್ಯ? ಭೂತ ಭವಿಷ್ಯದ್ವರ್ತಮಾನಕ್ಕೆ ಸಿಲುಕಿದವರೆಲ್ಲರು ವಿರಕ್ತರೆಂತಪ್ಪರಯ್ಯ? ಇಂತಪ್ಪವರು ನಮ್ಮ ಸೌರಾಷ್ಟ್ರ ಸೋಮೇಶ್ವರ ಲಿಂಗಕ್ಕೆ ಸಲ್ಲದೆ ಹೋದರು.

೧೨೯. ಮಾತ ಕಲಿತು ಮಂಡೆಯ ಬೋಳಿಸಿ ವೇಷ ಭಾಷೆಗಳಿಂ ದೇಶ ಕೋಶ ಭುವನಂಗಳಂ ತೊಳಲಿ ಬಳಲಿ ನಿಂದರೇನಾಯಿತೊ? ಜಟಾಬಂಧದಿಂ ಗಡ್ಡದ ಹಿರಿಯರಪ್ಪ ಭೋ ನಾ ಎಂದು ಬಿಂದು ಪೊಸರು ಹೋಗದಿದ್ದರೇನಾಯಿತೊ? ಹೆಚ್ಚು ಕುಂದು ಬಿಚ್ಚದನ್ನಕ್ಕ ತಥ್ಯ ಮಿಥ್ಯ ರಾಗ ದ್ವೇಷ ಭಯ ಮೋಹಂಗಳುಳ್ಳನ್ನಕ್ಕ ಸೌರಾಷ್ಟ್ರ ಸೋಮೇಶ್ವರವೆಂತು ಸಾಧ್ಯವಪ್ಪುದಯ್ಯ.

೧೩೦. ಅಂದಿನವರು ಇಂದಿನವರೆಂಬ ಸಂದೇಹಿಗಳಿಗೆ ಸಂದೇಹ ಮುಂದುಗೊಂಡಿಪ್ಪುದು ನೋಡಾ! ಅಂದೊಂದು ಪರಿ ಇಂದೊಂದು ಪರಿಯೆ ಗುರುಲಿಂಗಜಂಗಮು? ಅಂದೊಂದು ಪರಿ ಇಂದೊಂದು ಪರಿಯೆ ಪಾದೋದಕ ಪ್ರಸಾದ? ಅಂದೊಂದು ಪರಿ ಇಂದೊಂದು ಪರಿಯೆ ಶರಣ ಲಿಂಗ ಸಂಬಂಧ? ಅಂದೊಂದು ಪರಿ ಇಂದೊಂದು ಪರಿಯೆ ಅರಿವು ಆಚರಣೆ? ಅಂದೊಂದು ಪರಿ ಇಂದೊಂದು ಪರಿಯೆ ಸ್ಥಲಕುಳಂಗಳು? ಅಂದೊಂದು ಪರಿ ಇಂದೊಂದು ಪರಿಯೆ ಸೌರಾಷ್ಟ್ರ ಸೋಮೇಶ್ವರ ಲಿಂಗವು?

೧೩೧. ಕೃತಯುಗ ಮೂವತ್ತುನಾಲ್ಕುಲಕ್ಷ ಐವತ್ತಾರುಸಾವಿರ ವರುಷದಲ್ಲಿ ಕೇದಾರ ದೇವರು ಮೂಲಸ್ಥಾನ. ತ್ರೇತಾಯುಗ ಹದಿನೇಳು ಲಕ್ಷ ಇಪ್ಪತ್ತೆಂಟು ಸಾವಿರ ವರುಷದಲ್ಲಿ ಸೇತು ರಾಮೇಶ್ವರ ದೇವರು ಮೂಲಸ್ಥಾನ. ದ್ವಾಪರಯುಗ ಎಂಟು ಲಕ್ಷ ಅರುವತ್ತುನಾಲ್ಕು ಸಾವಿರ ವರುಷದಲ್ಲಿ ಸೌರಾಷ್ಟ್ರ ಸೋಮೇಶ್ವರ ದೇವರು ಮೂಲಸ್ಥಾನ. ಕಲಿಯುಗ ನಾಲ್ಕುಲಕ್ಷ ಮೂವತ್ತೆರಡು ಸಾವಿರ ವರುಷದಲ್ಲಿ ಶ್ರೀಗಿರಿ ಮಲ್ಲಿಕಾರ್ಜುನ ದೇವರು ಮೂಲಸ್ಥಾನ. ಇದು ಕಾರಣ ಕೂಡಲಚನ್ನಸಂಗಯ್ಯ ನಿಮ್ಮ ಸಾಕ್ಷಿಯಾಗಿ ಭಕ್ತರಿಗೆ ಜಂಗಮವೆ ಮೂಲಸ್ಥಾನವಯ್ಯಾ.



೧೩೨. ಸುಳಿದೊಡೆ ಒಡಲಿಲ್ಲ, ನಿಂದಡೆ ನೆಳಲಿಲ್ಲ, ನಡೆದಡೆ ಗಮನವಿಲ್ಲ, ನುಡಿವಡೆ ಶಬ್ದವಿಲ್ಲ, ದಗ್ಧಪಟ ನ್ಯಾಯದಂತೆ. ಉಂಡಡೆ ಉಪಾಧಿ ಇಲ್ಲ, ಉಣದಿರ್ದಡೆ ಕಾಂಕ್ಷೆ ಇಲ್ಲ, ಯಥಾ ಲಾಭ ಸಂತುಷ್ಟನಾಗಿ. ಸ್ತುತಿ ಇಲ್ಲ, ನಿಂದೆ ಇಲ್ಲ, ನೆಂಟರಿಲ್ಲ, ಹಗೆ ಇಲ್ಲ, ಅರುಹು ಇಲ್ಲ, ಮರಹು ಇಲ್ಲ, ತಾನೆಂಬ ನೆನಹಿಲ್ಲಾಗಿ. ಇದಕ್ಕೆ ಶೃತಿ "ಯತ್ಪ್ರಾಣ ಲಿಂಗಸಂಧಾನಂ ತಲ್ಲಿಂಗಂ ಪ್ರಾಣಸಂಯುಕ್ತಂ। ಪ್ರಾಣಲಿಂಗದ್ವಯೋರ್ಭೇದಂ ನ ಭೇದಂ ನ ಚ ಸಂಶಯಃ॥ ದಗ್ಧಾಂಬರಂಗ ಕರ್ಮಸ್ಯ ಇಂದ್ರಿಯಾ ಮನಸಾ ವಚಃ। ಭಾವ ಸದ್ಭಾವ ನಿರ್ವಾಣಂ ಯತ್ಪರಾತ್ಪರಲೀಯತೆ॥" ಇಂತೆಂದುದಾಗಿ ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣರು ಲಿಂಗಪ್ರಾಣಿಗಳಾಗಿ ಒಡಲ ಮರೆಗೊಂಡು ಎಂತಿರ್ದೊಡಂ ಎಂತು ನಡೆದೊಡಂ ಅಂತೆ ಸಂದಾ.

೧೩೩. ಹರಣವಿದ್ದೂ ಹರಣವಿಲ್ಲ, ಹರಣ ಲಿಂಗದಲ್ಲಿ ನಿರಿಯಾಣವಾಯಿತ್ತಾಗಿ. ಮನವಿದ್ದೂ ಮನವಿಲ್ಲ, ಮನವು ಮಹದಲ್ಲಿ ಲೀಯವನೆಯ್ದಿತ್ತಾಗಿ. ಜೀವವಿದ್ದೂ ಜೀವವಿಲ್ಲ, ಜೀವ ಸಜ್ಜೀವವಾಯಿತ್ತಾಗಿ. ಭಾವವಿದ್ದೂ ಭಾವವಿಲ್ಲ, ಭಾವ ನಿರ್ಭಾವವಾಯಿತ್ತಾಗಿ. ಕರಣಂಗಳಿದ್ದೂ ಕರಣಂಗಳಲ್ಲ, ಕರಣಂಗಳಲ್ಲಿ ಕರಣಂಗಳಾಗಿ. ಇಂತೀ ಸರ್ವವು ಇದ್ದೂ ಸರ್ವವು ಇಲ್ಲದ ಕಾರಣ ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣರು ಉಂಡು ಉಪವಾಸಿಗಳು ಬಳಸಿ ಬ್ರಹ್ಮಚಾರಿಗಳು.

# ಐಕ್ಯಸ್ಥಲ.

೧೩೪. ಗತಿಗೆಟ್ಟ ಮತಿಯ ಹಂಗ ಮರೆದು ಕಾಮಿಸಿ ಕಲ್ಪಿಸಿ ಭಾವಿಸುವ ಭಂಗ ಹಿಂಗಿ, ಭಾವ ಕಲ್ಪನೆಯ ಮೀರಿ, ಭಾವಭೇದವ ಳಿದು ನಿರ್ಭಾವ ಪದದಲ್ಲಿ ನಿಂದುದು ಸೌರಾಷ್ಟ್ರ ಸೋಮೇಶ್ವರ ಲಿಂಗದಲ್ಲಿ.

೧೩೫. ಕಣ್ಣು ತನ್ನ ಕಾಣಲರಿಯದಂತೆ, ಹಣ್ಣು ತನ್ನ ರುಚಿಯ ತಾನರಿಯದಂತೆ, ಲಿಂಗೈಕ್ಯ ತನ್ನೊಳಗಣ ಲಿಂಗವ ತಾನರಿಯದಂತೆ, ನಾ ಸತ್ತೆನೆಂಬ ಹೆಣವಿಲ್ಲವಾಗಿ ತನ್ನ ಮರೆದು ಲಿಂಗವ ಮರೆದ ಲಿಂಗೈಕ್ಯರು ಸೌರಾಷ್ಟ್ರ ಸೋಮೇಶ್ವರನಲ್ಲಿ ಅನುಭಾವವ ಮಾಡಲಿಲ್ಲ. ನುಡಿದು ಹೇಳ ಲಿಲ್ಲ. ನಡೆದು ತೋರಲಿಲ್ಲ.

೧೩೬. ಜ್ಞಾನ ಕಾಯಂಗೆ ಬರು ಕಾಯವಿಲ್ಲ, ಅರಿವಿನ ಮುಂದಣ ಕುರುಹು ಅರಿವನವಗ್ರಹಿಸಿ ಜ್ಞಾನ ನಿಃಪತ್ತಿಯಾಯಿತ್ತು, ಸೌರಾಷ್ಟ್ರ ಸೋಮೇ ಶ್ವರಲಿಂಗವೆಂಬ ಕುರುಹು ಮರೆದ ಕಾರಣ ನಿಃಶೂನ್ಯ ನಿರ್ಗಮನವಾ ಯಿತ್ತು.

೧೩೭. ಅಯ್ಯ ಅರಿವನರಿತು, ಅರಿವ ತಿಳಿದು, ಮರಹ ಮರೆದು, ಮರಹನಳಿದು, ಕುರುಹೆಂದು ಹೇಳಹೆಸರಿಲ್ಲದೆ, ಗುರುಲಿಂಗಜಂಗಮ ತ್ರಿವಿಧ ಒಂದಾದ ಎಡೆಯ ತೋರಿಸಿ ಬದುಕಿಸಾ ಸೌರಾಷ್ಟ್ರ ಸೋಮೇ ಶ್ವರಾ ನಿಮ್ಮ ಧರ್ಮ ನಿಮ್ಮ ಧರ್ಮ.

೧೩೮. ಅಯ್ಯಾ ಅರಿವನರಿದು, ಮರಹು ಅರತು, ಕುರುಹಳಿದು ನಿರುಗೆ ಗಂಡು ಬೆರಗುವಡೆದು, ಹೃದಯಾಕಾಶದ ಬಟ್ಟ ಬಯಲೊ ಳಗೆ ಭರಿತವಾಗಿರ್ದ ಮಹಾ ಶರಣರ ತೋರಿ ಬದುಕಿಸಾ ಎನ್ನ ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಧರ್ಮ ನಿಮ್ಮ ಧರ್ಮ.

೧೩೯. ಚತುರ್ದಶ ಭುವನವನಗ್ನಿ ಕೊಂಡೊಡೆ ಇದ ಕಂಡು ಬೆರಗಾದೆ. ನವ ಖಂಡ ಪೃಥ್ವಿಯನಗ್ನಿ ಕೊಂಡರೆ ಇದ ಕಂಡು ಬೆರ ಗಾದೆ. ಪಂಚಾಶತ್ ಕೋಟಿ ವಿಸ್ತೀರ್ಣವನಗ್ನಿ ಕೊಂಡರೆ ಇದ ಕಂಡು ಬೆರಗಾದೆ. ಸೌರಾಷ್ಟ್ರ ಸೋಮೇಶ್ವರ ಲಿಂಗವನಗ್ನಿ ಕೊಂಡರೆ ಇದ ಕಂಡು ಬೆರಗಾದೆ.

೧೪೦. ಅರಿವೆ ತಾನಾಗಿ ತೊಳ ತೊಳಗಿ ಬೆಳಗುತ್ತಿಪ್ಪ ಲಿಂಗೈಕ್ಯ ನಿಂದಡೆ, ಚಾವನ್ನದೊಳಗಿಪ್ಪ ಸುಗಂಧದಂತೆ, ಮಾಣಿಕ್ಯದೊಳಗಿಪ್ಪ ಸುರಂ ಗಿನಂತೆ, ಚಿನ್ನದೊಳಗಿಪ್ಪ ಬಣ್ಣದಂತೆ, ಭೇದವಿಲ್ಲದಚಲನಯ್ಯ. ಸಂಪಿ ಗೆಯ ಕಂಪುಂಡ ಭ್ರಮರನಂತೆ, ಸೌರಾಷ್ಟ್ರ ಸೋಮೇಶ್ವರ ಲಿಂಗದ ಪರಮ ಸುಖದೊಳು ಪರವಶವಾದ ಲಿಂಗೈಕ್ಯ.

೧೪೧. ಸುಜ್ಞಾನಾನುಭಾವದಿಂದ ಭವಿ ಭವವಳಿದುಳಿದ ಶೇಷನು ನಿರ್ಮಲ ನಿರ್ಮಯನಾಗಿ, ಸದ್ಗುರು ಪರಶಿವಾನುಗ್ರಹ ಪ್ರಸಾದವ ಪಡೆದು ನೆನಹಳಿದುಳಿದ ಶೇಷ ಅರಿವಿನ ಸುಖದ ಸವಿಯಲಿ ಮೈಮರೆದ ಘನ ಪರಿಣಾಮ ನಿಜ ನಿಂದ ಶೇಷನು ಸೌರಾಷ್ಟ್ರ ಸೋಮೇಶ್ವರ ಲಿಂಗೈಕ್ಯದ ನುಪಮ ಶೇಷ ಪರತತ್ವವ ಬೆರಸಿ ನಿಂದಿತ್ತು.

೧೪೨. ಮಧ್ಯ ನಿರಾಳದಲ್ಲಿ ನಿಂದು ಊರ್ಧ್ವ ನಿರಾಳವನೈದಿದಲ್ಲಿ ಕಾಣಲಾಯಿತ್ತು ಒಂದು ಪುತ್ಥಳಿ. ಮೂರು ಬೆಳಗಿನ ಮಧ್ಯದಲ್ಲಿ ಬೇರೊಂದು ಬೆಳಗು ಮೀರಿ ತೋರುತ್ತಿದೆ. ಈ ಪುತ್ಥಳಿ ವಜ್ರದ ವೈಡೂಡಿಗೆಯ ತೊಟ್ಟ ಸೌರಾಷ್ಟ್ರ ಸೋಮೇಶ್ವರ ಲಿಂಗದಲ್ಲಿ ಅವಿರಳನಾಯಿತ್ತು.

೧೪೩. ಏಕಾಕಾರ ಲೋಕಾಕಾರ ನೀನೆಯಾಗಿ ತೋರ್ಪೆಯಯ್ಯ ಸದ್ಭಾವಿಗಳಿಗೆ. ಏಕಾಕಾರವೆ ಹುಸಿ ಲೋಕಾಕಾರವೆ ದಿಟವಾಗಿ ತೋರ್ಪೆ ಯಯ್ಯ ಭಾವ ಭ್ರಮಿತರಿಗೆ. ಏಕಾಕಾರ ಲೋಕಾಕಾರ ಸರ್ವಾಕಾರ ವಾಗಿ ತೋರ್ಪೆಯಯ್ಯ ನಿರ್ಭಾವರಿಗೆ. ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ನಿಜದಾಕಾರವಾಗಿಪ್ಪಿರಯ್ಯ ಭಾವವೈಕ್ಯವಾದ ಮಹಾಂತರಿಗೆ.

೧೪೪. ನೀರ ಮೇಲೊಂದು ನೆಟ್ಟ ಕಂಭವಿದ್ದಿತ್ತು. ಆ ಕಂಭದ ತುದಿಯಲಿ ದೇಗುಲವಿದ್ದಿತ್ತು. ದೇಗುಲದ ಕೊನೆಯಲ್ಲಿ ದೇವರಿದ್ದಿತ್ತು. ದೇವರ ದೇಗುಲವ ಆರಿದ ತಲೆ ನುಂಗಿತ್ತು. ಸೌರಾಷ್ಟ್ರ ಸೋಮೇಶ್ವರಾ ಇದೇನು ಚೋದ್ಯವೊ?

೧೪೫. ಅಂಗದ ಮೇಲೆ ಸಾಕಾರವಿಡಿದು ಮಂತ್ರಾಹ್ವಾನಂಗಳಿಂದ ಅಷ್ಟವಿಧಾರ್ಚನೆ ಷೋಡಶೋಪಚಾರಂಗಳಲ್ಲಿ ವ್ಯಾಪಿಸಿಕೊಂಡಿಪ್ಪುದೀಗ ಇಷ್ಟಲಿಂಗ. ಆ ಇಷ್ಟಲಿಂಗಕ್ಕೆ ಆಶ್ರಯವಾಗಿ ಚತುರ್ದಶ ಇಂದ್ರಿಯಂಗ ಳಲ್ಲಿ ತನ್ಮುಖವಾಗಿ ಸರ್ವೇಂದ್ರಿಯಂಗಳಿಗೆ ಚೈತನ್ಯವಾಗಿ ಪ್ರಾಣದಲ್ಲಿ ಪರಿ ಪೂರ್ಣವಾಗಿಪ್ಪುದೀಗ ಪ್ರಾಣಲಿಂಗ. ಆ ಪ್ರಾಣಲಿಂಗಕ್ಕೆ ಆದಿಯಾಗಿ ಭಾವ

ಭ್ರಮೆಗಳು ನಷ್ಟವಾಗಿ ಅನುಭಾವದಲ್ಲಿ ಲೀನವಾಗಿ ಭಾವ ಸದ್ಭಾವ ನಿರ್ಭಾವಂಗಳಲ್ಲಿ ಭರಿತನಾಗಿ ಭಾವ ಬ್ರಹ್ಮವೆಂಬ ಭೇದವಿಲ್ಲದೆ ಸನ್ನಿಹಿತಭಾವದಿಂದಿಪ್ಪುದೀಗ ಭಾವಲಿಂಗ. ಇಂತೀ ಮೂರು ಲಿಂಗದ ಮೂಲ ಆರು ಲಿಂಗದ ಅಂತ್ಯವನೊಳಕೊಂಡು ಮಾರ್ಗ ಕ್ರಿ ನಿಃಕ್ರಿಯಾಗಿ ಧ್ಯಾನ ನಷ್ಟವಾಗಿ ಮಂತ್ರ ಗೋಪ್ಯವಾಗಿ ಜ್ಞಾನ ಶೂನ್ಯವಾಗಿ, ಭಾವ ದಿಗಂಬರವಾಗಿ ಘನಕ್ಕೆ ಘನವಾದ ಪರಬ್ರಹ್ಮವು ತಾನೆ ಸೌರಾಷ್ಟ್ರ ಸೋಮೇಶ್ವರ.

೧೪೬. ಘಟಾಕಾಶ, ಮಠಾಕಾಶ, ಬಿಂದ್ವಾಕಾಶ, ಭಿನ್ನಾಕಾಶ, ನಿಜಾಕಾಶ, ಚೇತನಾತ್ಮ, ಚೈತನ್ಯವೆಂದೊಂದನರಿತಲ್ಲರಿತು ಮರೆ ಮಾಡಿ ಹುಸಿ ಎಂಬ ಪರಿಯ ನೋಡಾ. ಗರುಡಿ ಚೋರನಂತೆ ಘಟಾಕಾಶ ಘಟವಿದ್ದಲ್ಲಿದ್ದು, ಘಟವಳಿದಲ್ಲಿ ಘಟಾಕಾಶವಳಿಯದಂತೆ, ಮಠಾಕಾಶ ಮಠವಿದ್ದಲ್ಲಿದ್ದು, ಮಠ ಬಿಚ್ಚಿದಲ್ಲಿ ಮಠಾಕಾಶ ಬಿಚ್ಚದಂತೆ, ಬಿಂದ್ವಾಕಾಶ ಬಿಂದುವಿದ್ದಲ್ಲಿದ್ದು ಬಿಂದುವಳಿದಲ್ಲಿ ಬಿಂದ್ವಾಕಾಶವಳಿಯದಂತೆ, ಭಿನ್ನಾಕಾಶ ಪೃಥ್ವಿ ಇದ್ದಲ್ಲಿದ್ದು, ಪೃಥ್ವಿ ಅಳಿದಲ್ಲಿ ಭಿನ್ನಾಕಾಶವಳಿಯದಂತೆ, ಮಹದಾಕಾಶವೆ ನಿಜದಾಕಾಶ ನಿರ್ಧರ ವಾಹಂಗೆ ಇದೆ ಆತ್ಮನ ಮರ್ಮ ನೋಡಾ. ಆದಿ ಅನಾದಿ ಇಲ್ಲದಂದು, ನಾದಬಿಂದು ಕಳೆನೊಳೆದೋರದಂದು, ಇದೊಂದೆಂದರಿತು, ಉಂಟಿಲ್ಲವೆಂಬ ಗೆಲ್ಲಸೋಲಿನ ಮಾತಿನ ಮಾಲೆಯ ತೊಡಿಗೆಯಳಿದಂದು ಸೌರಾಷ್ಟ್ರ ಸೋಮೇಶ್ವರ ಲಿಂಗದಲ್ಲಿ ಆನೆಂಬುದು ನೀನೆಂಬುದು ಒಂದೆ ಕಾಣಾ ಮಲ್ಲಿಕಾರ್ಜುನಾ.

೧೪೭. ಕುಂಡಲಿಯ ಮುಖದಲ್ಲಿ ಪ್ರಾಣ ನಿವಾಸಿಯಾಗಿಪ್ಪ ಪಶ್ಚಿಮ ದ್ವಾರದ ಬ್ರಹ್ಮ ವಿಷ್ಣು ರುದ್ರರ ಅಧೋನಾಳ ಮಧ್ಯನಾಳ ಊರ್ಧ್ವನಾಳಮಂ ಕಳೆದು ಶೂನ್ಯಸ್ಥಾನದ ಹೂವಿನ ಪರಿಮಳದ ಚಿತ್ಪಾದಾಂಬುವಂ ಧರಿಸಿ ಮನವಂಗವಾಗಿ ಪ್ರಾಣಲಿಂಗವೆಂಬ ಸಂದು ನಷ್ಟವಾದಿರವ ಸೌರಾಷ್ಟ್ರ ಸೋಮೇಶ್ವರ ನಿಮ್ಮ ಶರಣನೆ ಬಲ್ಲ.

೧೪೮. ಸ್ಫಟಿಕದ ಘಟದೊಳಗಣ ಜ್ಯೋತಿಯಂತೆ, ಒಳ ಹೊರಗೆ ನೋಡುವಡೆ ಕಾಣಬರುತ್ತಿದೆ. ನುಡಿಸುವಂತಹದಲ್ಲ, ಸಾರೆ ಇದ್ದಿಹುದು. ಮುಟ್ಟುವಡೆ ಕೈಗೆ ಸಿಲುಕದು. ಶಾಸ್ತ್ರ ಸಂಬಂಧದ ಕಲಿಕೆಯೊಳಗಲ್ಲ. ವ್ಯಕ್ತಾವ್ಯಕ್ತವನೊಳಕೊಂಡು ಬಯಲ ಸಮಾಧಿಯಲ್ಲಿ ಸಿಲುಕಿತ್ತು ಸೌರಾಷ್ಟ್ರ ಸೋಮೇಶ್ವರಲಿಂಗವೆ ತಾನಾಗಿ.

ಬೆಳಗಾವಿ ೧೦



೧೪೯. ಹುಟ್ಟು ಹೊಂದುಗೆಟ್ಟುದೆ ನಿರ್ವಾಣ. ಮಲ ಮಾಯಾ ಕರ್ಮಂಗಳ ಸುಳಿದುದೆ ನಿರ್ವಾಣ. ಶೋಕ ಮೋಹ ನಷ್ಟವಾದುದೆ ನಿರ್ವಾಣ. ಇಹಪರದಿಚ್ಛೆ ಹಿಂಗುವುದೆ ನಿರ್ವಾಣ. ಇಂತಪ್ಪ ನಿರ್ವಾಣ ಸದ್ಯೋನ್ಮುಕ್ತಿ ಸೌರಾಷ್ಟ್ರ ಸೋಮೇಶ್ವರಾ.

೧೫೦. ಸಕಲೇಂದ್ರಿಯಂಗಳಲ್ಲಿ ವಿಕಾರಿಸುವ ಮನವ ಸೆಳೆದು ನಿಂದಾತ ಸುಖಿ. ಪಂಚೇಂದ್ರಿಯಂಗಳಿಚ್ಛೆಯಲ್ಲಿ ಕೀಳು ಮನಂಗೊಂಡು ಸುಳಿವಾತ ದುಃಖಿ. ಮನಸ್ಸು ಬಹಿರ್ಮುಖವಾಗಲು ಮಾಯಾ ಪ್ರಪಂಚಿ. ಮನವಂತರ್ಮುಖವಾದರೆ ಅವಿರಳ ಜ್ಞಾನಿ. ಮನವು ಮಹದಲ್ಲಿ ನಿಂದಿರಲಾತ ಮುಕ್ತನು. ಮನೋಲ್ಲಯವಾದರೆ ಸೌರಾಷ್ಟ್ರ ಸೋಮೇಶ್ವರ ಲಿಂಗದಲ್ಲಿ ಅಭೇದ್ಯನು.

೧೫೧. ಹೆಚ್ಚದು, ಕುಂದದು, ಮುಚ್ಚದು, ಬೆಚ್ಚದು, ಬಾರದು, ಬಕ್ಕದು, ಕಂದದು, ಕುಂದದು, ಕರಗದು, ಕೊರಗದು. ಎನ್ನ ನಿರ್ಭಾವಾರ್ಚನೆ, ಸೌರಾಷ್ಟ್ರ ಸೋಮೇಶ್ವರಲಿಂಗದೊಡಗೂಡಿ ತಾನೆನ್ನದಿದಿರೆನ್ನದೇನೂ ಎನ್ನದು.

ಸಂಪೂರ್ಣ.

ಲಿಂಗಾಯತ ಸಂಶೋಧನ ಕೇಂದ್ರ ಗ್ರಂಥಾಲಯ
ಅರಿವೇ ಗುರು
ಕ್ರಮಾಂಕ 544
ಶಿವಬಸವ ನಗರ
ಬೆಳಗಾವಿ ೧೦

ನಾಗನೂರ ಶ್ರೀ ರುದ್ರಾಕ್ಷಿಮಠ ಗ್ರಂಥಾಲಯ
ಕ್ರಮಾಂಕ 820/544
ಶಿವಬಸವ ನಗರ
ಬೆಳಗಾವಿ ೧೦